'ದಶಕಗಳ ಹಿಂದೆ 20 ರಿಂದ 30 ಅಡಿಗೆ ನೀರು ಸಿಗುತ್ತಿತ್ತು. ಕೋಲಾರದಲ್ಲಿ ಇಂದು ಎರಡು ಸಾವಿರ ಅಡಿ ಆಳ ಕೊರೆದರೂ ನೀರು ಸಿಗುತ್ತಿಲ್ಲ. ಅಷ್ಟು ಆಳದಲ್ಲಿ ನೀರು ಸಿಕ್ಕರೂ ಅದು ಶುದ್ಧವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಕೃಷಿ ಕ್ಷೇತ್ರ ವಿಸ್ತರಣೆ ಆಗುತ್ತಿಲ್ಲ. ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ ಪ್ರವಾಸ ಮಾಡಿದ ಸಂದರ್ಭದಲ್ಲಿ ಶೇ90ರಷ್ಟು ಜೌಗು ಪ್ರದೇಶವನ್ನು ಪಾಳು ಬಿಡಲಾಗಿತ್ತು. ಈ ಬಗ್ಗೆ ಕಾರಣ ಕೇಳಿದರೆ ಉತ್ಪಾದನೆಗಿಂತ ಖರ್ಚು ಹೆಚ್ಚು ಎಂಬ ಉತ್ತರ ಬಂತು' ಎಂದು ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅ.ನ. ಯಲ್ಲಪ್ಪ ರೆಡ್ಡಿ ಅವರ 'ಮೇದಿನಿ ಜೊತೆ ನನ್ನ ಕಥೆ' ಕೃತಿಯನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ ದಾಸ್ ಅವರು ಲೋಕಾರ್ಪಣೆಗೊಳಿಸಿದರು. ವಿಜ್ಞಾನ ಲೇಖಕ ನಾಗೇಶ ಹೆಗಡೆ, ಪತ್ರಕರ್ತ ರಂಗನಾಥ ಭಾರದ್ವಾಜ್, ಎನ್‌ಇ.ಎಸ್ ನ ಕಾರ್ಯದರ್ಶಿ ವೆಂಕಟಶಿವ ರೆಡ್ಡಿ ಇದ್ದಾರೆ ಪ್ರಜಾವಾಣಿ ಚಿತ್ರ

'ಯಲ್ಲಪ್ಪ ರೆಡ್ಡಿ ಅವರು ಪುಸ್ತಕದಲ್ಲಿ ಮೂರು, ನಾಲ್ಕು ಅನುಭವ ಮಾತ್ರ ಬರೆದಿದ್ದಾರೆ. ಅವರ ಎಲ್ಲಾ ಬರಹಗಳು ಕೃತಿಯಾಗಿ ಪ್ರಕಟವಾಗಬೇಕು. ಇದು ಮುಂದಿನ ಪೀಳಿಗೆಗಾಗಿ ಅಗತ್ಯವಾಗಿ ಬೇಕಿದೆ' ಎಂದರು.

ವಿಜ್ಞಾನ ಲೇಖಕ ನಾಗೇಶ ಹೆಗಡೆ ಮಾತನಾಡಿ, 'ದೇಶ ಸಮೃದ್ಧವಾಗಿರ-ಬೇಕಾದರೆ ಅರಣ್ಯ ಪ್ರದೇಶ ಇರಬೇಕು' ಎಂದರು.

ಶಿಕ್ಷಣ ತಜ್ಞ ಡಾ.ಚಂದನ್ ಗೌಡ, ಎನ್‌ಇಎಸ್ ಕಾರ್ಯದರ್ಶಿ ವೆಂಕಟ ಶಿವರೆಡ್ಡಿ, ಪತ್ರಕರ್ತ ರಂಗನಾಥ ಭಾರದ್ವಾಜ್, ಕೃಷಿ ಭಾರತ್ ಫೌಂಡೇಷನ್ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ರವೀಂದ್ರ, ಜನ ಪ್ರಕಾಶನದ ಬಿ.ರಾಜಶೇ-ಖರಮೂರ್ತಿ, ಕೃತಿಯ ಸಂಪಾದಕರಾದ ಎಂ.ಆರ್.ರಕ್ಷಿತ್, ಸುಚರಿತ ಎಂ.ಚಂದ್ರ, ನಿರಂಜನ ಪರಾಂಜಪೆ ಹಾಗೂ ಮಾಯಾಚಂದ್ರ ಹಾಜರಿದ್ದರು.

ವಿರೋಧ

ಕೆ.ಆರ್.ಎಸ್ ಅಣೆಕಟ್ಟೆ ಸಮೀಪ ರಾಜ್ಯ ಸರ್ಕಾರ 'ಅಮ್ಯೂಸ್‌ಮೆಂಟ್ ಪಾರ್ಕ್' ಮಾಡುತ್ತಿರುವುದು ಸರಿಯಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಅಣೆಕಟ್ಟೆಗೆ ತೊಂದರೆ ಆಗಬಾರದು' ಎಂದು ರೈತ ನಾಯಕಿ ಸುನಂದಾ ಜಯರಾಂ ತಿಳಿಸಿದರು.

'ಈ ಪಾರ್ಕ್ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿ ಅನುಮತಿ ಪಡೆದಿಲ್ಲ. ಜನರ ಅಭಿಪ್ರಾಯ ಸಹ ಸಂಗ್ರಹಿಸಿಲ್ಲ. ಈ ಬಗ್ಗೆ ನಿಯೋಗ ತೆರಳಿ ರಾಜ್ಯಪಾಲರಿಗೂ ಮನವಿ ಸಲ್ಲಿ-ಸಲಾಗುವುದು' ಎಂದು ಅವರು ಹೇಳಿದರು.

120 ವರ್ಷದ ಅಣೆಕಟ್ಟೆ ಉಳಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಪಾರ್ಕ್‌ಗೆ ₹2,663 ಕೋಟಿ ವ್ಯಯ ಮಾಡಲಾಗುತ್ತಿದೆ. ಈ ಯೋಜನೆಗೆ ಆರು ಪಂಚಾಯಿತಿಗಳು ವಿರೋಧ ವ್ಯಕ್ತಪಡಿಸಿ ನಿರ್ಣಯ ಕೈಗೊಂಡಿವೆ ಎಂದರು.

ಹೊಸಕೋಟೆ: ದರ್ಶನ್ ಬಿಡುಗಡೆಗೆ ಪೂಜೆ

ಹೊಸಕೋಟೆ: ನಟ ದರ್ಶನ್ ಶೀಘ್ರ ಬಿಡುಗಡೆಯಾಗಬೇಕೆಂದು ಇಲ್ಲಿನ ವಾರ್ಡ್ ನಂ.7ರ ಸಿದ್ಧಾರ್ಥ ನಗರದಲ್ಲಿ ಅಖಿರಥ ಗೆಳೆಯರ ಬಳಗ ಸ್ಥಾಪಿಸಿದ್ದ ಗಣೇಶ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ನಟ ದರ್ಶನ್ ಅವರು ಆರೋಪ ಮುಕ್ತರಾಗಿ ಶೀಘ್ರವಾಗಿ ಬಿಡುಗಡೆಯಾಗಲಿ ಎಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಗೌರಿ ಮೂರ್ತಿಯ ಕೆಳಭಾಗದಲ್ಲಿ ದರ್ಶನ್ ಭಾವಚಿತ್ರವಿಟ್ಟು ಪಲ್ಲಕ್ಕಿ ಮೆರವಣಿಗೆ ಮಾಡಲಾಯಿತು.

ಪೌರ ಕಾರ್ಮಿಕರ ಸೇವೆ ಕಾಯಂಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ಪಾವತಿ ಪೌರ ಕಾರ್ಮಿಕರು, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಲೋಡರ್ಸ್, ವಾಹನ ಚಾಲಕರು ಸೇರಿದಂತೆ ಸ್ವಚ್ಛತಾ ಕಾರ್ಮಿಕರ ಸೇವೆಯನ್ನು ಸೆಪ್ಟೆಂಬರ್ 23ರೊಳಗೆ (ಪೌರಕಾರ್ಮಿಕರ ದಿನಾಚರಣೆ) ಕಾಯಂಗೊಳಿಸಬೇಕು ಎಂದು ಸಫಾಯಿ ಕರ್ಮಚಾರಿ ಕಾವಲು ಸಮಿತಿ ಆಗ್ರಹಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಸಂಚಾಲಕ ಕೆ.ಬಿ. ಓಬಳೇಶ, 'ಕಾಂಗ್ರೆಸ್ ನೇತೃತ್ವದ ಸರ್ಕಾರ 2017ರಲ್ಲಿ 10 ಸಾವಿರ ಪೌರ ಕಾರ್ಮಿಕರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಅದೇ ರೀತಿ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ-ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ಪಾವತಿ ಪೌರ ಕಾರ್ಮಿಕರನ್ನು ನೇರ ನೇಮಕಾತಿ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಎಲ್ಲ ಪೌರ ಕಾರ್ಮಿಕರನ್ನು ಗುತ್ತಿಗೆ ಪದ್ಧತಿಯಿಂದ ಮುಕ್ತಿಗೊಳಿ-ಸಬೇಕು. ಕಾಯಂ ಪೌರ ಕಾರ್ಮಿಕರಿಗೆ ಮಾತ್ರ ಗೃಹ ಭಾಗ್ಯ ಯೋಜನೆ ಅನ್ವಯವಾಗುತ್ತಿದೆ. ಇದನ್ನು ಎಲ್ಲ ಪೌರ ಕಾರ್ಮಿಕರಿಗೂ ವಿಸ್ತರಿಸಬೇಕು. ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಲೋಡರ್ಸ್, ವಾಹನ ಚಾಲಕರ ಮಕ್ಕಳ ಉನ್ನತ ವ್ಯಾಸಂಗ ಮಾಡಲು ಪ್ರೋತ್ಸಾಹ ಧನ ನೀಡಬೇಕು' ಎಂದು ಆಗ್ರಹಿಸಿದರು.

'ಸೆ. 23ರೊಳಗೆ ಪೌರ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸದಿದ್ದರೆ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸುಧಾಮ್ ದಾಸ್

‘ಶಾಸಕ ಮುನಿರತ್ನ ವಿರುದ್ಧ ಪ್ರತಿಭಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತ, ಶೋಷಿತ, ಹಿಂದುಳಿದ ಸಮುದಾಯಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಶಾಸಕ ಮುನಿರತ್ನರನ್ನು ಸಾರ್ವಜನಿಕ ಜೀವನದಲ್ಲಿ ಮುಂದುವರಿಯಲು ಶೋಷಿತ ಸಮಾಜ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಜೈಲಿಗೆ ಹೋಗುವವರೆಗೆ ಪ್ರತಿಭಟನೆ ಹಮ್ಮಿಕೊಳ್ಳಲಿದೆ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸುಧಾಮ್ ದಾಸ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುನಿರತ್ನ ವಿರುದ್ಧ ವಿಶೇಷ ಸರ್ಕಾರಿ ವಕೀಲರನ್ನು ನೇಮಿಸಿ, ಕಠಿಣ ಶಿಕ್ಷೆಯಾಗುವಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

‘ಜನಪ್ರತಿನಿಧಿಯೊಬ್ಬ ಹೀಗೆ ಮಾತನಾಡುತ್ತಾನೆ ಎನ್ನುವುದು ಅಸಹ್ಯದ ಪರಮಾವಧಿ. ಹೊರ ರಾಜ್ಯದಿಂದ ಬಂದ ಈತ ಕೊಲೆ, ಸುಲಿಗೆ ಸೇರಿದಂತೆ ಅಪರಾಧ ಪ್ರಕರಣಗಳಲ್ಲೇ ಮುಳುಗಿರುವ ವ್ಯಕ್ತಿ’ ಎಂದರು.

ಹೆಣ್ಣೂರು ಶ್ರೀನಿವಾಸ್ ಮಾತನಾಡಿ, ‘ಮುನಿರತ್ನ ಅತ್ಯಂತ ತುಚ್ಛವಾಗಿ ಎರಡು ಸಮುದಾಯಗಳ ಬಗ್ಗೆ ಮಾತನಾಡಿದ್ದಾನೆ. ಈತನ ವಿರುದ್ಧ ರಾಜ್ಯದ ಅನೇಕ ಕಡೆ ದಲಿತ ಸಮುದಾಯದವರು ಸಾಂಕೇತಿಕ ದೂರು ನೀಡಿದ್ದಾರೆ’ ಎಂದರು.

‘ಶಾಸಕ ಸ್ಥಾನದಿಂದ ವಜಾ ಮಾಡಿ’

ಡಿ.ಕೆ. ಸುರೇಶ್

‘ಮುನಿರತ್ನ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಬೇಕು. ಶಾಸಕ ಸ್ಥಾನದಿಂದ ಅವರನ್ನು ವಿಧಾನ ಸಭಾಧ್ಯಕ್ಷರು ವಜಾ ಮಾಡಬೇಕು’ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಮುನಿರತ್ನ ಅವರಂಥ ನಾಯಕರಿಂದ ಜಾತಿ ಸಂಘರ್ಷಗಳು ಹೆಚ್ಚಾಗುತ್ತವೆ. ಅವರ ವಿರುದ್ಧ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಕ್ರಮ ತೆಗೆದುಕೊಳ್ಳಬೇಕು’ ಎಂದರು.

‘ಬಿಜೆಪಿಯ ಕೇಂದ್ರ ನಾಯಕರಿಗೆ ಕಿವಿ ಕೇಳಿಸುತ್ತಿದ್ದರೆ, ಕೀಳುಮಟ್ಟದ ಪದ ಬಳಕೆ ಮಾಡಿರುವ ಮುನಿರತ್ನ ವಿರುದ್ಧ ಕ್ರಮ ತೆಗೆದುಕೊಳ್ಳಲಿ’ ಎಂದರು.

‘ಒಕ್ಕಲಿಗ ಸಮುದಾಯದ ತಾಯಂದಿರನ್ನು ಮುನಿರತ್ನ ಅವಮಾನಿಸಿದ್ದಾರೆ. ಇದಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಉತ್ತರಿಸಬೇಕು. ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ವಿರೋಧ ಪಕ್ಷಗಳ ನಾಯಕರೂ ಪ್ರತಿಕ್ರಿಯಿಸಬೇಕು’ ಎಂದು ಹೇಳಿದರು.

‘ಮಹಿಳಾ ಆಯೋಗಕ್ಕೆ ದೂರು’

‘ಮುನಿರತ್ನ ಪ್ರಕರಣದ ವಿರುದ್ಧ ನಾನು ಮಹಿಳಾ ಆಯೋಗಕ್ಕೆ ದೂರು ನೀಡುತ್ತೇನೆ’ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಹೇಳಿದರು.

‘ಶಾಸಕರಾಗಿರಲಿ ಅಥವಾ ಪಂಚಾಯಿತಿ ಸದಸ್ಯರೇ ಆಗಿರಲಿ ಮಹಿಳೆಯರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಮಹಿಳೆಯರು, ಜಾತಿಯ ವಿಚಾರವಾಗಿ ಈ ರೀತಿ ಕೀಳಾಗಿ ಮಾತನಾಡುವುದು ಸರಿಯಲ್ಲ’ ಎಂದರು.

ಕೇವಲ ಮುನಿರತ್ನ ವಿರುದ್ಧವಲ್ಲ, ಈತ ಪ್ರತಿನಿಧಿಸುವ ಬಿಜೆಪಿ ವಿರುದ್ಧವೂ ನಾವು ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ

ಸುಧಾಮ್ ದಾಸ್
ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಬಿ.ಗೋಪಾಲ್ ಮಾತನಾಡಿ, ‘ಮನುವಾದವನ್ನು ಪ್ರತಿನಿಧಿಸುವ ಬಿಜೆಪಿಯ ಆಂತರಿಕ ಮಾತುಗಳನ್ನೇ ಮುನಿರತ್ನ ಆಡಿದ್ದಾರೆ. ನಾಡಪ್ರಭು ಕೆಂಪೇಗೌಡರ ಸಮುದಾಯದ ಬಗ್ಗೆ, ಸಮುದಾಯದ ಹೆಣ್ಣು ಮಕ್ಕಳ ಬಗ್ಗೆ ಅತ್ಯಂತ ಕೆಟ್ಟದಾಗಿ ಮಾತನಾಡಿದ್ದಾರೆ. ನಾವು ಕೈ ಕಟ್ಟಿ ಕುಳಿತುಕೊಳ್ಳುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ಠಾಣೆಗೆ ನುಗ್ಗಲು ಬೆಂಬಲಿಗರ ಯತ್ನ

ಬೌರಿಂಗ್ ಆಸ್ಪತ್ರೆಯಲ್ಲಿ ಮುನಿರತ್ನ ವೈದ್ಯಕೀಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಮುನಿರತ್ನ ಅವರನ್ನು ಬೌರಿಂಗ್ ಆಸ್ಪತ್ರೆಗೆ ಶನಿವಾರ ರಾತ್ರಿಯೇ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ನಂತರ, ಅಲ್ಲಿಂದ ನೇರವಾಗಿ ಅಶೋಕ ನಗರ ಠಾಣೆಗೆ ಸ್ಥಳಾಂತರ ಮಾಡಲಾಯಿತು ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮೊದಲು ವೈಯಾಲಿಕಾವಲ್ ಠಾಣೆಗೆ ಶಾಸಕರ ಬೆಂಬಲಿಗರು ನುಗ್ಗಲು ಯತ್ನಿಸಿದ್ದರು. ಭದ್ರತಾ ದೃಷ್ಟಿಯಿಂದ ಆರೋಪಿಯನ್ನು ಬೇರೆ ಠಾಣೆಗೆ ಸ್ಥಳಾಂತರ ಮಾಡಲಾಗಿತ್ತು. ಮಾಹಿತಿ ತಿಳಿದು ಅಶೋಕ ನಗರ ಠಾಣೆ ಬಳಿಗೂ ಬಂದ ಬೆಂಬಲಿಗರು ಠಾಣೆ ಒಳ ಪ್ರವೇಶಿಸಲು ಯತ್ನಿಸಿದರು. ಅಲ್ಲದೇ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಷಡ್ಯಂತ್ರ ನಡೆಸಿ ಬಂಧಿಸಲಾಗಿದೆ. ನಮ್ಮ ನಾಯಕ ಯಾವುದೇ ತಪ್ಪು ಎಸಗಿಲ್ಲ. ಸುಳ್ಳು ಆರೋಪ ಮಾಡಿ ದೂರು ನೀಡಲಾಗಿದೆ. ತಕ್ಷಣವೇ ಬಿಡುಗಡೆ ಮಾಡಬೇಕು' ಎಂದು ಬೆಂಬಲಿಗರು ಆಗ್ರಹಿಸಿದರು.

ಸ್ಥಳ ಮಹಜರು: ದೂರು ನೀಡಿದ ಚೆಲುವರಾಜು ಅವರನ್ನು ಶಾಸಕರ ಕಚೇರಿಗೆ ಕರೆದೊಯ್ದು ಪೊಲೀಸರು ಸ್ಥಳ ಮಹಜರು ನಡೆಸಿದರು.

‘ದೂರು ಕೊಟ್ಟವರ ವಿರುದ್ಧ ಪ್ರತಿ ದೂರು ನೀಡಲಾಗಿದೆ. ಚೆಲುವರಾಜು ಹಾಗೂ ವೇಲುನಾಯ್ಕರ್ ನೀಡಿರುವ ದೂರಿನಲ್ಲಿ ಸಾಕ್ಷಿಗಳು ಇಲ್ಲ’ ಎಂದು ಮುನಿರತ್ನ ಪರ ವಕೀಲ ಸದಾನಂದ ಶಾಸ್ತ್ರಿ ಹೇಳಿದರು.

ಶಾಸಕ ಮುನಿರತ್ನ ಬಂಧನ ಖಂಡಿಸಿ ಅವರ ಬೆಂಬಲಿಗರು ವೈಯಾಲಿಕಾವಲ್ ಪೊಲೀಸ್ ಠಾಣೆ ಎದುರು ಶನಿವಾರ ರಾತ್ರಿ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದರು

ಚಿತ್ತೂರು ಬಳಿ ಕಾರು ಅಪಘಾತ ಒಂದೇ ಕುಟುಂಬದ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ತಗ್ಗುವಾರಿ ಪಲ್ಲಿ ಸಮೀಪ ಶನಿವಾರ ಬೆಳಗ್ಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ತಾಲ್ಲೂಕಿನ ಕಂಟನಕುಂಟೆ ಗ್ರಾಮದ ಒಂದೇ ಕುಟುಂಬದ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ಕಂಟನಕುಂಟೆಯಿಂದ ತಿರುಪತಿಗೆ ಹೊರಟಿದ್ದ ಕಾರಿನ ಟೈರ್ ಸ್ಫೋಟಗೊಂಡು ಬೆಂಗಳೂರು-ಚನ್ನೈ ರಾಷ್ಟ್ರೀಯ ಹೆದ್ದಾರಿಯ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಕಾರು ಚಾಲನೆ ಮಾಡುತ್ತಿದ್ದ ಕಂಟನಕುಂಟೆ ಗ್ರಾಮದ ಗಂಗರಾಜು(50), ಲಕ್ಷ್ಮಿ(35) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಶ್ರೀನಿವಾಸ್ ಸೇರಿದಂತೆ ನಾಲ್ವರು ಗಾಯಗೊಂಡಿದ್ದು ಎಲ್ಲರನ್ನೂ ಕೋಲಾರದ ಆರ್. ಎಲ್.ಜಾಲಪ್ಪ ವೈದ್ಯಕೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತರು ಮತ್ತು ಗಾಯಾಳುಗಳು ಸಂಬಂಧಿಗಳಾಗಿದ್ದು ತಿರುಪತಿ ಸಮೀಪದ ಸಂಬಂಧಿ ಮನೆಗೆ ತೆರಳುತ್ತಿದ್ದರು. ಈ ವೇಳೆ ಕಾರಿನ ಮುಂದಿನ ಟೈರ್ ಸ್ಫೋಟಗೊಂಡಿದ್ದರಿಂದ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ.

ಕಾರು ಚಾಲನೆ ಮಾಡುತ್ತಿದ್ದ ಗಂಗರಾಜು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸ್ಥಳಕ್ಕೆ ಭೇಟಿ ನೀಡಿದ ಸಂಬಂಧಿಗಳು ತಿಳಿಸಿದ್ದಾರೆ. ಗಂಗರಾಜು ಅಂತ್ಯಕ್ರಿಯೆ ಭಾನುವಾರ ಕಂಟನಕುಂಟೆ ಗ್ರಾಮದಲ್ಲಿ ಹಾಗೂ ಲಕ್ಷ್ಮಿ ಅಂತ್ಯಕ್ರಿಯೆ ವಾಣಿಗರಹಳ್ಳಿ ಗ್ರಾಮದಲ್ಲಿ ನಡೆಯಲಿದೆ.

ಬೆಂಗಳೂರು– ಚಿತ್ತೂರು ಹೆದ್ದಾರಿಯಲ್ಲಿ ಶುಕ್ರವಾರ ಸಂಜೆ ಬಸ್ ಹಾಗೂ ಟ್ರಕ್ ಡಿಕ್ಕಿಯಾಗಿ ಎಂಟು ಮಂದಿ ಮೃತಪಟ್ಟಿದ್ದರು. ಅಪಘಾತದಲ್ಲಿ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.


ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ತಗ್ಗುವಾರಿಪಲ್ಲಿ ಸಮೀಪದ ಬೆಂಗಳೂರುಚನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ನಡೆದ ಅಪಘಾತದಲ್ಲಿ ಕಾರು ನಜ್ಜುಗುಜ್ಜಾಗಿದೆ

ಗಂಗರಾಜು

ಲಕ್ಷ್ಮಿ

ಮಗನ ಅಂತರ್ಜಾತಿ ವಿವಾಹ: ಎಸ್‌ಸಿ ಮಹಿಳೆಗೆ ಥಳಿತ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪರಿಶಿಷ್ಟ ಜಾತಿಯ ಯುವಕ ಹಿಂದುಳಿದ ವರ್ಗದ ಹುಡುಗಿಯನ್ನು ಮದುವೆಯಾದ ಕಾರಣಕ್ಕೆ ಹುಡುಗಿ ಕಡೆಯವರು, ಯುವಕನ ತಾಯಿಯನ್ನು ಮರಕ್ಕೆ ಕಟ್ಟಿಹಾಕಿ ಥಳಿಸಿರುವ ಘಟನೆ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ನಡೆದಿದೆ.

ಈ ಮದುವೆಯನ್ನು ಹುಡುಗಿ ಕುಟುಂಬದವರು ಒಪ್ಪಿರಲಿಲ್ಲ. ವರದಿಗಳ ಪ್ರಕಾರ, ಕರ್ನೂಲ್ ಜಿಲ್ಲೆಯ ಪೆದ್ದ ಕಡುಬೂರು ಮಂಡಲದ ಕಾಳಕುಂಟಾ ಗ್ರಾಮದ ನಿವಾಸಿ ಕೆ.ಗೋವಿಂದಮ್ಮ ಅವರ ಮಗ ಅದೇ ಗ್ರಾಮದ ಅನ್ಯ ಜಾತಿಯ ಹುಡುಗಿಯನ್ನು ಮದುವೆಯಾಗಿದ್ದ. ಹುಡುಗಿಯ ಕುಟುಂಬದವರು ತೊಂದರೆ ಕೊಡಬಹುದು ಎಂದು ಮಗ–ಸೊಸೆ ಜತೆಗೆ ಗೋವಿಂದಮ್ಮ ಗ್ರಾಮ ತೊರೆದಿದ್ದರು. ಆರು ತಿಂಗಳ ನಂತರ ಗೋವಿಂದಮ್ಮ ಗ್ರಾಮಕ್ಕೆ ಮರಳಿದಾಗ, ಹುಡುಗಿಯ ಕುಟುಂಬಸ್ಥರು ಹಾಗೂ ಸಂಬಂಧಿಕರು ಗುರುವಾರ ತಡರಾತ್ರಿ ಗೋವಿಂದಮ್ಮ ಅವರ ಮನೆಗೆ ನುಗ್ಗಿ, ಆಕೆಯನ್ನು ರಸ್ತೆಗೆ ಎಳೆದೊಯ್ದಿದ್ದಾರೆ. ಬಳಿಕ ಆಕೆಯನ್ನು ಮರಕ್ಕೆ ಕಟ್ಟಿ ಥಳಿಸಿದ್ದಾರೆ. ಪೊಲೀಸರು ತಕ್ಷಣ ಗ್ರಾಮಕ್ಕೆ ಬಂದು ಆಕೆಯನ್ನು ರಕ್ಷಿಸಿದ್ದಾರೆ.

ಹಿಂದಿ ಹೇರಿಕೆ ಹುನ್ನಾರ ಖಂಡಿಸಿ ಪ್ರತಿಭಟನೆ

ಕೇಂದ್ರ ಸರ್ಕಾರದ ವಿರುದ್ಧ ಕರವೇ ಕಾರ್ಯಕರ್ತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದಿ ದಿವಸ ಆಚರಣೆ ಹೆಸರಿನಲ್ಲಿ ಅನ್ಯಭಾಷಿಕರ ಮೇಲೆ ಹಿಂದಿ ಭಾಷೆ ಹೇರಿಕೆ ಹುನ್ನಾರ ನಡೆಸಲಾಗುತ್ತಿದೆ’ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆಯ(ಟಿ.ಎ.ನಾರಾಯಣಗೌಡ ಬಣ) ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಾರಾಯಣಗೌಡ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

‘ವಿವಿಧತೆ ಇರುವ ನೆಲದಲ್ಲಿ ಒಂದು ಧರ್ಮ, ಭಾಷೆ, ಸಂಸ್ಕೃತಿಯನ್ನು ಬಲವಂತವಾಗಿ ಎಲ್ಲರ ಮೇಲೂ ಹೇರುವುದು ಕ್ರೌರ್ಯ ಮತ್ತು ರಾಜಕೀಯ ಗೂಂಡಾಗಿರಿ. ಅಲ್ಲದೇ ಸಾಂಸ್ಕೃತಿಕ ಭಯೋತ್ಪಾದನೆಯ ಲಕ್ಷಣ’ ಎಂದು ಕರವೇ ಕಾರ್ಯಕರ್ತರು ಕಿಡಿಕಾರಿದರು.

‘ಕೇಂದ್ರ ಸರ್ಕಾರದ ವ್ಯಾಪ್ತಿಯ ಉದ್ಯಮಗಳು, ರೈಲ್ವೆ ಇಲಾಖೆ, ಬ್ಯಾಂಕಿಂಗ್ ವಲಯ ಹಾಗೂ ಸೇನಾ ನೇಮಕಾತಿಗಳ ಸಂದರ್ಭದಲ್ಲಿ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸುವ ಮೂಲಕ ಪ್ರಾದೇಶಿಕ ಭಾಷೆಗಳನ್ನು ಆಡುವ ಜನರ ಉದ್ಯೋಗದ ಹಕ್ಕು ಕಿತ್ತುಕೊಳ್ಳಲಾಗಿದೆ’ ಎಂದು ದೂರಿದರು.

‘ಕೇಂದ್ರ ಸರ್ಕಾರವು ಈ ಕೂಡಲೇ ಸಂವಿಧಾನಕ್ಕೆ ತಿದ್ದುಪಡಿ ತಂದು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲ 22 ಭಾಷೆಗಳನ್ನೂ ಅಧಿಕೃತ ಆಡಳಿತ ಭಾಷೆಯಾಗಿ ಮಾಡಿ ಈ ದೇಶದ ಬಹುತ್ವ ಕಾಪಾಡಬೇಕು. ಹಿಂದಿ ಭಾಷೆಗೆ ವಿಶೇಷ ಮನ್ನಣೆ ನೀಡುವ ಸಂವಿಧಾನದ 343ರಿಂದ 351ನೇ ವಿಧಿಗಳನ್ನು ರದ್ದುಪಡಿಸಿ ಎಲ್ಲ ಭಾಷೆಗಳೂ ಒಕ್ಕೂಟದ ದೃಷ್ಟಿಯಲ್ಲಿ ಸಮಾನ ಎಂದು ಸಾರಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುವ ಎಲ್ಲ ಕೇಂದ್ರ ಸರ್ಕಾರದ ಇಲಾಖೆಗಳು, ಉದ್ಯಮಗಳಲ್ಲಿ ಕನ್ನಡವೇ ಆಡಳಿತ ಭಾಷೆ ಆಗಬೇಕು. ಎಲ್ಲ ಬಗೆಯ ಪತ್ರ ವ್ಯವಹಾರಗಳೂ ಕನ್ನಡದಲ್ಲೇ ನಡೆಯಬೇಕು. ಕರ್ನಾಟಕದಲ್ಲಿ ತ್ರಿಭಾಷಾ ಸೂತ್ರದ ಬದಲು ದ್ವಿಭಾಷಾ ಸೂತ್ರ ಜಾರಿಗೆ ಬರಬೇಕು. ಶಾಲಾ ಪಠ್ಯಕ್ರಮಗಳಿಂದ ಹಿಂದಿ ಕಡ್ಡಾಯ ಕಲಿಕೆ ಕೊನೆಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಹಿಂದಿ ಭಾಷೆ ಹೇರಿಕೆ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ.ನಾರಾಯಣಗೌಡ ಅವರ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಮುಡಾ: ಮತ್ತೊಬ್ಬ ಅಧಿಕಾರಿ ವರ್ಗಾವಣೆ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶೇ 50:50 ಅನುಪಾತದ ಬದಲಿ ನಿವೇಶನ ಹಂಚಿಕೆ ಹಗರಣ ಬಹಿರಂಗವಾದ ನಂತರ ಮತ್ತೊಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಲಾಗಿದೆ. ಪ್ರಾಧಿಕಾರದ ವಿಶೇಷ ಭೂಸ್ವಾಧೀನ ಅಧಿಕಾರಿ ಆರ್. ಮಂಜುನಾಥ್ ಅವರನ್ನು ಕಬಿನಿ ಜಲಾಶಯ ಯೋಜನೆ-2ರ ವಿಶೇಷ ಭೂಸ್ವಾಧೀನಾಧಿಕಾರಿ ಸ್ಥಾನಕ್ಕೆ ನಿಯೋಜಿಸಲಾಗಿದೆ.

ಹಗರಣದ ಹಿನ್ನೆಲೆಯಲ್ಲಿ ವರ್ಗಾವಣೆಯಾದ 4ನೇ ಅಧಿಕಾರಿ ಇವರು. ಈ ಮುನ್ನ, ಆಯುಕ್ತ, ಕಾರ್ಯದರ್ಶಿ ಹಾಗೂ ಒಬ್ಬ ಎಂಜಿನಿಯರ್ ವರ್ಗಾವಣೆಯಾಗಿತ್ತು.

‘ಹಗರಣದ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆ ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ’ ಎಂದು ಶಾಸಕ ಟಿ.ಎಸ್. ಶ್ರೀವತ್ಸ ದೂರಿದರು.

‘ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದೆ. ಆ ಹಿನ್ನೆಲೆಯಲ್ಲಿ ಮಂಜುನಾಥ್ ವರ್ಗಾವಣೆ ಮಾಡಲಾಗಿದೆ. ಆದರೆ, ವರ್ಗಾವಣೆ ಶಿಕ್ಷೆಯಲ್ಲ. ಅವರನ್ನು ಸೇವೆಯಿಂದ ಅಮಾನತುಗೊಳಿಸಬೇಕು’ ಎಂದರು.

‘ಹಿಂದಿನ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರ ಅಮಾನತು ಆದೇಶ ವಾಪಸ್ ಪಡೆದಿರುವ ಬಗ್ಗೆ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿದೆ. ಆದರೆ, ಆದೇಶದ ಪ್ರತಿ ಸಿಕ್ಕಿಲ್ಲ. ಅಧಿಕಾರಿಗಳೇ ಸರ್ಕಾರದ ಮೇಲೆ ಹಿಡಿತ ಹೊಂದಿದ್ದಾರೆ. ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಮಂಗಳವಾರ (ಸೆ.17) ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮತ್ತೊಮ್ಮೆ ದೂರು ಸಲ್ಲಿಸುವೆ’ ಎಂದು ತಿಳಿಸಿದರು.

ಕಾಂಗ್ರೆಸ್ ಜಿಲ್ಲಾ ಘಟಕ- ಅಧ್ಯಕ್ಷರ ಬದಲಾವಣೆ ಶೀಘ್ರ: ಚಂದ್ರಶೇಖರ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ರಾಜ್ಯದಾದ್ಯಂತ ಪಕ್ಷದ ಬಲವರ್ಧನೆಗೆ ಕಾರ್ಯತಂತ್ರ ರೂಪಿಸಿದ್ದೇನೆ. ಅವಶ್ಯಕತೆ ಇರುವಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಜಿಲ್ಲಾ ಘಟಕ ಹಾಗೂ ಬ್ಲಾಕ್ ಘಟಕಗಳ ಅಧ್ಯಕ್ಷರನ್ನು ತ್ವರಿತವಾಗಿ ಬದಲಾಯಿಸುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಕೆಪಿಸಿಸಿ ಕಾರ್ಯಾಧ್ಯಕ್ಷರ ನೇತೃತ್ವದಲ್ಲಿ ಐದು ವಿಭಾಗಗಳಲ್ಲಿ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳ ಪರಾಮರ್ಶೆ ನಡೆಯುತ್ತಿದೆ. ಪಕ್ಷ ಸಂಘಟನೆಗೆ ಬಲ ತುಂಬಬೇಕಾದ ಕಡೆ ಜಿಲ್ಲಾ ಹಾಗೂ ಬ್ಲಾಕ್ ಘಟಕಗಳ ಅಧ್ಯಕ್ಷರ ಬದಲಾವಣೆ ಆಗಲಿದೆ. ಹೊಸಬರಿಗೆ ಹಾಗೂ ಉತ್ಸಾಹಿ ನಾಯಕರಿಗೆ ಅವಕಾಶ ಸಿಗಲಿದೆ. ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಸಮಿತಿಗಳನ್ನು ರಚಿಸಲಾಗಿದೆ’ ಎಂದು ತಿಳಿಸಿದರು.

ಜಿ.ಸಿ. ಚಂದ್ರಶೇಖರ್

‘ಶಿಗ್ಗಾವಿ ಸಂಡೂರು, ಚನ್ನಪಟ್ಟಣ ವಿಧಾನಸಭೆ ಕ್ಷೇತ್ರಗಳಲ್ಲಿ ಸದಸ್ಯರ ಆಯ್ಕೆಗೆ ಉಪ ಚುನಾವಣೆ ಶೀಘ್ರವೇ ನಡೆಯಲಿದೆ. ಇಲ್ಲಿ ಸೂಕ್ತ ಅಭ್ಯರ್ಥಿಗಳ ಆಯ್ಕೆಗೆ ಹಾಗೂ ಕಾರ್ಯತಂತ್ರ ರೂಪಿಸಲು ಪೂರ್ವಭಾವಿ ಸಭೆಗಳನ್ನು ನಡೆಸಲು ದಿನಾಂಕ ನಿಗದಿಯಾಗಿವೆ. ಶಿಗ್ಗಾವಿಯಲ್ಲಿ 21ಕ್ಕೆ ಹಾಗೂ ಸಂಡೂರಿನಲ್ಲಿ 18ಕ್ಕೆ ಸಭೆ ನಿಗದಿಯಾಗಿದೆ’ ಎಂದು ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಮಂಜುನಾಥ ಭಂಡಾರಿ ಹಾಗೂ ವಸಂತ ಕುಮಾರ್, ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ವಕೀಲೆ ವಾಸುಕಿ ಆತ್ಮಹತ್ಯೆ • ಆರೋಪಿ ವಿಚಾರಣೆಗೆ ಆಗ್ರಹ

ಠಾಣೆ ಎದುರು ತಾಯಿ ಏಕಾಂಗಿ ಧರಣಿ

ಪ್ರಜಾವಾಣಿ ವಾರ್ತೆ

ಮಾಗಡಿ: ಕಳೆದ ತಿಂಗಳು ಆತ್ಮಹತ್ಯೆ ಮಾಡಿಕೊಂಡ ಇಲ್ಲಿಯ ತಿರುಮಲೆ ನಿವಾಸಿ, ವಕೀಲೆ ವಾಸುಕಿ (24) ತಾಯಿ ವಕೀಲೆ ವೆಂಕಟಲಕ್ಷ್ಮಿ ಅವರು, ಮಗಳ ಸಾವಿಗೆ ಕಾರಣರಾದ ಆರೋಪಿಗಳ ವಿಚಾರಣೆಗೆ ಒತ್ತಾಯಿಸಿ ಶನಿವಾರ ಪೊಲೀಸ್ ಠಾಣೆ ಎದುರು ಏಕಾಂಗಿಯಾಗಿ ಧರಣಿ ನಡೆಸಿದರು.

ಮಗಳ ಸಾವಿಗೆ ಬೆಂಗಳೂರಿನ ಆರ್.ಟಿ ನಗರದ ಬಿಬಿಎಂಪಿ ಮಾಜಿ ಕಾರ್ಪೊರೇಟರ್ ಗೋವಿಂದರಾಜು ಅವರ ಪುತ್ರ ಶ್ರವಣ ಕಾರಣ ಎಂದು ಠಾಣೆಗೆ ದೂರು ನೀಡಿದ್ದು, ಇದುವರೆಗೂ ಆರೋಪಿಯ ವಿಚಾರಣೆ ನಡೆಸಿಲ್ಲ. ಕೂಡಲೇ ಆತನ ವಿಚಾರಣೆ ನಡೆಸಬೇಕು. ಮಗಳ ಸಾವಿಗೆ ನ್ಯಾಯ ಕೊಡಿಸಬೇಕು ಎಂದು ಅವರು ಒತ್ತಾಯಿಸಿದರು.

‘ಶ್ರವಣ ಹಾಗೂ ವಾಸುಕಿ ಆರು ವರ್ಷಗಳಿಂದ ಪ್ರೀತಿಸುತ್ತಿದ್ದರು. ಶ್ರವಣ್ ತಂದೆ ಗೋವಿಂದರಾಜು ರಾಜಕೀಯ ಪ್ರಭಾವ ಬಳಸಿ ಇಬ್ಬರನ್ನೂ ದೂರ ಮಾಡಲು ನೋಡಿದರು. ಮೊದಲು ಮದುವೆಯಾಗುತ್ತೇನೆ ಎಂದು ನಂಬಿಸಿದ್ದ ಶ್ರವಣ ನಂತರ ಮದುವೆ ಯಾಗಲು ನಿರಾಕರಿಸಿದ. ಇದರಿಂದ ಮನನೊಂದು ನನ್ನ ಮಗಳು ಆ. 22ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಮೃತಳ ತಾಯಿ ಆರೋಪಿಸಿದರು.

‘ಶ್ರವಣ್ ವಿರುದ್ಧ ಮಾಗಡಿ ಪೊಲೀಸ್ ಠಾಣೆಯಲ್ಲಿ ಆ. 26ರಂದು ದೂರು ನೀಡಲಾಗಿದೆ. ಆದರೆ, ಇಲ್ಲಿಯವರೆಗೂ ಪೊಲೀಸರು ಆತನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿಲ್ಲ. ನನ್ನ ಮಗಳ ಸಾವಿಗೆ ನ್ಯಾಯ ಕೊಡಿಸಬೇಕು. ಅಲ್ಲಿಯವರೆಗೂ ಧರಣಿ ಮುಂದುವರೆಸುತ್ತೇನೆ’ ಎಂದು ಪಟ್ಟು ಹಿಡಿದು ಠಾಣೆ ಎದುರು ಕುಳಿತರು. ಪ್ರಕರಣದ ಕುರಿತು ತನಿಖೆ ನಡೆಯುತ್ತಿದೆ ಎಂದು ಪೊಲೀಸರ ಮನವರಿಕೆ ಮಾಡಿದ ನಂತರ ವೆಂಕಟಲಕ್ಷ್ಮಿ ಧರಣಿ ನಿಲ್ಲಿಸಿದರು.

ಪುತ್ರಿ ವಾಸುಕಿ ಸಾವಿಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿ, ಮಾಗಡಿ ಪೊಲೀಸ್ ಠಾಣೆ ಎದುರು ವಕೀಲೆ ವೆಂಕಟಲಕ್ಷ್ಮಿ ಏಕಾಂಗಿಯಾಗಿ ಧರಣಿ ನಡೆಸಿದರು

‘ಆರೋಪಿಗಾಗಿ ಹುಡುಕಾಟ; ನೋಟಿಸ್ ಜಾರಿ’

‘ಶ್ರವಣ್ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟಿಸ್ ನೀಡಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದು, ಆತನಿಗಾಗಿ ಹುಡುಕಾಟ ಮುಂದುವರೆದಿದೆ’ ಎಂದು ಮಾಗಡಿ ಪೊಲೀಸರು ತಿಳಿಸಿದರು.

‘ಆರೋಪಿ ಶ್ರವಣ್ ಏಪ್ರಿಲ್‌ನಲ್ಲಿ ಯುವತಿ ಜೊತೆ ಮಾತನಾಡಿದ್ದು ಬಿಟ್ಟರೆ ನಂತರ ಯಾವುದೇ ರೀತಿ ಕರೆ ಮಾಡಿದ ದಾಖಲೆ ಲಭ್ಯವಾಗಿಲ್ಲ. ವಕೀಲೆ ಆತ್ಮಹತ್ಯೆ ಸಂದರ್ಭದಲ್ಲಿ ಇಬ್ಬರ ನಡುವೆ ದೂರವಾಣಿ ಮಾತುಕತೆ ನಡೆದಿಲ್ಲ ಎಂಬುದು ತನಿಖೆಯಿಂದ ತಿಳಿದು ಬಂದಿದೆ. ಆರೋಪಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದು, ಠಾಣೆಗೆ ಕರೆಸಿ ವಿಚಾರಣೆ ಮಾಡುವ ಪ್ರಯತ್ನ ನಡೆದಿದೆ’ ಎಂದು ಹೇಳಿದರು.

ಆಭರಣ ಅಂಗಡಿ ಕಳ್ಳತನಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ 2ನೇ ಹಂತದ ಬಿಡಿಎ ಕಾಂಪ್ಲೆಕ್ಸ್ ಸಮೀಪದ ರಾಜಲಕ್ಷ್ಮೀ ಆಭರಣ ಅಂಗಡಿಯಲ್ಲಿ ಕಳ್ಳತನಕ್ಕೆ ಯತ್ನಿಸಿ ವಿಫಲವಾದ ಘಟನೆ ನಡೆದಿದ್ದು, ಕಳ್ಳರ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಬ್ಯಾಗ್‌ನಲ್ಲಿ ಗ್ಯಾಸ್ ಕಟರ್ ಸಮೇತ ಮಧ್ಯರಾತ್ರಿ ಚಿನ್ನದ ಅಂಗಡಿ ಬಳಿ ಬಂದಿದ್ದ ಇಬ್ಬರು ಕಳ್ಳರು, ಶಟರ್ ಮುರಿದು ಕಳ್ಳತನಕ್ಕೆ ಯತ್ನಿಸಿದ್ದಾರೆ. ಪಕ್ಕದ ಅಂಗಡಿಯಲ್ಲಿದ್ದ ಕೆಲಸಗಾರರು ಬೆಳಕು ನೋಡಿ ಕೂಗಿಕೊಂಡಿದ್ದಾರೆ. ತಕ್ಷಣ ಆರೋಪಿಗಳು ಸ್ಥಳದಿಂದ ಓಡಿ ಹೋಗಿದ್ದಾರೆ.

ಅಂಗಡಿ ಮಾಲೀಕ ಗೋದಾರಾಮ್ ಚೌಧರಿ ಅವರ ದೂರು ಆಧರಿಸಿ ಬನಶಂಕರಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಲೈಂಗಿಕ ಕಿರುಕುಳ: ಶಿಕ್ಷಕನ ಬಂಧನ

ಚಿಕ್ಕೋಡಿ: ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮೊಹಮ್ಮದ್ ಸಾಧಿಕ್ ಗೌಸಮೊಹಮ್ಮದ್ ಮಿಯಾಬೇಗ್ (39) ಎಂಬ ಶಿಕ್ಷಕನನ್ನು ಬಂಧಿಸಲಾಗಿದೆ ಎಂದು ಎಸ್ಪಿ ಡಾ.ಭೀಮಾಶಂಕರ ಗುಳೇದ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಪ್ರಯುಕ್ತ ರಕ್ತದಾನ ಶಿಬಿರ: ಆಯೋಜನೆ: ಹೊಯ್ಸಳ ಗೆಳೆಯರ ಬಳಗ, ಸ್ಥಳ: ಸರ್.ಎಂ.ವಿ. ಕನ್ನಡ ಕಟ್ಟೆ, ಜೆ.ಪಿ.ನಗರ 7ನೇ ಹಂತ, ಬೆಳಿಗ್ಗೆ 9

16ನೇ ಚುಟುಕು ಸಾಹಿತ್ಯ ಸಮ್ಮೇಳನ ಮತ್ತು ಎಚ್.ಎಸ್. ರೇಣುಕಾಪ್ರಸಾದ್ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಂ.ಜಿ.ಆರ್. ಅರಸ್, ಸಮ್ಮೇಳನಾಧ್ಯಕ್ಷತೆ: ಬಿ. ಶಿವಲಿಂಗೇಗೌಡ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

‘ಎ ಸಂಡೆ ಟು ರಿಮೆಂಬರ್ 4.0’ ಕಾರ್ ರ‍್ಯಾಲಿ: ಆಯೋಜನೆ: ಇನ್ನರ್ ವ್ಹೀಲ್ ಕ್ಲಬ್ ಆಫ್ ಬೆಂಗಳೂರು ಜಂಕ್ಷನ್, ಸ್ಥಳ: ವೇಗಾ ಸಿಟಿ ಮಾಲ್, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಶಿಕ್ಷಕರ ದಿನಾಚರಣೆ: ಸಾನ್ನಿಧ್ಯ: ಪ್ರಕಾಶನಾಥ ಸ್ವಾಮೀಜಿ, ಉದ್ಘಾಟನೆ: ಭಾಗ್ಯ ನಾಗರಾಜ್, ಅಧ್ಯಕ್ಷತೆ: ಎಚ್. ನಾಗರಾಜ, ಮುಖ್ಯ ಅತಿಥಿಗಳು: ಮಧು ಬಂಗಾರಪ್ಪ, ಎಂ.ಸಿ. ಸುಧಾಕರ್, ಪುಟ್ಟಣ್ಣ, ರಾಮೋಜಿಗೌಡ, ನಿಂಗರಾಜಪ್ಪ ಕೆ.ಬಿ., ಸನ್ಮಾನಿತರು: ಗುರುರಾಜ ಕರಜಗಿ, ಕೆ.ಎಸ್. ಸಮೀರ ಸಿಂಹ, ಬಿ.ವಿ. ನಾಗರಾಜ, ಎಚ್.ಎಸ್. ಗಣೇಶ ಭಟ್ಟ, ಅಶ್ವಥ್ ಎಂ.ಯು, ಆಯೋಜನೆ: ಶ್ರೀ ಕೃಷ್ಣ ಚಾರಿಟಬಲ್ ಟ್ರಸ್ಟ್, ಎಸ್‌ಎಲ್‌ವಿ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಸ್ಥಳ: ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ ಕ್ರಾಸ್ ಮೆಟ್ರೊ ನಿಲ್ದಾಣ, ಅಂಜನಾದ್ರಿ ಲೇಔಟ್, ಬೆಳಿಗ್ಗೆ 10.35

‘ಪದ್ಮಶ್ರೀ ಕಾಕಾ ಕಾರ್ಖಾನೀಸರು: ಜೀವನ-ದೃಷ್ಟಿ’ ವಿಷಯದ ಬಗ್ಗೆ ಉಪನ್ಯಾಸ: ಗೋವಿಂದ ಕಾರಜೋಳ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

‘ಶ್ರೀ ಶಾಂಭವಿ ವಿಜಯ’ ಹಾಗೂ ‘ಶ್ರೀ ಕೃಷ್ಣ ಲೀಲೆ–ಕಂಸ ವಧೆ’ ಯಕ್ಷಗಾನ ಪ್ರಸಂಗ ಪ್ರದರ್ಶನ: ಆಯೋಜನೆ: ಯಕ್ಷತರಂಗ ಬೆಂಗಳೂರು, ಸ್ಥಳ: ಶ್ರೀ ಸಿದ್ಧಗಂಗಾ ವಿದ್ಯಾಲಯದ ಆವರಣ, ರಘುವನ ಹಳ್ಳಿ, ವಾಜರಹಳ್ಳಿ ಮೆಟ್ರೊ ನಿಲ್ದಾಣ ಹತ್ತಿರ, ಸಂಜೆ 4

ಹಳೆ ವಿದ್ಯಾರ್ಥಿಗಳ ಸಮಾಗಮ: ಮುಖ್ಯ ಅತಿಥಿ: ಎಂ.ಕೆ. ಶ್ರೀಧರ್, ಆಯೋಜನೆ: ವಿಜಯ ವಾಣಿಜ್ಯ ಅಲುಮ್ನಿ, ಸ್ಥಳ: ಯುವಪಥ, ಜಯನಗರ, ಸಂಜೆ 4

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರದರ್ಶನ ಫಲಕಗಳ ಅನಾವರಣ, ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ ಹಾಗೂ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಶಾಲಿನಿ ರಜನೀಶ್, ಅಧ್ಯಕ್ಷತೆ: ಮಹೇಶ ಜೋಶಿ, ಮುಖ್ಯ ಅತಿಥಿಗಳು: ದರ್ಶನ್ ಪುಟ್ಟಣ್ಣಯ್ಯ, ರಮೇಶಚಂದ್ರ ಲಹೋಟಿ, ಉಪಸ್ಥಿತಿ: ಎಂ.ಜಿ. ನಾಗರಾಜ್, ಉಪನ್ಯಾಸ: ಗಜಾನನ ಶರ್ಮ, ಪ್ರಶಸ್ತಿ ಪುರಸ್ಕೃತರು: ಎಂ.ಎನ್. ಸತೀಶ್ ಕುಮಾರ್, ದಯಾನಂದ ಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಂಗೀತ ಕಛೇರಿ: ಗಾಯನ: ಚೈತ್ರ ಆರ್., ಪಿಟೀಲು: ಗೋವಿಂದಸ್ವಾಮಿ ಎಂ.ಎಸ್., ಮೃದಂಗ: ಸಮರ್ಥ ಬಿ.ಎಸ್., ಮೋರ್ಚಿಂಗ್: ಚಿದಾನಂದ, ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ, ಸ್ಥಳ: ಬಾಲಮೋಹನ ವಿದ್ಯಾಮಂದಿರ, 1ನೇ ಕೆ ಬ್ಲಾಕ್, ರಾಜಾಜಿನಗರ, ಸಂಜೆ 5

‘ಮೋದಾಳಿ ಪರಿಣಯ’ ಯಕ್ಷಗಾನ ತಾಳಮದ್ದಲೆ: ಆಯೋಜನೆ: ಯಕ್ಷವಾಹಿನಿ ಪ್ರತಿಷ್ಠಾನ, ಯಕ್ಷದುರ್ಗಾ ಮಹಿಳಾ ಕಲಾ ಬಳಗ, ಸ್ಥಳ: ಎಂ.ವಿ.ಸಿ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಎಂಜಿನಿಯರಿಂಗ್ ದಿನಾಚರಣೆ ಸಮಾರಂಭ: ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಜಿ.ಸಿ. ಚಂದ್ರಶೇಖರ್, ರಿಜ್ವಾನ್ ಅರ್ಷದ್, ಆಯೋಜನೆ ಹಾಗೂ ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಸಂಜೆ 5.30

ಆಲೂರು ನಾಗಪ್ಪ ಅವರಿಗೆ ನುಡಿ–ಗಾನ ನಮನ: ನುಡಿ ನಮನ ಸಲ್ಲಿಕೆ: ಟಿ.ಎ.ನಾರಾಯಣಗೌಡ, ಸಿ.ಎನ್. ಬಾಲಕೃಷ್ಣ, ದೊಡ್ಡರಂಗೇಗೌಡ, ಸಾಲುಮರದ ತಿಮ್ಮಕ್ಕ, ಹಿ.ಚಿ. ಬೋರಲಿಂಗಯ್ಯ, ಬಿ. ಭಾಸ್ಕರ್ ರಾವ್, ಎ. ಮಂಜುನಾಥ್, ಉಮಾಪತಿ ಗೌಡ, ಆಯೋಜನೆ: ಆಲೂರು ನಾಗಪ್ಪ ಪ್ರತಿಷ್ಠಾನ, ಸ್ಥಳ: ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30


ಆಲೂರು ನಾಗಪ್ಪ

ಬಿಆರ್‌ಎಲ್–78, ಅಭಿನಂದನೆ, ಪುಸ್ತಕಗಳ ಲೋಕಾರ್ಪಣೆ, ಗೀತ ಗೌರವ: ಉದ್ಘಾಟನೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಮುಖ್ಯ ಅತಿಥಿಗಳು: ಎಚ್.ಎಲ್. ಪುಷ್ಪ, ಎಚ್.ಎಸ್. ಸತ್ಯನಾರಾಯಣ, ಉಪಸ್ಥಿತಿ: ಬಿ.ಆರ್. ಲಕ್ಷ್ಮಣರಾವ್, ಸುಮತಿ ಕೃಷ್ಣಮೂರ್ತಿ, ಆಯೋಜನೆ: ಸಿವಿಜಿ ಪಬ್ಲಿಕೇಷನ್ಸ್, ಹರಿವು ಬುಕ್ಸ್, ಸುಗಮ ಸಂಗೀತ ಪರಿಷತ್ತು, ಸ್ಥಳ: ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಬಿ.ಆರ್. ಲಕ್ಷ್ಮಣರಾವ್

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬಿಬಿಎಂಪಿ ವಿಶೇಷ ಆಯುಕ್ತರಿಗೆ ಎಐಎಂಎಸ್ ಮನವಿ

‘ಪೂರ್ ಹೌಸ್’ ಪುನರಾರಂಭಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರದ ತಿಮ್ಮಯ್ಯ ರಸ್ತೆಯಲ್ಲಿರುವ ಹೆರಿಗೆ ಆಸ್ಪತ್ರೆಯನ್ನು (ಪೂರ್ ಹೌಸ್) ದುರಸ್ತಿ ಹೆಸರಿನಲ್ಲಿ ಮೂರು ವರ್ಷಗಳಿಂದ ಮುಚ್ಚಿದ್ದು, ಶೀಘ್ರವೇ ಪುನರಾರಂಭಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್) ಸದಸ್ಯರು ಶುಕ್ರವಾರ ಬಿಬಿಎಂಪಿ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರಿಗೆ ಮನವಿ ಸಲ್ಲಿಸಿದರು.

‘ಆಸ್ಪತ್ರೆಯಿರುವ ವಾರ್ಡ್ ಸಂಖ್ಯೆ 91ರಲ್ಲಿ ಕೆಳ ಮಧ್ಯಮ ವರ್ಗದವರು ಮತ್ತು ಬಡ ಕೂಲಿಕಾರ್ಮಿಕರು ಬಹುಸಂಖ್ಯೆಯಲ್ಲಿದ್ದಾರೆ. ಸುತ್ತಮುತ್ತಲಿನ ನಿವಾಸಿಗಳು, ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ಚಿಕಿತ್ಸೆಗಾಗಿ ಬಹಳ ಹಿಂದಿನಿಂದಲೂ ಇದೇ ಆಸ್ಪತ್ರೆಯನ್ನು ಅವಲಂಬಿಸಿದ್ದಾರೆ. ಆಸ್ಪತ್ರೆ ಮುಚ್ಚಿದಾಗಿನಿಂದ ಅನಿವಾರ್ಯವಾಗಿ ದುಬಾರಿ ಹಣ ತೆತ್ತು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಾಗಿದೆ’ ಎಂದು ಸಂಘಟನೆಯ ಸದಸ್ಯರು ವಿವರಿಸಿದರು.

‘ಹತ್ತಿರದ ಬೌರಿಂಗ್ ಆಸ್ಪತ್ರೆಯಲ್ಲೂ ಹೆರಿಗೆಯ ಸೌಕರ್ಯಗಳಿಲ್ಲ. ಹೀಗಾಗಿ, ಇಲ್ಲಿನ ನಿವಾಸಿಗಳು ಚಿಕಿತ್ಸೆಗಾಗಿ ದೂರದ ಗೋಶಾ ಆಸ್ಪತ್ರೆಗೋ ಅಥವಾ ಹಲಸೂರಿನ ಸರ್ಕಾರಿ ಆಸ್ಪತ್ರೆಗೋ ಹೋಗಬೇಕಿದೆ. ಹೆರಿಗೆ ನೋವಿನಿಂದ ಬಳಲುವ ಗರ್ಭಿಣಿಯರು ಸರ್ಕಾರಿ ಆಸ್ಪತ್ರೆಗಾಗಿ ಹುಡುಕಾಡುವ ಸ್ಥಿತಿ ನಿಜಕ್ಕೂ ಶೋಚನೀಯ’ ಎಂದು ತಿಳಿಸಿದರು.

‘ಪೂರ್ ಹೌಸ್ ಆಸ್ಪತ್ರೆಯಂತೆ, ಸ್ಥಗಿತಗೊಂಡಿರುವ ಯಶವಂತಪುರದ ಹೆರಿಗೆ ಆಸ್ಪತ್ರೆ ಪುನರ್ ಆರಂಭಿಸಲು ಕ್ರಮ ಕೈಗೊಳ್ಳಬೇಕು. ಬೌರಿಂಗ್ ಆಸ್ಪತ್ರೆಯಲ್ಲೂ ಹೆರಿಗೆ ವಿಭಾಗವನ್ನು ಮತ್ತೆ ಆರಂಭಿಸಬೇಕು’ ಎಂದು ಒತ್ತಾಯಿಸಿದರು.

ಎಐಎಂಎಸ್ ಜಿಲ್ಲಾ ಘಟಕದ ಕಾರ್ಯದರ್ಶಿ ಶಾಂತಾ ಎ., ಸಂಘಟನೆಯ ಹೇಮಾವತಿ, ಅನುರಾಧಾ, ನಿರ್ಮಲಾ ಮತ್ತು ಸ್ಥಳೀಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶಿವಾಜಿನಗರದ ತಿಮ್ಮಯ್ಯ ರಸ್ತೆಯಲ್ಲಿರುವ ‘ಹೆರಿಗೆ ಆಸ್ಪತ್ರೆ’

ಕಾಯಕ 'ನಾಸ್ತಿ' ಪ್ರಶಸ್ತಿ 'ಆಸ್ತಿ'



ಒಂದನೇ ಪುಟದಿಂದ..

ನಂತರದ ಮೂರು ವರ್ಷಗಳಲ್ಲಿ ತಲಾ ₹36 ಲಕ್ಷ ನೀಡಿದೆ. ಇದೇ ರೀತಿ, ಕೊಡವ ಸಾಹಿತ್ಯ ಅಕಾಡೆಮಿ, ಬ್ಯಾರಿ ಅಕಾಡೆಮಿ, ತುಳು ಸಾಹಿತ್ಯ ಅಕಾಡೆಮಿಯ ಅನುದಾನದಲ್ಲಿಯೂ ಇಳಿಕೆಯಾಗಿದೆ. 'ಈಗ ನೀಡಲಾಗುತ್ತಿರುವ ಅನುದಾನದಲ್ಲಿ ದೀರ್ಘಾವಧಿ ಯೋಜನೆಗಳನ್ನು ರೂಪಿಸುವುದು ಕಷ್ಟಸಾಧ್ಯ. ಆದ್ದರಿಂದ ವಾರ್ಷಿಕ ಕಾರ್ಯಚಟುವಟಿಕೆಗಳನ್ನು ಮಾತ್ರ ಮುಂದುವರಿಸುತ್ತಿದ್ದೇವೆ. ಇರುವ ಅನುದಾನದಲ್ಲಿಯೇ ಶಿಬಿರ, ಕಾರ್ಯಾಗಾರಗಳನ್ನು ಮಾಡುತ್ತಿದ್ದೇವೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಕಾಡೆಮಿ ಅಧ್ಯಕ್ಷರೊಬ್ಬರು ತಿಳಿಸಿದರು.

ಪ್ರವಾಹ, ಬರಗಾಲ, ಕೋವಿಡ್ ಸೇರಿ ವಿವಿಧ ಕಾರಣಗಳನ್ನು ನೀಡಿ, ಅನುದಾನವನ್ನು ಕಡಿತ ಮಾಡುತ್ತಾ ಬರಲಾಗಿದೆ. ದೀರ್ಘಾವಧಿ ಯೋಜನೆಗಳೂ ಅನುದಾನ ಇಲ್ಲದೆ, ಅರ್ಧಕ್ಕೆ ಕುಂಠಿತವಾಗಿವೆ. ಸದ್ಯ ನೀಡುತ್ತಿರುವ ವಾರ್ಷಿಕ ಅನುದಾನದಲ್ಲಿ ಅರ್ಧದಷ್ಟು ಹಣ ಸಿಬ್ಬಂದಿ ವೇತನ ಸೇರಿ ವಿವಿಧ ಆಡಳಿತಾತ್ಮಕ ವೆಚ್ಚಕ್ಕೆ ಬಳಕೆಯಾಗುತ್ತಿದೆ. ಇದರಿಂದಾಗಿ ಅಕಾಡೆಮಿಗಳು ಪುಸ್ತಕ ಪ್ರಕಟಣೆ, ಕಾರ್ಯಾಗಾರ, ಶಿಬಿರ, ಪ್ರಶಸ್ತಿ ಪ್ರದಾನದಂತಹ ಚಟುವಟಿಕೆಗಳಿಗೆ ಸೀಮಿತಗೊಳ್ಳುತ್ತಿವೆ. ಸರ್ಕಾರದಿಂದ ನೇಮಕವಾದ ಕಾರ್ಯಕಾರಿ ಸಮಿತಿಗಳು, ಅನುದಾನಕ್ಕೆ ಪಟ್ಟು ಹಿಡಿಯದ ಪರಿಣಾಮ ಅಲ್ಪ ಧನಕ್ಕೆ ತೃಪ್ತಿಕೊಳ್ಳಬೇಕಾಗಿದೆ.

ಕರ್ನಾಟಕ ನಾಟಕ ಅಕಾಡೆಮಿಯು 2018ರಲ್ಲಿ ಹಮ್ಮಿಕೊಂಡಿದ್ದ ರಂಗಭೂಮಿ ವಿಷಯ ವಸ್ತುಗಳ ಡಿಜಿಟಲೀಕರಣ ಈವರೆಗೂ ಪೂರ್ಣಗೊಂಡಿಲ್ಲ. ಇದಕ್ಕೆ ಒಟ್ಟು ₹20 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗ್ರಾಫಿಕ್ ಸ್ಟುಡಿಯೊದ ಶಂಕುಸ್ಥಾಪನೆ ನೆರವೇರಿ ಏಳು ವರ್ಷಗಳಾದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಇದರಿಂದಾಗಿ ಬೆಂಗಳೂರಿನ ಕಲಾಗ್ರಾಮದಲ್ಲಿರುವ ಗ್ರಾಫಿಕ ಸ್ಟುಡಿಯೊ ಕಟ್ಟಡ ಪಾಳು ಬಿದ್ದಿದೆ. ಇದೇ ರೀತಿ, ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಹಮ್ಮಿಕೊಂಡಿದ್ದ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಸೇರಿ ವಿವಿಧ ಯೋಜನೆಗಳು ಅನುದಾನದ ಕೊರತೆ ಎದುರಿಸಿವೆ.

'ಸಾಂಸ್ಕೃತಿಕ ಕೇಂದ್ರಗಳಲ್ಲಿಯೂ ರಾಜಕೀಯ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಇದರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಕಾಡೆಮಿ-ಪ್ರಾಧಿಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಅನುದಾನವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಳ ಮಾಡುತ್ತಾ ಹೋಗುವ ಬದಲು, ಇರುವ ಅನುದಾನವನ್ನೂ ಕಡಿತ ಮಾಡಲಾಗುತ್ತಿದೆ. ಈ ಬಗ್ಗೆ ಅಕಾಡೆಮಿ–ಪ್ರಾಧಿಕಾರಗಳ ಅಧ್ಯಕ್ಷರೂ ಸರ್ಕಾರಗಳ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಇದು ನಮ್ಮ ವಿಪರ್ಯಾಸ' ಎಂದು ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯರೂ ಆಗಿರುವ ಲೇಖಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಅಧಿಕಾರದ ಅಭದ್ರತೆ: ಸರ್ಕಾರಗಳು ಬದಲಾದಂತೆ ಸಾಂಸ್ಕೃತಿಕ ಅಕಾಡೆಮಿಗಳ ಕಾರ್ಯಕಾರಿ ಸಮಿತಿಯನ್ನೂ ಬದಲಾಯಿಸುವ ಸಂಪ್ರದಾಯ ಪ್ರಾರಂಭವಾಗಿದೆ. ಆದೇಶ ಪ್ರತಿಯಲ್ಲಿಯೇ 'ಅಧ್ಯಕ್ಷರ ಹಾಗೂ ಸದಸ್ಯರ ಅಧಿಕಾರವಧಿ ಮೂರು ವರ್ಷಗಳು ಅಥವಾ ಮುಂದಿನ ಆದೇಶದವರೆಗೆ' ಎಂದು ತಿಳಿಸಲಾಗುತ್ತಿದೆ. ಇದರಿಂದಾಗಿ ಕೆಲ ಸಂದರ್ಭದಲ್ಲಿ ಅಕಾಡೆಮಿಗಳ ಕಾರ್ಯಕಾರಿ ಸಮಿತಿಯ ಅಧಿಕಾರವಧಿ ಮೂರು ವರ್ಷಗಳು ಪೂರ್ಣಗೊಳ್ಳುವ ಮುನ್ನವೇ, ಹೊಸ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬರುತ್ತಿದೆ. ಸರ್ಕಾರಗಳು ಅಸ್ಥಿರಗೊಂಡಾಗಲೆಲ್ಲ ಅಕಾಡೆಮಿಗಳ ಅಧ್ಯಕ್ಷರಿಗೂ ಅಧಿಕಾರದ ಅಭದ್ರತೆ ಕಾಡಲಿದೆ. ಇನ್ನೊಂದೆಡೆ, ಅಧಿಕಾರಕ್ಕೇರಿದ ಹೊಸ ಕಾರ್ಯಕಾರಿ ಸಮಿತಿಗಳಿಗೆ ಹಿಂದಿನ ಯೋಜನೆಗಳನ್ನು ಮುಂದುವರಿಸುವ ಖಚಿತತೆಯೂ ಇಲ್ಲವಾಗಿದೆ.

ಕಾರ್ಯಕಾರಿ ಸಮಿತಿಯ ಅಧಿಕಾರವಧಿ ಮುಗಿದ ಬಳಿಕ, ಚುನಾವಣೆ ಸೇರಿ ವಿವಿಧ ಕಾರಣಗಳಿಂದ ಸರ್ಕಾರಗಳು ಹೊಸ ಕಾರ್ಯಕಾರಿ ಸಮಿತಿ ನೇಮಿಸಲು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ಕೆಲ ತಿಂಗಳು ಅಥವಾ ವರ್ಷಾನುಗಟ್ಟಲೆ ಕಾರ್ಯಚಟುವಟಿಕೆಗಳು ಸಂಪೂರ್ಣ ಸ್ತಬ್ಧವಾಗಿ, ನಿಷ್ಕ್ರಿಯವಾಗುತ್ತಿವೆ. ಪರಿಣಾಮ, ಪ್ರಶಸ್ತಿ ಪ್ರದಾನದಂತಹ ವಾರ್ಷಿಕ ಚಟುವಟಿಕೆಗಳು ಸ್ಥಗಿತವಾಗಿ, ಒಮ್ಮೆಲೆಯೇ ಎರಡು ಮೂರು ವರ್ಷಗಳ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗುತ್ತಿದೆ.

ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನೇಮಕಗೊಂಡಿದ್ದ ಅಕಾಡೆಮಿಗಳ ಕಾರ್ಯಕಾರಿ ಸಮಿತಿ ಅವಧಿಯು 2022ರ ಅ.15ರಂದು ಮುಕ್ತಾಯವಾಗಿತ್ತು. ವಿಧಾನಸಭೆ ಚುನಾವಣೆಗೆ ಆಗ ಅರು ತಿಂಗಳು ಉಳಿದಿದ್ದವು. ಆದ್ದರಿಂದ ತಾತ್ಕಾಲಿಕ ಸಮಿತಿ ರಚಿಸುವ ಅಥವಾ ಹಾಲಿ ಸಮಿತಿಯ ಅಧಿಕಾರವಧಿ ವಿಸ್ತರಿಸುವ ಗೋಜಿಗೆ ಸರ್ಕಾರ ಹೋಗಲಿಲ್ಲ. ಬಳಿಕ ಅಧಿಕಾರಕ್ಕೇರಿದ ಕಾಂಗ್ರೆಸ್ ನೇತೃತ್ವದ ಸರ್ಕಾರ ಹತ್ತು ತಿಂಗಳಾದ ಬಳಿಕ ನೇಮಕಾತಿ ಪ್ರಕ್ರಿಯೆ ನಡೆಸಿತು. ಇದರಿಂದಾಗಿ ಸುಮಾರು 15 ತಿಂಗಳು ಅಕಾಡೆಮಿಗಳಿಗೆ ಕಾರ್ಯಕಾರಿ ಸಮಿತಿಯೇ ಇರಲಿಲ್ಲ. ಇಲಾಖೆಯ ಜಂಟಿ ನಿರ್ದೇಶಕರೇ ಆಡಳಿತಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು.

'ಅಕಾಡೆಮಿ-ಪ್ರಾಧಿಕಾರಗಳ ಅಧ್ಯಕ್ಷ ಹುದ್ದೆಗೆ ನಡೆಯುತ್ತಿರುವ ಲಾಬಿ, ರಾಜಕೀಯ ಹಸ್ತಕ್ಷೇಪ ಸೇರಿ ಇತ್ತೀಚಿನ ಬೆಳವಣಿಗೆಗಳು ಬೇಸರವನ್ನುಂಟು ಮಾಡಿದೆ. ರಾಜಕೀಯ ಪಕ್ಷದ ಕಚೇರಿಯಲ್ಲಿ ನಡೆಯುವ ಸಭೆಗಳಲ್ಲಿ ಸಾಂಸ್ಕೃತಿಕ ಕೇಂದ್ರಗಳ ಅಧ್ಯಕ್ಷರು ಪಾಲ್ಗೊಳ್ಳುವುದು ವಿಪರ್ಯಾಸ. ಅಧ್ಯಕ್ಷರಾದವರು ಒಂದು ಪಕ್ಷದ ಕಾರ್ಯಕರ್ತರ ರೀತಿ ವರ್ತಿಸಿದರೆ ಅದು ಸಾಂಸ್ಕೃತಿಕ ಜಗತ್ತಾಗದೆ, ರಾಜಕೀಯ ಜಗತ್ತಾಗುತ್ತದೆ. ಪಕ್ಷದವರೂ ಸಾಂಸ್ಕೃತಿಕ ಕೇಂದ್ರಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು' ಎಂದು ಅಕಾಡೆಮಿಯ ಮಾಜಿ ಅಧ್ಯಕ್ಷರೊಬ್ಬರು ಬೇಸರ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲಾದ ಅನುದಾನ

(ಕೋಟಿಗಳಲ್ಲಿ)

2018-19	2019-20	2020-21	2021-22	2022-23	2023-24
₹297.29	₹225.22	₹188.22	₹179.56	₹199.36	₹218

ಅಕಾಡೆಮಿಗಳಿಗೆ ನೀಡಲಾದ ಸಹಾಯಧನ

(ಕೋಟಿಗಳಲ್ಲಿ)

2017-18	2018-19	2019-20	2020-21	2021-22	2022-23	2023-24
₹10	₹12	₹8	₹7.50	₹7	₹7	₹10

ಅಕಾಡೆಮಿ, ಪ್ರಾಧಿಕಾರ: ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಒತ್ತಾಯ

- ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸ್ವಾಯತ್ತತೆ ಒದಗಿಸಬೇಕು
- ಕ್ರಿಯಾಯೋಜನೆಗೆ ಅನುಗುಣವಾಗಿ ಅನುದಾನ ಒದಗಿಸಬೇಕು
- ರಾಜಕೀಯ ಪಕ್ಷಗಳ ಹಸ್ತಕ್ಷೇಪ ತಪ್ಪಬೇಕು
- ಸರ್ಕಾರಗಳು ಬದಲಾದಂತೆ ಕಾರ್ಯಕಾರಿ ಸಮಿತಿ ಬದಲಾಯಿಸದೆ ಅಧಿಕಾರ ಪೂರ್ಣಗೊಳ್ಳಲು ಅವಕಾಶ ನೀಡಬೇಕು
- ಪ್ರಶಸ್ತಿಗಳ ಆಯ್ಕೆಯಲ್ಲಿ ಸರ್ಕಾರದ ಹಸ್ತಕ್ಷೇಪ, ಲಾಬಿಗೆ ಮಣಿಯಬಾರದು
- ಆಯಾ ಕ್ಷೇತ್ರದ ಸಾಧಕರು, ಕ್ರಿಯಾಶೀಲರಿಗೆ ಅಧ್ಯಕ್ಷ ಹುದ್ದೆ ನೀಡಬೇಕು
- ಅಧ್ಯಕ್ಷರ ನೇಮಕಾತಿಗೆ ಕುಲಪತಿಗಳ ಆಯ್ಕೆಯ ರೀತಿಯಲ್ಲೇ ಒಂದು ಶೋಧನಾ ಸಮಿತಿ ರಚಿಸಿ, ಆಯ್ಕೆ ಮಾಡಬೇಕು
- ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯಲ್ಲಿ ಇರುವವರು ರಾಜಕೀಯ ಪಕ್ಷದ ಕಾರ್ಯಕರ್ತರ ರೀತಿ ವರ್ತನೆ ಹಾಗೂ ಯೋಚನೆ ಮಾಡಬಾರದು



ಚಿತ್ರಗಳು: ಭಾವು ಪತ್ತಾರ್

ಸಾಂಸ್ಕೃತಿಕ ನೀತಿಯ ಶಿಫಾರಸುಗಳು

ಜಾರಿಯಾಗದ ಪ್ರಮುಖ ಶಿಫಾರಸುಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರೀಕರಣ ● ಜಾನಪದ ರೆಪರ್ಟರಿಗಳ ಸ್ಥಾಪನೆ ● ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ ● ಸೂಫಿ ಸಂಸ್ಕೃತಿ ಮತ್ತು ತತ್ವಪದ ಅಧ್ಯಯನ ಕೇಂದ್ರ ಸ್ಥಾಪನೆ ● ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪನೆ ● ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರಕ್ಕೆ ಸ್ವತಂತ್ರ ಅಸ್ತಿತ್ವ (ತಮಿಳುನಾಡು ಮಾದರಿ) ● ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಹೊರನಾಡು ಕನ್ನಡಿಗರು ● ಅಕಾಡೆಮಿಗಳಿಗೆ ಸಂಪೂರ್ಣ ಸ್ವಾಯತ್ತತೆ

ಜಾರಿಯಾದ ಶಿಫಾರಸುಗಳು

ಸಾಂಸ್ಕೃತಿಕ ಸಂಸ್ಥೆಗಳಿಗೆ ಧನಸಹಾಯಕ್ಕೆ ತಜ್ಞರ ಸಮಿತಿ ರಚನೆ ● ಕರ್ನಾಟಕ ಯಕ್ಷಗಾನ-ಬಯಲಾಟ ಅಕಾಡೆಮಿ ಬೇರ್ಪಡಿಸುವಿಕೆ ● ಯುವಜನ ಸಂಸ್ಕೃತಿ ಶಿಬಿರ ● ಸಂಘ-ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ಸದ್ಬಳಕೆ ಬಗ್ಗೆ ಪರಿಶೀಲನೆ ● ಪ್ರಶಸ್ತಿಗಳ ವಿತರಣೆಗೆ ಕಾಲ ಬದ್ಧತೆ ● ಸಾಹಿತಿ ಕಲಾವಿದರಿಗೆ ಮಾಸಾಶನ ● ಶಿಷ್ಯವೇತನ ಮತ್ತು ಫೆಲೋಶಿಪ್ ನೀಡುವಿಕೆ



'ಸರ್ಕಾರದ ಹಸ್ತಕ್ಷೇಪ ಇರಬಾರದು'

ಅಕಾಡೆಮಿಗಳು, ಪ್ರಾಧಿಕಾರಗಳು ಸೇರಿ ಸಾಂಸ್ಕೃತಿಕ ಕೇಂದ್ರಗಳಲ್ಲಿ ಯಾವುದೇ ಕಾರಣಕ್ಕೂ ರಾಜಕಾರಣ ಮಾಡಬಾರದು. ಈ ಕೇಂದ್ರಗಳ ಮೇಲೆ ಸರ್ಕಾರದ ಹಸ್ತಕ್ಷೇಪವೂ ಇರಬಾರದು. ಆದರೆ, ಇತ್ತೀಚಿನ ವರ್ಷಗಳಲ್ಲಿ ಹಸ್ತಕ್ಷೇಪ ಕಾಣುತ್ತಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಡೀ ಸರ್ಕಾರಕ್ಕೆ ಮುಖ ಇದ್ದಂತೆ. ಈ ಇಲಾಖೆಯಲ್ಲಿ ದುಂದುವೆಚ್ಚ ಕಡಿಮೆ. ಆದ್ದರಿಂದ ಅನುದಾನ ನೀಡುವಾಗ ಮೀನಾಮೇಷ ಮಾಡಬಾರದು. ನೆಮ್ಮದಿಯ ಜೀವನಕ್ಕೆ ಕಲೆ ಮತ್ತು ಸಾಹಿತ್ಯ ಅಗತ್ಯ. ಅಕಾಡೆಮಿಗಳ ಕ್ರಿಯಾಯೋಜನೆಗಳಿಗೆ ಅನುದಾನ ಅಗತ್ಯವಿದ್ದಲ್ಲಿ ಸರ್ಕಾರ ಒದಗಿಸಬೇಕು.

ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ನಿರ್ದೇಶಕ

'ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು'

ಅಕಾಡೆಮಿ, ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ ನೇಮಕಾತಿಯಿಂದ ಹಿಡಿದು, ಕಾರ್ಯಚಟುವಟಿಕೆವರೆಗೆ ರಾಜಕೀಯ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಇದರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವುಗಳಿಗೆ ಸಾಧ್ಯವಾಗುತ್ತಿಲ್ಲ. ವಿಷಯ ತಜ್ಞರು ಈ ಕೇಂದ್ರಗಳನ್ನು ಮುನ್ನಡೆಸಬೇಕು. ಸರ್ಕಾರದ ಹಸ್ತಕ್ಷೇಪ ತಪ್ಪಬೇಕು. ಅವುಗಳಿಗೆ ಪೂರ್ಣ ಪ್ರಮಾಣದಲ್ಲಿ ಸ್ವಾಯತ್ತತೆ ನೀಡಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು.

ವೈ.ಕೆ. ಮುದ್ದುಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ನಿರ್ದೇಶಕ



'ಸಾಂಸ್ಕೃತಿಕ ನೀತಿ ಜಾರಿಗೊಳಿಸಬೇಕು'

ಅಕಾಡೆಮಿಗಳಿಗೆ ಸ್ವಾಯತ್ತತೆ ಅಗತ್ಯ. ಇದು ಸಾಕಾರವಾಗಲು ಸಾಂಸ್ಕೃತಿಕ ನೀತಿಯ ಶಿಫಾರಸುಗಳನ್ನು ಆದ್ಯತೆ ಮೇರೆಗೆ ಜಾರಿ ಮಾಡಬೇಕು. ಸರ್ಕಾರಗಳು ಬದಲಾದ ಕೂಡಲೇ ಅಕಾಡೆಮಿ ಮುಂತಾದ ಸಾಂಸ್ಕೃತಿಕ ಕೇಂದ್ರಗಳ ನೇಮಕಾತಿಯನ್ನು ರದ್ದು ಮಾಡುವುದು ಅತ್ಯಂತ ಖೇದಕರ. ಬರಗೂರು ಸಮಿತಿ ಶಿಫಾರಸಿನಂತೆ ಸಾಂಸ್ಕೃತಿಕ ಕೇಂದ್ರಗಳ ಅಧ್ಯಕ್ಷರು ತಮ್ಮ ಅವಧಿ ಪೂರೈಸುವುದಕ್ಕೆ ಅನುವು ಮಾಡಿಕೊಡಬೇಕು. ಸಮಿತಿಯ ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡು ಆದೇಶ ಹೊರಡಿಸಿದರೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅದನ್ನು ಜಾರಿಗೊಳಿಸದಿರುವುದು ವಿಪರ್ಯಾಸ.

ಜೆ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ

'ಸೂಕ್ತ ಕ್ರಿಯಾಯೋಜನೆ ರೂಪಿಸಬೇಕು'

ಪ್ರತಿಯೊಂದು ಅಕಾಡೆಮಿ, ಪ್ರಾಧಿಕಾರಗಳಿಗೆ ಅದರದೆಯಾದ ರೂಪುರೇಷೆ, ಕಾರ್ಯಯೋಜನೆ ವ್ಯಾಪ್ತಿ ಇರುತ್ತದೆ. ಮೊದಲು ಬೈಲಾದಲ್ಲಿನ ನಿಯಮಾವಳಿ ಏನಿದೆ ಅನ್ನುವುದನ್ನು ಅರಿತು, ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಕಾರ್ಯಪ್ರವೃತ್ತರಾಗಬೇಕು. ಸ್ವಾಯತ್ತತೆಯನ್ನು ಉಳಿಸಿಕೊಂಡು, ಕಾರ್ಯವ್ಯಾಪ್ತಿಯಡಿ ಕೆಲಸ ಮಾಡಬೇಕು. ಯಾವುದೇ ಪಕ್ಷದ ಹಿಡಿತಕ್ಕೆ ಒಳಗಾಗಬಾರದು. ಸೂಕ್ತ ಕ್ರಿಯಾಯೋಜನೆಯನ್ನು ರೂಪಿಸಬೇಕು. ಅವುಗಳಿಗೆ ಸರ್ಕಾರ ಅಗತ್ಯ ಅನುದಾನ ನೀಡಬೇಕು. ವಾರ್ಷಿಕ ಅನುದಾನದ ಜತೆಗೆ ವಿಶೇಷ ಅನುದಾನ ಪಡೆಯಲು ಅವಕಾಶವಿದೆ. ಆದ್ದರಿಂದ ಯೋಜನೆಗಳಿಗೆ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವರಿಕೆ ಮಾಡಿಸಬೇಕು. ಪ್ರಕಟಿತ ಪುಸ್ತಕಗಳು, ಯೋಜನೆಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳಬೇಕು.

ಡಾ. ವಸುಂಧರಾ ಭೂಪತಿ, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ

ಜಾರಿಯಾಗದ ಸಾಂಸ್ಕೃತಿಕ ನೀತಿ

ಅಕಾಡೆಮಿ–ಪ್ರಾಧಿಕಾರಗಳಿಗೆ ಸ್ವಾಯತ್ತತೆ ಕಲ್ಪಿಸುವಿಕೆ ಸೇರಿ ರಾಜ್ಯ ಸರ್ಕಾರದ 'ಸಾಂಸ್ಕೃತಿಕ ನೀತಿ' ಏನಿರಬೇಕು ಎಂಬುದರ ಕುರಿತು ವರದಿ ಸಿದ್ಧಪಡಿಸಿ ಹತ್ತು ವರ್ಷಗಳಾದರೂ ಶಿಫಾರಸುಗಳು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಸಾಂಸ್ಕೃತಿಕ ನೀತಿ ರಚನೆಗೆ ಸಂಬಂಧಿಸಿದಂತೆ 2013ರ ಆ.8ರಂದು ಸಿದ್ದರಾಮಯ್ಯ ನೇತೃತ್ವದ ಅಂದಿನ ಕಾಂಗ್ರೆಸ್ ಸರ್ಕಾರವು ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ 'ಸಮಗ್ರ ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ' ರಚಿಸಿತ್ತು. ಈ ಸಮಿತಿಯು 2014ರ ಜೂನ್ 25ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇದರ ಪರಾಮರ್ಶೆಗೆ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿತ್ತು.

ಸಣ್ಣ ಪುಟ್ಟ ತಿದ್ದುಪಡಿಯೊಂದಿಗೆ ಸಚಿವ ಸಂಪುಟದ ಒಪ್ಪಿಗೆ ಪಡೆದ ಸರ್ಕಾರ, 2017ರ ಅ.10ರಂದು ಶಿಫಾರಸುಗಳ ಜಾರಿಗೆ ಆದೇಶ ಹೊರಡಿಸಿತ್ತು. ಆದರೆ, ಸಮಿತಿ ಮಾಡಿದ್ದ 44 ಶಿಫಾರಸುಗಳ ಪೈಕಿ, 'ಅಕಾಡೆಮಿಗಳ ಅಧ್ಯಕ್ಷರ ಆಯ್ಕೆಗೆ ಶೋಧನಾ ಸಮಿತಿ ರಚನೆ' ಸೇರಿ ಕೆಲವೊಂದು ಶಿಫಾರಸುಗಳನ್ನು ಕೈಬಿಡಲಾಗಿತ್ತು. ಇದಕ್ಕೆ ಸಾಂಸ್ಕೃತಿಕ ವಲಯದಲ್ಲಿ ವಿರೋಧವೂ ವ್ಯಕ್ತವಾಗಿತ್ತು. ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದ ಶಿಫಾರಸುಗಳ ಜಾರಿಗೆ ಸರ್ಕಾರ ಆದೇಶ ಹೊರಡಿಸಿದ್ದರೂ ಬಹುತೇಕ ಶಿಫಾರಸುಗಳು ಕಡತದಲ್ಲಿಯೇ ಇವೆ.

ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಿದ ಆದೇಶದಲ್ಲಿ ಅಕಾಡೆಮಿ ಹಾಗೂ ಪ್ರಾಧಿಕಾರಗಳ ನೇಮಕಾತಿ ಹಾಗೂ ಸಬಲೀಕರಣದ ಬಗ್ಗೆ ವಿವರಿಸಲಾಗಿತ್ತು. 'ಅಧ್ಯಕ್ಷರು ಹಾಗೂ ಸದಸ್ಯರ ಅವಧಿ ಮುಗಿದ ನಂತರವೂ ಹೊಸ ನೇಮಕಾತಿ ಆಗುವವರೆಗೆ ಅವರನ್ನೇ ಮುಂದುವರಿಸಬೇಕು' ಎಂದು ತಿಳಿಸಲಾಗಿತ್ತು. ಆದರೆ, ಇದು ಪಾಲನೆಯಾಗುತ್ತಿಲ್ಲ.

'ಇಷ್ಟು ವರ್ಷಗಳಲ್ಲಿ ಕೆಲವೊಂದು ಶಿಫಾರಸುಗಳನ್ನು ಮಾತ್ರ ಜಾರಿ ಮಾಡಲಾಗಿದೆ. ಆಗ ಕಾಂಗ್ರೆಸ್ ಸರ್ಕಾರವೇ ಸಮಿತಿ ರಚಿಸಿ, ವರದಿ ಸ್ವೀಕರಿಸಿತ್ತು. ಮತ್ತೆ ಅದೇ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಈ ಶಿಫಾರಸುಗಳ ಜಾರಿಗೆ ಆದ್ಯತೆ ನೀಡಬೇಕು' ಎಂದು ಆಗ್ರಹಿಸುತ್ತಾರೆ ಸಾಹಿತಿ ಬರಗೂರು ರಾಮಚಂದ್ರಪ್ಪ.

ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಭಾಷೆಗೆ ಸಂಬಂಧಿಸಿದ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಕಾರ್ಯಕಾರಿ ಸಮಿತಿಗಳು, ಆಳುವ ಪಕ್ಷದ ಅಡಿಯಾಳಾಗದೆ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ಕಲೆ ಹಾಗೂ ಕಲಾವಿದರ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಬೇಕೆನ್ನುವುದು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರ ಒತ್ತಾಸೆ.

'ಪ್ರಾಮುಖ್ಯ ಕಳೆದುಕೊಳ್ಳುತ್ತಿರುವ ಅಕಾಡೆಮಿಗಳು'

ಅನುದಾನ ಕಡಿತದಿಂದ ಅಕಾಡೆಮಿಗಳು ವಾರ್ಷಿಕ ಚಟುವಟಿಕೆಗಳನ್ನು ಮಾತ್ರ ಹಮ್ಮಿಕೊಳ್ಳುತ್ತಿವೆ. ಇದರಿಂದಾಗಿ ಅಕಾಡೆಮಿಗಳ ಪ್ರಾಮುಖ್ಯ ಕಡಿಮೆಯಾಗುತ್ತಿದೆ. ಕೋವಿಡ್ ಸೇರಿ ವಿವಿಧ ಕಾರಣಗಳಿಂದ ಅಕಾಡೆಮಿಗಳು ಕಳೆದ ಐದು ವರ್ಷಗಳ ಅವಧಿಯಲ್ಲಿ ದೀರ್ಘಾವಧಿ ಅಥವಾ ಸಾಂಸ್ಕೃತಿಕ ಲೋಕದ ಗಮನ ಸೆಳೆಯುವ ಯಾವುದೇ ಯೋಜನೆ ಹಮ್ಮಿಕೊಂಡಿಲ್ಲ.

'ಈ ಹಿಂದೆ ಸಾಹಿತ್ಯ ಹಾಗೂ ಕಲಾ ಕ್ಷೇತ್ರದ ಅತ್ಯುನ್ನತ ಸಾಧಕರಿಗೆ ಅಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷ ಗಾದಿ ಒಲಿಯುತ್ತಿತ್ತು. ಸಾಹಿತ್ಯ ಅಕಾಡೆಮಿಯು ಎ.ಎನ್. ಮೂರ್ತಿರಾವ್ ಅವರಿಂದ ಆರಂಭಿಸಿ, ಹಾ.ಮಾ. ನಾಯಕ, ಗಿರಡ್ಡಿ ಗೋವಿಂದರಾಜ, ಜಿ.ಎಸ್. ಶಿವರುದ್ರಪ್ಪ ಮೊದಲಾದ ಸಾಹಿತಿಗಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿಗೆ ಗೌರವ ತಂದುಕೊಟ್ಟಿದ್ದರು. ಇದೇ ರೀತಿ, ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ, ಅವರಿಗೆ ಅಧ್ಯಕ್ಷ ಹುದ್ದೆಯನ್ನು ಒದಗಿಸಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಹುದ್ದೆ ಲಾಬಿಗೆ ಒಲಿಯುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಾಹಿತಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 15-09-2024

● ಚುನಾವಣಾ ಸಮೀಕ್ಷೆ ನಿಷೇಧ ಅಧಿಕಾರ ಆಯೋಗಕ್ಕೆ ಇಲ್ಲ: ಸುಪ್ರೀಂ ಕೋರ್ಟ್

ನವದೆಹಲಿ, ಸೆ.14 (ಪಿಟಿಐ, ಯುಎನ್‌ಐ): 'ಚುನಾವಣಾ ಸಮೀಕ್ಷೆ ಮತ್ತು ಫಲಿತಾಂಶ ಪೂರ್ವ ಸಮೀಕ್ಷೆ ಪ್ರಕಟಣೆ ಮೇಲೆ ನಿಷೇಧ ಹೇರುವ ಮೂಲಕ ಚುನಾವಣಾ ಆಯೋಗವು ತನ್ನ ಅಧಿಕಾರವ್ಯಾಪ್ತಿ ಮೀರಿ ವರ್ತಿಸಿದೆ' ಎಂದು ತೀವ್ರ ತರಾಟೆ ತೆಗೆದುಕೊಂಡ ಸುಪ್ರೀಂ ಕೋರ್ಟ್ ತೀರ್ಪು ಹೊರ ಬಿದ್ದ ಮರುಗಳಿಗೆಯೇ ಆಯೋಗವು ಈ ಸಂಬಂಧದ ತನ್ನ ವಿವಾದಾತ್ಮಕ ಆದೇಶವನ್ನು ಹಿಂತೆಗೆದುಕೊಂಡಿತು.

ಮಾರ್ಗದರ್ಶಿ ಸೂತ್ರಗಳ ಜಾರಿಗೆ ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದವರಿಗೆ ಆದೇಶ ನೀಡಬೇಕೆಂಬ ಚುನಾವಣಾ ಆಯೋಗದ ಅರ್ಜಿಯನ್ನು ಐವರು ಸದಸ್ಯರ ಸಂವಿಧಾನ ಪೀಠವು ತಳ್ಳಿ ಹಾಕಿತು. ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಿಂದಾಗಿ ಚುನಾವಣಾ ಆಯೋಗದ ಕ್ರಮಗಳಿಗೆ ತೀವ್ರ ಹಿನ್ನಡೆಯಾದಂತಾಗಿದೆ.

● ಬೆಳ್ಳೂರು ಘರ್ಷಣೆ: ಗಾಳಿಯಲ್ಲಿ ಗುಂಡು, ನಿಷೇಧಾಜ್ಞೆ ಜಾರಿ

ಮಂಡ್ಯ: ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನಲ್ಲಿ ನಿನ್ನೆ ಸಂಜೆ ಎರಡು ರಾಜಕೀಯ ಪಕ್ಷಗಳ ನಡುವೆ ಮಾರಾಮಾರಿ ಘರ್ಷಣೆ ಸಂಭವಿಸಿದ ಪರಿಣಾಮ ಪರಿಸ್ಥಿತಿಯನ್ನು ನಿಯಂತ್ರಿಸಲು ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ, ಗಾಳಿಯಲ್ಲಿ ಗುಂಡು ಹಾರಿಸಿದ್ದು ಐದು ದಿನಗಳವರೆಗೆ(ಸೆಪ್ಟಂಬರ್ 17ರವರೆಗೆ) ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ನಿನ್ನೆ ಸಂಜೆ ಜನತಾದಳ(ಎಸ್) ಅಭ್ಯರ್ಥಿ ಎನ್. ಚಲುವರಾಯಸ್ವಾಮಿ ಬೆಂಬಲಿಗರು ಜೈಕಾರ ಕೂಗುತ್ತಾ ಹೋಗುತ್ತಿದ್ದಾಗ ಕಾಂಗ್ರೆಸ್ ಅಭ್ಯರ್ಥಿ ಎಲ್.ಆರ್. ಶಿವರಾಮೇಗೌಡರ ಬೆಂಬಲಿಗರು ಪ್ರತಿ ಜೈಕಾರ ಕೂಗಿ, ವಾಗ್ವಾದ ನಡೆಸಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಾದಶಿ ಗಂ. 18-13 **ನಕ್ಷತ್ರ:** ಶ್ರವಣ ಗಂ. 18-49 **ಯೋಗ:** ಅತಿಗಂಡ ಗಂ. 15-13 **ಕರಣ:** ಬವ ಗಂ. 7-32, ಸಿಂಹ ಮಾಸದ 29 ನೇ ದಿನ, **ಮಳೆನಕ್ಷತ್ರ:** ಉತ್ತರಫಲ್ಗುಣಿ 1.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-23 **ಸೂರ್ಯಾಸ್ತ :** 06-28
ಮುಸ್ಲಿಂ ದಿನಾಂಕ: 11 ರಬಿಉಲ್ಲಾವಲ್
ದಿನ ವಿಶೇಷ: ಶ್ರವಣ ದ್ವಾದಶಿ, ವಾಮನ ಜಯಂತಿ **ಅದೃಷ್ಟ ಸಂಖ್ಯೆ:** 7, 12

ಮೇಷ: ನೂತನ ಸಂಸ್ಥೆಯೊಂದರಲ್ಲಿ ಉತ್ತಮ ಉದ್ಯೋಗ ಪಡೆದುಕೊಳ್ಳಲು ಯೋಚಿಸುವಿರಿ. ದಿನಗೂಲಿ ಕೆಲಸವನ್ನು ಮಾಡುವವರಿಗೆ ಈ ದಿನ ಸ್ವಲ್ಪ ಅಸ್ಥಿರತೆ ಕಾಡಬಹುದು. ಚರ್ಮದ ವಸ್ತು ವ್ಯಾಪಾರಿಗಳಿಗೆ ಲಾಭದಾಯಕ ದಿನ.

ವೃಷಭ: ಸಾಂಸಾರಿಕವಾಗಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಂಡು ಹೋಗುವುದೇ ಉತ್ತಮ. ಪರರಿಗೆ ಸಹಾಯ ಮಾಡುವ ಮನೋಭಾವದಿಂದ ಮುನ್ನಡೆ ಇರುವುದು. ವಿದೇಶ ಅಥವಾ ದೂರ ಸಂಚಾರದ ಯೋಗವಿದೆ.

ಮಿಥುನ: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗಾವಣೆಯಾಗುವುದು. ಆತ್ಮಾಭಿಮಾನಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಡೆದುಕೊಳ್ಳಿರಿ. ಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವಿರಿ.

ಕರ್ಕಾಟಕ: ಅಂದುಕೊಂಡಿರುವ ಕೆಲಸಗಳು ನೆರವೇರಿಸುವುದರಿಂದ ನೆಮ್ಮದಿ ಇರುವುದು. ಈ ದಿನ ಕೊಟ್ಟ ಹಣ ಹಿಂದಿರುಗುವುದು ಕಷ್ಟಸಾಧ್ಯ. ಆದ್ದರಿಂದ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ.

ಸಿಂಹ: ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ. ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು.

ಕನ್ಯಾ: ನಿಮ್ಮ ಕೈ ತಪ್ಪಿ ಹೋಗಿದ್ದ ಕೆಲವು ಕೆಲಸಗಳು ಹಿರಿಯರೊಬ್ಬರ ಸಹಾಯದಿಂದ ಪುನಃ ನಿಮಗೆ ದೊರೆಯಲಿದೆ. ದಿನಾಂತ್ಯದಲ್ಲಿ ಆಭರಣಗಳು ಅಥವಾ ಕಲಾವಸ್ತುಗಳನ್ನು ಖರೀದಿಸುವ ಮನಸ್ಸಾಗಲಿದೆ.

ತುಲಾ: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ವಕೀಲರ ಸಲಹೆ ಪಡೆಯುವುದು ಒಳ್ಳೆಯದು. ಮಕ್ಕಳ ಭವಿಷ್ಯದ ಕುರಿತಾಗಿ ಗಂಭೀರ ಚಿಂತನೆ ನಡೆಸುವಿರಿ.

ವೃಶ್ಚಿಕ: ಪ್ರಾಮಾಣಿಕವಾಗಿ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧ್ಯ. ಬಂಧುಗಳ ಮಾತು ಮನಸ್ಸನ್ನು ಗಾಯ ಮಾಡಲಿದೆ. ಮನಸ್ಸು ನಿರಾಸಕ್ತಿಯ ಭಾವನೆಯಿಂದ ಕೂಡಿರುವಂತಾಗಲಿದೆ.

ಧನು: ಇನ್ನೊಬ್ಬರ ಕೆಲಸದ ಬಗ್ಗೆ ಟೀಕೆ-ಟಿಪ್ಪಣಿ ನೀಡುವುದು ಸರಿಯಲ್ಲ. ಹಣಕಾಸಿನ ಸಂಸ್ಥೆಗೆ ಪಾಲುದಾರರಾಗುವ ಸಾಧ್ಯತೆ ಇದೆ. ಋಣಗಳು ಪರಿಹಾರವಾಗಿ ನೆಮ್ಮದಿ ಮೂಡುವುದು.

ಮಕರ: ಕಲಾವಿದರಿಗೆ ಚಿತ್ರರಂಗದಲ್ಲಿ ಅದರಲ್ಲೂ ಹಾಸ್ಯಗಾರನಾಗಿ ಉತ್ತಮ ಅವಕಾಶಗಳು ಸಿಗುವುವು. ಹಲವು ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲದಿಂದ ಹೆಚ್ಚಿನ ಲಾಭ ಬರುವುದು.

ಕುಂಭ: ಒಣಪ್ರತಿಷ್ಠೆಯಿಂದಾಗಿ ಸಂಬಂಧಗಳು ಕಡಿದುಕೊಳ್ಳಬೇಡಿ. ಜಾಹೀರಾತು ಏಜೆನ್ಸಿಯಲ್ಲಿರುವವರಿಗೆ ಬಹಳಷ್ಟು ಏಳಿಗೆ ಹಾಗೂ ಪ್ರಚಾರ ತರುವ ಸೂಕ್ತ ವಿಚಾರದಲ್ಲಿ ಕೆಲಸ ಮಾಡುವ ಅವಕಾಶ ದೊರೆಯಲಿದೆ.

ಮೀನ: ನ್ಯಾಯಾಲಯದಲ್ಲಿದ್ದ ಪ್ರಕರಣ ಇತ್ಯರ್ಥವಾಗಿ ಮನಸ್ಸಿಗೆ ಸಮಾಧಾನ ಸಿಗಲಿದೆ. ಆಸ್ತಿ ಕೊಳ್ಳುವ ವಿಷಯದಲ್ಲಿ ಹೆಂಡತಿಯೊಂದಿಗೆ ಮಾತುಕತೆ ನಡೆಸಿ. ಹಳೆಯ ಸಿಹಿ ಘಟನೆಗಳನ್ನು ಮೆಲಕು ಹಾಕುವಿರಿ.

ಪದಬಂಧ 5803

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೇರವಾಗಿರುವ ಗುಣ (3)
5.ಸಮಯ ಸೂಚಕ ಯಂತ್ರ (4)
6.ನಗಿಸಲೆಂದೇ ಬಂದವನಿವನು (4)
8.ನೀರಾಗಿ ಕಲೆಸಿದ ಮಣ್ಣು (3)
11.ಜಿಪುಣ ಇಲ್ಲಿದ್ದಾನೆ (3)
13.ಪದದಲ್ಲಿ ಪುಸ್ತಕದ ಒಂದು ಅಧ್ಯಾಯ ಇದೆ (4)
17.ಜೀವಿತಕ್ಕಾಗಿ ವರ್ಷಕ್ಕೊಮ್ಮೆ ಕೊಡುವ ಹಣ (4)
18.ಮಾವನಿಗೆ ಕೇಳಿಸಿದ ಪ್ರತಿಧ್ವನಿ (3)

ಮೇಲಿಂದ ಕೆಳಕ್ಕೆ

1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
2.ಗಳಿಕೆ ಇದ್ದರೂ ಇದು ಬಯ್ಗಳು (4)
3.ಗುಬ್ಬಚ್ಚಿಯನ್ನು ಹೀಗೂ ಕರೆಯುತ್ತಾರೆ (3)
4.ಚಿನ್ನ ಬೆಳ್ಳಿಗಳನ್ನು ಪರೀಕ್ಷಿಸುವ ಕಲ್ಲು (3)
7.ದೇವರ ಮುಂದೆ ಉರಿಸುವ ಸುಗಂಧ ದ್ರವ್ಯ (3)
9.ಮಾಲು ತರಲು ಹೋದಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)
10.ತಾಪವಿರುವಾಗ ತೋಡಿಕೊಂಡ ಬೇಗುದಿ (3)
12.ಮನಸ್ಸಿಗೆ ಸಂಬಂಧಿಸಿದ್ದು ಉಲ್ಟಾ ಆಗಿಬಿಟ್ಟದೆ (4)
14.ಕುದುರೆಯನ್ನೇರಲು ಬಳಸುವ ಬಳೆ (3)
15.ಕಪೋಲದ ಒಳಭಾಗದಲ್ಲಿರುವ ಒಸಡಿನ ಭಾಗ (3)
16.ರಕ್ತ ಹರಿಯುವ ನಾಳ (3)



5802ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭ್ಯಂಜನ 3.ಮಹಾಕಾವ್ಯ 5.ಖಚರ 7.ತನಯ 8.ತವರ 10.ವಿಚಾರವಂತ 11.ಮರಾಲ 13.ಮಥಿತ 14.ಭವಿಷ್ಯ 16.ಮಹನೀಯ 17.ಶಿರೋನಾಮೆ

ಮೇಲಿಂದ ಕೆಳಕ್ಕೆ:
1.ಅಭ್ಯಾಗತ 2.ನಖ 3.ಮರ 4.ವ್ಯತ್ಯಯ 6.ಚನ್ನವೀರಕಣವಿ 7.ತರತಮ 9.ರವಿಸುತ 12.ಲವಾಜಮ 13.ಮಧ್ಯಮ 14.ಭಯ 15.ಷ್ಯಶಿ

ಸುಡೊಕು 6188

		1		8			6	7
	7		1		6			3
3		5		2		9		
	8	7					1	
			7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6187 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಪ್ರವಾಸೋದ್ಯಮ ಉತ್ತೇಜನಕ್ಕೆ ಹೊಸ ನೀತಿ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಶಿವನಸಮುದ್ರ (ಮಂಡ್ಯ ಜಿಲ್ಲೆ): ‘ರಾಜ್ಯದಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸರ್ಕಾರಬದ್ಧವಾಗಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವಂಥ ಹೊಸನೀತಿ ರೂಪಿಸುವುದಕ್ಕೂ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತದ ಸಹಯೋಗದಲ್ಲಿ ಮಳವಳ್ಳಿ ತಾಲ್ಲೂಕಿನ ಗಗನಚುಕ್ಕಿಯಲ್ಲಿ ಶನಿವಾರ ಎರಡು ದಿನದ ‘ಗಗನಚುಕ್ಕಿ ಜಲಪಾತೋತ್ಸವ’ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಮಂಡ್ಯ, ಮೈಸೂರು, ಬೆಳಗಾವಿ, ಮಂಗಳೂರು, ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿರುವ ನೈಸರ್ಗಿಕ ತಾಣಗಳನ್ನು ಅಭಿವೃದ್ಧಿಪಡಿಸಲು ಪೂರಕವಾದ ಪ್ರವಾಸೋದ್ಯಮ ನೀತಿ ರೂಪಿಸಲಾಗುವುದು’ ಎಂದರು.

‘ಗಗನಚುಕ್ಕಿ ಜಲಪಾತ ತಾಣದ ಅಭಿವೃದ್ಧಿಗೆ ನಮ್ಮ ಸರ್ಕಾರ ಇದುವರೆಗೆ ₹8 ಕೋಟಿಗೂ ಹೆಚ್ಚು ಅನುದಾನ ನೀಡಿದೆ. ಮುಂದಿನ ದಿನಗಳಲ್ಲಿ ಗಗನಚುಕ್ಕಿ-ಭರಚುಕ್ಕಿ ತಾಣಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುತ್ತೇವೆ’ ಎಂದು ತಿಳಿಸಿದರು.

ದಲಿತ ಯುವಕನಿಗೆ ಥಳಿತ –ದೂರು

ಕೆರೂರ (ಬಾಗಲಕೋಟೆ): ‘ಉಗಲವಾಟ ಗ್ರಾಮದಲ್ಲಿ ದ್ಯಾಮವ್ವನ ಗುಡಿಗೆ ಹೋಗಿದ್ದಕ್ಕೆ ಕೆಲವರು ನನ್ನನ್ನು ನಾಲ್ಕು ದಿನದ ಹಿಂದೆ ಕಂಬಕ್ಕೆ ಕಟ್ಟಿ ಬಡಿದಿದ್ದಾರೆ’ ಎಂದು ಅರ್ಜುನ ಮಾದರ ಎಂಬುವರು ಕೆರೂರ ಪೊಲೀಸ್ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

‘ದಲಿತನಾದ ನೀನು ದ್ಯಾಮವ್ವನ ಗುಡಿಯ ಗರ್ಭ ಗುಡಿಯೊಳಕ್ಕೆ ಏಕೆ ಹೋಗಿದ್ದಿ ಎಂದು ಕಂಬಕ್ಕೆ ಕಟ್ಟಿ ಹೊಡೆದರು’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಕೇರಿ ಜನರು ನಮ್ಮ ಏರಿಯಾಕ್ಕೆ ಬರಬೇಡಿ. ನೀವು ನಿಮ್ಮ ಏರಿಯಾದಲ್ಲಿರಿ. ನಾವು ನಮ್ಮ ಏರಿಯಾದಲ್ಲಿರುತ್ತೇವೆ ಎಂದು ಡಂಗುರ ಸಾರಲಾಗಿತ್ತು. ಘಟನೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಎಸ್‌ಪಿ ಅಮರನಾಥ ರೆಡ್ಡಿ ತಿಳಿಸಿದ್ದಾರೆ.

ನಾಗಮಂಗಲ ಗಲಭೆ: ಪ್ರಕರಣದಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೊರಕ್ಕೆ – ಸಚಿವರ ಸಮರ್ಥನೆ

‘ಬೆಂಕಿ ಹಚ್ಚಿದ್ದು ಯಾರೆಂದು ಗೊತ್ತಿದೆ’

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಗಣೇಶ ಮೂರ್ತಿ ಮೆರವಣಿಗೆ ಸಂದರ್ಭದಲ್ಲಿ ಯಾರು ಮೊದಲು ಬೆಂಕಿ ಹಚ್ಚಿದ್ದಾರೆಂಬ ಮಾಹಿತಿ ಇದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶನಿವಾರ ಇಲ್ಲಿ ತಿಳಿಸಿದರು.

ಇಲ್ಲಿ ಶಾಂತಿ ಸಭೆಗೂ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಮೊದಲು ಕಾನೂನು– ಸುವ್ಯವಸ್ಥೆ ಸರಿಯಾಗಬೇಕು. ಅಗತ್ಯಬಿದ್ದರೆ ವಿಶೇಷ ತನಿಖೆ ನಡೆಯಲಿದೆ. ತಪ್ಪಿತಸ್ಥರನ್ನು ಬಂಧಿಸಿ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

‘ಚನ್ನಪಟ್ಟಣದ ಉಪ ಚುನಾವಣೆಗಾಗಿ ಗಲಭೆ ಸೃಷ್ಟಿಸಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಸಿಎಂ ಇಳಿಸಲು ಕುತಂತ್ರ ಅನ್ನೋದೂ ಸರಿಯಲ್ಲ. ಎರಡು ಬಾರಿ ಸಿಎಂ ಆಗಿದ್ದ ಅವರಿಗೆ ನಾನು ಉತ್ತರಿಸಬೇಕೆ? ನಾಗಮಂಗಲಕ್ಕೆ ಬಂದು ಜನರಿಗೆ ಏನು ಸಂದೇಶ ಕೊಟ್ಟಿದ್ದಾರೆ? ಅವರಿಗೆ ಪ್ರತಿಕ್ರಿಯಿಸದಿರುವುದೇ ಉತ್ತಮ’ ಎಂದರು.

ಗಲಭೆಯಲ್ಲಿ ನಷ್ಟ ಹೊಂದಿದವರಿಗೆ ಪರಿಹಾರ ನೀಡಲು ಅವಕಾಶವಿಲ್ಲ. ಆದರೂ ನಾಗಮಂಗಲ ಘಟನೆಗೆ ಸಂಬಂಧಿಸಿ ಪರಿಹಾರ ಕೊಡಿಸಲು ಮುಖ್ಯಮಂತ್ರಿಯನ್ನು ಒಪ್ಪಿಸಿದ್ದೇನೆ

ಎನ್.ಚಲುವರಾಯಸ್ವಾಮಿ

ಜಿಲ್ಲಾ ಉಸ್ತುವಾರಿ ಸಚಿವ

‘ಗಲಭೆಗೆ ಸರ್ಕಾರವೇ ಕಾರಣ ಎಂದು ಕುಮಾರಸ್ವಾಮಿ, ಮತ್ತು ಬಿಜೆಪಿಯವರೂ ಹೇಳಿದ್ದಾರೆ. ಹೊರಗಿನವರು ಏನೇ ಹೇಳಿದರೂ ನನಗೆ ನಾಗಮಂಗಲ ಜನರೇ ಮುಖ್ಯ’ ಎಂದರು.

ಗಲಭೆ ಪ್ರಕರಣದಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಅವರನ್ನು ಕೈಬಿಟ್ಟ ಬಗ್ಗೆ ಪ್ರತಿಕ್ರಿಯಿಸಿ, ‘ಗಲಭೆಯಲ್ಲಿ ಅವರು ಭಾಗವಹಿಸಿರಲಿಲ್ಲ’ ಎಂದು ಸಮರ್ಥಿಸಿಕೊಂಡರು.

‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ನೋಡಿಕೊಂಡು ಬಂಧಿಸಿದರೆ 500 ಜನ ಆಗುತ್ತಾರೆ. ಮೆರವಣಿಗೆ ತಂಡದಲ್ಲಿ ರಾಜೇಶ್ ಪುತ್ರ ಇದ್ದರೆಂದು ಆತನನ್ನು ಬಂಧಿಸಿದ್ದಾರೆ. ತಪ್ಪು ಮಾಡಿದ ಯಾರನ್ನೂ ರಕ್ಷಿಸಲ್ಲ. ಕೆಲವು ಅಮಾಯಕರನ್ನು ಬಂಧಿಸಿದ್ದು, ಆರೋಪ ಪಟ್ಟಿಯಿಂದ ಕೈಬಿಡಲು ಸೂಚಿಸಿರುವೆ’ ಎಂದು ಸಮರ್ಥಿಸಿಕೊಂಡರು.

ತಾಯಿ ಆಕ್ರೋಶ: ‘ಗಲಭೆಯ ವೇಳೆ ಮಗ ಶ್ರೀನಿವಾಸ್ ಸ್ಥಳದಲ್ಲಿಲ್ಲದಿದ್ದರೂ ಬಂಧಿಸಲಾಗಿದೆ’ ಎಂದು ಆತನ ತಾಯಿ ಕೆಂಪಮ್ಮ, ಸಚಿವರ ಮುಂದೆಯೇ ಆಕ್ರೋಶ ವ್ಯಕ್ತಪಡಿಸಿದರು.

‘ಅಂದು ಸಂಜೆ 6.45 ರಿಂದ ರಾತ್ರಿ 9.28ರವರೆಗೆ ಹೊಸ ಮನೆ ಬಳಿಯೇ ಇದ್ದ. ಆದರೂ ರಾತ್ರಿ 2 ಗಂಟೆಗೆ ಪೊಲೀಸರು ಬಂದು ಹೊಡೆಯುತ್ತಲೇ ಎಳೆದೊಯ್ದರು. ಅವನು ಅಲ್ಲಿರಲಿಲ್ಲ ಎಂದು ಎಷ್ಟೇ ಹೇಳಿದರೂ ಬಿಡದೇ ನನ್ನನ್ನು ಹೆದರಿಸಿದರು’ ಎಂದು ಕಣ್ಣೀರಿಟ್ಟರು.

‘ಗಲಾಟೆ ಸಮಯದಲ್ಲಿನ ವಿಡಿಯೊದಲ್ಲಿ ಇಲ್ಲದಿದ್ದರೆ ಮನೆಗೆ ಕಳಿಸುವುದಾಗಿ ಹೇಳಿದ್ದರು. ವಿಡಿಯೊ ನೋಡಿದ ನಂತರವೂ ಬಿಟ್ಟಿಲ್ಲ. ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಸ್ಲಿಮರನ್ನು ಓಲೈಸುತ್ತಾರೆ. ತಪ್ಪು ಮಾಡಿದ್ದರೆ ನನ್ನನ್ನೂ ಬಂಧಿಸಲಿ’ ಎಂದರು.

ಪತ್ರಕರ್ತರು ಹೊರಗೆ: ಶಾಂತಿ ಸಭೆಗೆ ಪತ್ರಕರ್ತರಿಗೆ ಅವಕಾಶ ನಿರಾಕರಿಸಲಾಗಿತ್ತು. ‘ಗೌರಿ-ಗಣೇಶ ಹಬ್ಬ, ಈದ್ ಮಿಲಾದ್ ಸಮಿತಿ ರಚಿಸಿ ಮಾರ್ಗಸೂಚಿ ರೂಪಿಸಬೇಕು. ರೂಟ್ ಮ್ಯಾಪ್ ಸಿದ್ಧಪಡಿಸಿಯೇ ಮೆರವಣಿಗೆಗೆ ಅನುಮತಿ ನೀಡಬೇಕು’ ಎಂದು ಸಮುದಾಯಗಳ ಮುಖಂಡರು ಸಭೆಯಲ್ಲಿ ಸಲಹೆ ನೀಡಿದರು.

ಸಹಜಸ್ಥಿತಿಗೆ ಜನಜೀವನ

ಪಟ್ಟಣದಲ್ಲಿ ಶನಿವಾರ ಜನಜೀವನ ಸಹಜ ಸ್ಥಿತಿಗೆ ಮರಳಿತು. ಅಂಗಡಿಗಳು ತೆರೆದಿದ್ದವು. ಬಸ್‌ಗಳು ಸಂಚರಿಸಿದವು.

ಗಣಪತಿ ಮೂರ್ತಿ ಪ್ರತಿಷ್ಠಾಪಿಸಿರುವ ಪೆಂಡಾಲ್‌ಗಳ ಬಳಿ ಹಾಗೂ ಪ್ರಮುಖ ವೃತ್ತಗಳು, ದೇವಸ್ಥಾನ, ಮಸೀದಿ, ದರ್ಗಾಗಳ ಬಳಿ ಪೊಲೀಸ್ ಭದ್ರತೆ ಮುಂದುವರಿದಿದೆ.

ಗ್ರಾಮೀಣ ಭಾಗದ ಜನರು ಹಿಂಜರಿಕೆ ಬಿಟ್ಟು ಪಟ್ಟಣಕ್ಕೆ ಬಂದಿದ್ದರು. ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿಯೂ ಹೆಚ್ಚಿತ್ತು. ಮಾರಾಟಕ್ಕೆ ನಿಷೇಧವಿರುವುದರಿಂದ ಮದ್ಯದಂಗಡಿಗಳು ಮುಚ್ಚಿದ್ದವು.

‘ಎಚ್.ಡಿ. ಕುಮಾರಸ್ವಾಮಿ ಗಲಾಟೆ ಮಾಡಿಸಿರಬಹುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾರಕ್ಕೊಮ್ಮೆ ಬಂದು ಏನೇನೋ ಮಾತನಾಡುವ ಎಚ್.ಡಿ. ಕುಮಾರಸ್ವಾಮಿ ಅವರು ನಾಗಮಂಗಲ ಗಲಾಟೆ ಮಾಡಿಸಿರಬಹುದು ಎಂದು ನಾನೂ ಹೇಳಬಹುದಲ್ಲವೇ’ ಎಂದು ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು.

‘ನಾಗಮಂಗಲ ಗಲಾಟೆಗೆ ಕಾಂಗ್ರೆಸ್ ಚಿತಾವಣೆ’ ಎನ್ನುವ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸುರೇಶ್, ‘ಕುಮಾರಸ್ವಾಮಿ ಏನು ಆರೋಪ ಮಾಡುತ್ತಾರೋ ಅದೇ ರೀತಿ ನಾನೂ ಆರೋಪ ಮಾಡುತ್ತೇನೆ’ ಎಂದರು.

‘ಕಾಂಗ್ರೆಸ್ ಸರ್ಕಾರ ಅತಿಯಾದ ತುಷ್ಟೀಕರಣ ಮಾಡುತ್ತಿದೆ’ ಎಂಬ ಆರೋಪದ ಬಗ್ಗೆ ಕೇಳಿದಾಗ, ‘ಯಾರ ತುಷ್ಟೀಕರಣವನ್ನೂ ನಮ್ಮ ಸರ್ಕಾರ ಮಾಡುವುದಿಲ್ಲ. ಅಂಬೇಡ್ಕರ್, ಗಾಂಧೀಜಿ, ಬಸವಣ್ಣ ಅವರ ತತ್ವದಲ್ಲಿ ನಾವು ನಡೆಯುತ್ತಿದ್ದೇವೆ’ ಎಂದರು.

‘ಬೆಂಕಿ ಹಚ್ಚುವ ಸಂಸ್ಕೃತಿ ಅವರದ್ದು’

‘ನಾಗಮಂಗಲ ಗಲಾಟೆಯ ಹಿಂದೆ ನಾನು ಇರಬಹುದು ಎಂದು ಆರೋಪಿಸುತ್ತಿರುವ ಡಿ.ಕೆ. ಸೋದರರ ಹಿನ್ನೆಲೆ ಎಂಥದ್ದು ಎಂಬುದು ಇಡೀ ಜಗತ್ತಿಗೆ ಗೊತ್ತು’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಲೇವಡಿ ಮಾಡಿದರು.

ನಾಗಮಂಗಲ ಗಲಭೆ ಸಂಬಂಧ ಕಾಂಗ್ರೆಸ್ ನಾಯಕ ಡಿ.ಕೆ.ಸುರೇಶ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ‘ನಾನು ವಾರಕ್ಕೊಮ್ಮೆ ರಾಜ್ಯಕ್ಕೆ ಬರುವುದು ಗಲಾಟೆ ಮಾಡಿಸುವುದಕ್ಕಾ? ಬೆಂಕಿ ಹಚ್ಚಲಿಕ್ಕೆ ನಾಗಮಂಗಲಕ್ಕೆ ನಾನು ಹೋಗಿದ್ದೆನೇ? ಬೆಂಕಿ ಹಚ್ಚುವ ಸಂಸ್ಕೃತಿ ಅವರದ್ದು, ನನ್ನದಲ್ಲ. ಶಾಂತಿ ಕಾಪಾಡಿ ಎಂದು ಹೇಳಲು ಅಲ್ಲಿಗೆ ಹೋಗಿದ್ದೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ಈ ಅಣ್ಣ-ತಮ್ಮಂದಿರು ಯಾವ ಮಾರ್ಗದಲ್ಲಿ ಬಂದಿದ್ದಾರೆ, ಯಾರ-ಯಾರ ಆಸ್ತಿಗಳನ್ನು ಲಪಟಾಯಿಸಿದ್ದಾರೆ ಎಂಬುದು ಜನರಿಗೆ ಗೊತ್ತಿದೆ’ ಎಂದರು.

ಬಸವಣ್ಣನ ಭಾವಚಿತ್ರ ಮೆರವಣಿಗೆಗೆ ಇಲ್ಲದ ಜನ ಶಿವಾಜಿ ಭಾವಚಿತ್ರದ ಮೆರವಣಿಗೆಯಲ್ಲಿ– ಬೇಸರ

ಜಾತಿ ಆಚರಿಸುವುದು ತಪ್ಪಲ್ಲ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹುಬ್ಬಳ್ಳಿಯಲ್ಲಿ ಒಂದೆರಡು ಲಕ್ಷ ಲಿಂಗಾಯತರಿದ್ದಾರೆ. ಬಸವ ಜಯಂತಿ ಪ್ರಯುಕ್ತ ಮೆರವಣಿಗೆ ಮಾಡಿದರೆ 250 ರಿಂದ 300 ಜನ ಸೇರಿದರೆ ಹೆಚ್ಚು. ಆದರೆ, ಶಿವಾಜಿ ಭಾವಚಿತ್ರ ಮೆರವಣಿಗೆ ಮಾಡಿದರೆ 2500 ರಿಂದ 3000 ಜನ ಸೇರುತ್ತಾರೆ. ಇವರ ಹೃದಯದೊಳಗೆ ಏನಿದೆ ಎಂದು ತಿಳಿಯುವ ಕೆಲಸವಾಗಬೇಕು’ ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಬಸವ ಸಮಿತಿ ಶನಿವಾರ ಹಮ್ಮಿಕೊಂಡಿದ್ದ ಬಿ.ಡಿ. ಜತ್ತಿಯವರ 112ನೇ ಜನ್ಮದಿನೋತ್ಸವ ಹಾಗೂ ಬಸವ ಸಮಿತಿ ವಜ್ರಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನ ವಿಚಾರಗಳನ್ನು ಮುಟ್ಟಿಸಲು ಯಾಕೆ ಸಾಧ್ಯವಾಗಿಲ್ಲ ಎಂಬುದರ ಬಗ್ಗೆ ಚರ್ಚೆಯಾಗಬೇಕು. ಏನು ತಪ್ಪಿದೆ ಎಂದು ತಿಳಿದುಕೊಂಡು ವಿಚಾರ ಮಾಡಬೇಕು ಎಂದು ಸಲಹೆ ನೀಡಿದರು.

‘ಭಾರತ ಜಾತ್ಯತೀತ ದೇಶ ಎಂದು ಮಾತಿನಲ್ಲಿ ಹೇಳುತ್ತೇವೆ. ಆದರೆ, ಎಲ್ಲ ಕಡೆ ಜಾತಿವಾದವೇ ಕಾಣುತ್ತಿದೆ. ಚುನಾವಣೆಯಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಬೇಕಿದ್ದರೆ ಜಾತಿ ಮಾತ್ರವಲ್ಲ, ಉಪಜಾತಿಯನ್ನೂ ಕೇಳಿಯೇ ನಿಲ್ಲಿಸಲಾಗುತ್ತಿದೆ. ಎಲ್ಲರೂ ಜಾತಿ ಆಚರಿಸುವಾಗ ನಾವು ಲಿಂಗಾಯತರು ಹಿಂದಕ್ಕೆ ಸರಿಯುವುದರಲ್ಲಿ ಅರ್ಥವಿಲ್ಲ. ನಾವು ಜಾತಿ ಆಚರಿಸುವುದರಲ್ಲಿ ತಪ್ಪಿಲ್ಲ’ ಎಂದು ಪ್ರತಿಪಾದಿಸಿದರು.

ಬಸವ ಸಮಿತಿ ಆಯೋಜಿಸಿದ್ದ ಬಿ.ಡಿ.ಜತ್ತಿ ಅವರ 112ನೇಯ ಜನ್ಮದಿನೋತ್ಸವ ಹಾಗೂ ಬಸವ ಸಮಿತಿ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಬೇಲಿ ಮಠದ ಪೀಠಾಧ್ಯಕ್ಷ ಶಿವರುದ್ರ ಸ್ವಾಮೀಜಿ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಬಿ. ಡಿ. ಜತ್ತಿ ಮತ್ತು ಬಸವಣ್ಣ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ‘ರಾಜ್ಯ, ದೇಶ ಮಾತ್ರವಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯ ಸಾಧಿಸಲು ಬಸವಣ್ಣನ ತತ್ವಗಳು ಬೇಕಾಗಿದೆ. ವಚನಗಳು ಮಾನವೀಯತೆಯ ಭಂಡಾರವಾಗಿದ್ದು, ಅವುಗಳನ್ನು ಸರ್ವರಿಗೂ ತಲುಪಿಸಬೇಕು’ ಎಂದು ತಿಳಿಸಿದರು.

‘ನಾವು ಆಡುವ ಮಾತು ಮತ್ತು ಮಾಡುವ ಕೆಲಸಗಳು ದೇಶಕ್ಕೆ ಪೂರಕವಾಗಿರಬೇಕು. ಅಧಿಕಾರಿಗಳು, ಜನಪ್ರತಿನಿಧಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗುವುದಿಲ್ಲ. ವಿದ್ಯಾರ್ಥಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗುತ್ತದೆ’ ಎಂದು ಹೇಳಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಬಸವಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅಧ್ಯಕ್ಷತೆ ವಹಿಸಿದ್ದರು. ಎನ್.ಜಿ. ಮಹಾದೇವಪ್ಪ ಅವರ ‘ಅಲ್ಲಮನ ವಜ್ರಗಳು’ ಕೃತಿ ಬಿಡುಗಡೆ ಮಾಡಲಾಯಿತು. ವಿವಿಧ ಮಹನೀಯರನ್ನು ಸನ್ಮಾನಿಸಲಾಯಿತು.

ಸುಧಾ, ಮಯೂರ ಓದಿರಿ...

ರೈಲು ಎಂಜಿನ್, ಬೋಗಿಗಳಿಗೆ ಎಐ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುರಕ್ಷತೆ ಹೆಚ್ಚಿಸಲು ರೈಲು ಬೋಗಿಗಳು ಮತ್ತು ಎಂಜಿನ್‌ಗಳಿಗೆ ಸುಮಾರು ₹15 ಸಾವಿರ ಕೋಟಿ ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಚಾಲಿತ 75 ಲಕ್ಷ ಸಿ.ಸಿ.ಟಿ.ವಿ. ಕ್ಯಾಮೆರಾ ಗಳನ್ನು ಅಳವಡಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ.

ರೈಲುಗಳ ಹಳಿ ತಪ್ಪಿಸಲು ನಡೆಸಿರುವ ಹಲವು ಶಂಕಿತ ಘಟನೆಗಳು ವರದಿಯಾಗಿರುವಾಗಲೇ ರೈಲ್ವೆ ಇಲಾಖೆ ಇಂತಹ ಕ್ರಮಕ್ಕೆ ಮುಂದಾಗಿದೆ.

ಮೂರು ತಿಂಗಳಲ್ಲಿ ಸಿ.ಸಿ.ಟಿ.ವಿ. ಗಳನ್ನು ಅಳವಡಿಸಲು ರೈಲ್ವೆಯು ಟೆಂಡರ್ ಕರೆಯುವ ಸಾಧ್ಯತೆಯಿದೆ. ಪ್ರಸ್ತುತ ಯೋಜನೆಯ ಪ್ರಕಾರ, ಟೆಂಡರ್ ಪಡೆದವರಿಗೆ ಆದೇಶವನ್ನು ನೀಡಿದ ನಂತರ ಒಂದು ವರ್ಷದ ಅವಧಿಯಲ್ಲಿ ಸಿ.ಸಿ.ಟಿ.ವಿಗಳ ಅಳವಡಿಕೆ ಪೂರ್ಣವಾಗುವುದನ್ನು ನಿರೀಕ್ಷಿಸಲಾಗಿದೆ. ಈ ಪ್ರಕ್ರಿಯೆತ್ವರಿತಗೊಳಿಸಲು, ಸಿ.ಟಿ.ಟಿ.ವಿ ಕ್ಯಾಮೆರಾಗಳ ಅನೇಕ ಮಾರಾಟಗಾರರನ್ನು ರೈಲ್ವೆಯು ಈ ಕೆಲಸಕ್ಕೆ ನಿಯೋಜಿಸಬಹುದು ಎಂದು ರೈಲ್ವೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುರಕ್ಷತಾ ಕ್ರಮಗಳ ಭಾಗವಾಗಿ, 40,000 ಬೋಗಿಗಳು, 14,000 ಎಂಜಿನ್‌ಗಳು ಮತ್ತು 6,000 ಇಎಂಯುಗಳಲ್ಲಿ ಸಿ.ಸಿ.ಟಿ.ವಿ.ಗಳನ್ನು ಸ್ಥಾಪಿಸಲು ರೈಲ್ವೆ ನಿರ್ಧರಿಸಿದೆ.

ರೈಲುಗಳ ಎಂಜಿನ್ ಮತ್ತು ಗಾರ್ಡ್ ಕೋಚ್‌ನ ಮುಂಭಾಗ, ಹಿಂಭಾಗ ಮತ್ತು ಬದಿಗಳಲ್ಲಿ ಹಾಗೂ ಬೋಗಿಗಳಲ್ಲಿ ಮತ್ತು ಜಾನುವಾರು ತಡೆಗೂ (ಕ್ಯಾಟಲ್ ಗಾರ್ಡ್) ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ರೈಲ್ವೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸ್ತುತ ಯೋಜನೆಯ ಪ್ರಕಾರ, ರೈಲು ಹಳಿಗಳಲ್ಲಿ ಅನುಮಾನಾಸ್ಪದ ವಸ್ತುಗಳನ್ನು ಪತ್ತೆಹಚ್ಚಲು ಮತ್ತು ತುರ್ತು ಬ್ರೇಕ್‌ಗಳನ್ನು ಅನ್ವಯಿಸಲು ಚಾಲಕರನ್ನು ಎಚ್ಚರಿಸಲು ಕ್ಯಾಮೆರಾಗಳಲ್ಲಿ ಎ.ಐ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ ಎಂದು ರೈಲ್ವೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲೊಕೊಮೋಟಿವ್ ಪೈಲಟ್‌ಗಳು ಅಥವಾ ರೈಲ್ವೆ ಸಿಬ್ಬಂದಿ ರೈಲ್ವೆ ಹಳಿಯಲ್ಲಿ ಮರದ ತುಂಡುಗಳು, ಸಿಗ್ನಲ್ ಟ್ಯಾಂಪರಿಂಗ್ ಮತ್ತು ರೈಲುಗಳನ್ನು ಹಳಿ ತಪ್ಪಿಸಲು ರೈಲು ಹಳಿಗಳ ಮೇಲೆ ಇರಿಸಲಾದ ಗ್ಯಾಸ್ ಸಿಲಿಂಡರ್‌ಗಳನ್ನು ಪತ್ತೆಹಚ್ಚಿದ 18ಕ್ಕೂ ಹೆಚ್ಚು ಘಟನೆಗಳು ಕಳೆದ ವರ್ಷದ ಜೂನ್‌ನಿಂದ ಇಲ್ಲಿಯವರೆಗೆ ನಡೆದಿವೆ. ರೈಲ್ವೆಯು ಪ್ರಕರಣ ಗಳನ್ನು ದಾಖಲಿಸಿ, ಕೆಲವು ಕಿಡಿಗೇಡಿಗಳನ್ನು ಬಂಧಿಸಿದೆ.

ಮುನಿರತ್ನ ಬಾಯಿ ಶುದ್ಧ ಮಾಡಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಯಿ ತೆಗೆದರೆ ಸಂಸ್ಕಾರ, ಸಂಸ್ಕೃತಿ ಬಗ್ಗೆ ಭಾಷಣ ಬಿಗಿಯುವ ಬಿಜೆಪಿ ನಾಯಕರೇ, ಮೊದಲು ಗಬ್ಬೆದ್ದು ನಾರುತ್ತಿರುವ ನಿಮ್ಮ ಶಾಸಕ ಮುನಿರತ್ನ ಅವರ ಬಾಯಿಯನ್ನು ಶುದ್ಧ ಮಾಡಿ. ನಂತರ ಊರಿಗೆ ಬುದ್ಧಿ ಹೇಳಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ‘ದಲಿತ ಸಮುದಾಯವರನ್ನು ಅತ್ಯಂತ ಅಶ್ಲೀಲವಾಗಿ,ಮನಸೋ ಇಚ್ಛೆ ನಿಂದಿಸಿರುವ ಶಾಸಕ ಮುನಿರತ್ನ ಅವರನ್ನು ಪಕ್ಷದಿಂದ ಹೊರದಬ್ಬಬೇಕು ಅಥವಾ ಅವರ ಹೇಳಿಕೆಗೆ ಬೆಂಬಲ ಕೊಟ್ಟು ದಲಿತ ವಿರೋಧಿಗಳು ಎಂದು ಒಪ್ಪಿಕೊಳ್ಳಬೇಕು’ ಎಂದಿದ್ದಾರೆ.

‘ದಲಿತ ಮತ್ತು ಒಕ್ಕಲಿಗ ಸಮುದಾಯವನ್ನು ಮುನಿರತ್ನ ನಿಂದಿಸಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಹಣ ನೀಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಸಿದ್ದಾರೆ. ಇವೆಲ್ಲ ಅತ್ಯಂತ ಗಂಭೀರ ಸ್ವರೂಪದ ಅಪರಾಧ’ ಎಂದಿದ್ದಾರೆ.

‘ಶೇ 40 ಕಮಿಷನ್ ಸರ್ಕಾರ ತೊಲಗಿದರೂ ಅದರಿಂದ ಹುಟ್ಟಿರುವ ರಕ್ತಬೀಜಾಸುರರು ಉಳಿದಿದ್ದಾರೆ. ನಾವು ಕೈಗೆತ್ತಿಕೊಂಡಿರುವ ಸ್ವಚ್ಛತಾ ಅಭಿಯಾನದಲ್ಲಿ ಈ ಹೊಲಸನ್ನು ಎಲ್ಲಿ ಇಡಬೇಕೋ ಅಲ್ಲಿಗೆ ತಲುಪಿಸುತ್ತೇವೆ’ ಎಂದೂ ಹೇಳಿದ್ದಾರೆ.

‘ಹಿಂದೂ ನಾವೆಲ್ಲ ಒಂದು’ ಎಂಬ ಬಿಜೆಪಿಯವರ ಘೋಷವಾಕ್ಯ ಕೇವಲ ಚುನಾವಣಾ ಕಾಲಕ್ಕಷ್ಟೇ ಸೀಮಿತ. ಚುನಾವಣೆ ಮುಗಿದರೆ ಈ ನಾಡಿನ ದಲಿತರು, ಶೋಷಿತರನ್ನು ಹಿಂದೂವಾಗಿ, ತಮ್ಮಲ್ಲಿ ಒಬ್ಬನಾಗಿ ಅವರು ಕಾಣುವುದಿಲ್ಲ’ ಎಂದಿದ್ದಾರೆ.

ಬಿಜೆಪಿ ಶಾಸಕ ಮುನಿರತ್ನ ಬಂಧನ

ಒಂದನೇ ಪುಟದಿಂದ...

ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣದಲ್ಲಿ ಮುನಿರತ್ನ ಅವರ ಗನ್‌ಮ್ಯಾನ್ ವಿಜಯ್‌ಕುಮಾರ್ (ಸರ್ಕಾರಿ ನೌಕರ), ಆಪ್ತ ಸಹಾಯಕ ಅಭಿಷೇಕ್ ಹಾಗೂ ಆಪ್ತ ವಸಂತಕುಮಾರ್ ಅವರನ್ನು ಪೊಲೀಸರು ತಡರಾತ್ರಿ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಎಫ್‌ಐಆರ್‌ನಲ್ಲಿ ಏನಿದೆ?: ‘ಆದಿ ದ್ರಾವಿಡ (ಎಸ್.ಸಿ) ಜನಾಂಗಕ್ಕೆ ಸೇರಿರುವ ನಾನು, 2015ರಿಂದ 2020ರ ವರೆಗೆ ಲಕ್ಷ್ಮಿದೇವಿ ನಗರ ವಾರ್ಡ್ ಸಂಖ್ಯೆ– 42ರ ಬಿಬಿಎಂಪಿ ಸದಸ್ಯನಾಗಿದ್ದೆ. ಬಿಬಿಎಂಪಿ ಕೇಂದ್ರ ಕಚೇರಿ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷನಾಗಿಯೂ ಕಾರ್ಯ ನಿರ್ವಹಿಸಿದ್ದೆ. ಕೆಲವು ವಿಚಾರಗಳಲ್ಲಿ ನನ್ನ ಹಾಗೂ ಮುನಿರತ್ನ ಅವರ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಸ್ನೇಹಿತರು, ಹಿತೈಷಿಗಳ ಎದುರು ಮುನಿರತ್ನ, ನನ್ನ ಜಾತಿ ನಿಂದನೆ ಮಾಡುತ್ತಿದ್ದರು. ಕೆಟ್ಟ ಪದಗಳನ್ನು ಬಳಸಿ, ನನ್ನನ್ನು ರಾಜಕೀಯವಾಗಿ ಬೆಳೆಯುವುದಕ್ಕೆ ಬಿಡಬಾರದೆಂದು ಹೇಳುತ್ತಿದ್ದರು’ ಎಂದು ವೇಲುನಾಯ್ಕರ್ ದೂರು ನೀಡಿದ್ದಾರೆ.

‘ಮುನಿರತ್ನ ಅವರು ಲಂಚಕ್ಕಾಗಿ ಹಿಂಸೆ ನೀಡುತ್ತಿದ್ದಾರೆ ಎಂದು ಗುತ್ತಿಗೆದಾರ ಚೆಲುವರಾಜು ಅಳಲು ತೋಡಿಕೊಂಡಿದ್ದರು. ಒಂದು ರೂಪಾಯಿ ಲಂಚ ಕೊಡದೆ ಕೆಲಸ ಮಾಡುವಂತೆ ಅವರಿಗೆ ತಿಳಿಸಿದ್ದೆ. ನಂತರ, ಚೆಲುವರಾಜು ಅವರನ್ನು ಮುನಿರತ್ನ ತನ್ನ ಕಚೇರಿಗೆ ಕರೆಸಿಕೊಂಡು, ನನ್ನ ಜಾತಿ ನಿಂದನೆ ಮಾಡಿ ಕುಟುಂಬದ ಸದಸ್ಯರನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ವೇಲುನಾಯ್ಕರ್ ಮಾತು ಕೇಳಿ ಕಮಿಷನ್ ಕೊಡುತ್ತಿಲ್ಲವೆಂದು ಬೆದರಿಸಿದ್ದರು. ದಲಿತ ಹಾಗೂ ಒಕ್ಕಲಿಗ ಸಮುದಾಯದ ಮಧ್ಯೆ ವೈಷಮ್ಯ ತಂದು ಘರ್ಷಣೆಗೆ ಪ್ರಚೋದನೆ ಉಂಟು ಮಾಡುವ ರೀತಿಯಲ್ಲಿ ಮಾತನಾಡಿದ್ದರು. ಅದನ್ನು ಚೆಲುವರಾಜು ಆಡಿಯೊ ರೆಕಾರ್ಡ್ ಮಾಡಿಕೊಂಡಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಚೆಲುವರಾಜು ಮೇಲೆ ಶಾಸಕರಿಂದ ಹಲ್ಲೆ

‘ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 42ರಲ್ಲಿ (ಲಕ್ಷ್ಮೀದೇವಿನಗರ) ಗಂಗಾ ಎಂಟರ್‌ಪ್ರೈಸಸ್ ಎಂಬ ಹೆಸರಿನಲ್ಲಿ ಘನತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮಾಡುತ್ತಿದ್ದೆ. 2021ರ ಸೆಪ್ಟೆಂಬರ್‌ನಲ್ಲಿ ಮುನಿರತ್ನ ಗನ್‌ಮ್ಯಾನ್ ವಿಜಯ್‌ಕುಮಾರ್ ಕರೆ ಮಾಡಿ, ಕಚೇರಿಗೆ ಬರುವಂತೆ ಹೇಳಿದ್ದರು. ಕಚೇರಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಕೆಲಸಕ್ಕೆ 10 ಆಟೊ ರಿಕ್ಷಾ ಕೊಡಿಸುತ್ತೇನೆ. ಇದಕ್ಕೆ ₹20 ಲಕ್ಷ ಕೊಡುವಂತೆ ಬೇಡಿಕೆ ಇಟ್ಟಿದ್ದರು. ಸ್ನೇಹಿತರ ಬಳಿ ಸಾಲ ಪಡೆದು ₹20 ಲಕ್ಷ ತೆಗೆದುಕೊಂಡು ಹೋಗಿದ್ದೆ. ಅವರ ಸೂಚನೆಯಂತೆ ಗನ್‌ಮ್ಯಾನ್‌ಗೆ ನೀಡಿದ್ದೆ. ಎರಡು ದಿನಗಳ ಬಳಿಕ ಶಾಸಕರನ್ನು ವಿಚಾರಿಸಿದಾಗ ಹೆಚ್ಚುವರಿ 10 ಆಟೊ ನೀಡುವುದಾಗಿ ಹೇಳಿ ಹಣ ಪಡೆದು ಮೋಸ ಮಾಡಿದ್ದರು’ ಎಂದು ಚೆಲುವರಾಜು ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘2023ರ ಸೆಪ್ಟೆಂಬರ್‌ನಲ್ಲಿ ಆಪ್ತ ಸಹಾಯಕ ಅಭಿಷೇಕ್ ಅವರಿಂದ ಕರೆ ಮಾಡಿಸಿ ಕಚೇರಿಗೆ ಬರುವಂತೆ ತಿಳಿಸಿದ್ದರು. ಆಗ ₹30 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಅಷ್ಟು ಹಣ ನೀಡಲು ಸಾಧ್ಯವಿಲ್ಲ. ಸಾಲ ಮಾಡಿ, ₹15 ಲಕ್ಷ ಹೊಂದಿಸುತ್ತೇನೆ ಎಂದಿದ್ದೆ. ಅದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೇಗ ಹಣ ತಂದು ಕೊಡಲು ಹೇಳಿದ್ದರು. ಮತ್ತೆ ಕರೆ ಮಾಡಿ ಕಚೇರಿಗೆ ಬರುವಂತೆ ಹೇಳಿದ್ದರು. ಹಣ ತಂದಿಲ್ಲ ಎಂದಾಗ, ನನ್ನ ಮುಖದ ಮೇಲೆ ಶಾಸಕರು ಹಲ್ಲೆ ನಡೆಸಿದ್ದರು.

2,500 ಕಿ.ಮೀ.ಮಾನವ ಸರಪಳಿ ಇಂದು

ಒಂದನೇ ಪುಟದಿಂದ...

ಸಮಾಜ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ಆಯೋಜಿಸಿರುವ ಸರಪಳಿಯ ಸಂಯೋಜನೆಗೆ 32 ಇಲಾಖೆಗಳ ಸುಮಾರು ಎಂಟು ಲಕ್ಷಕ್ಕೂ ಅಧಿಕ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ಮಾನವ ಸರಪಳಿಯ ಸಂಪೂರ್ಣ ವೀಕ್ಷಣೆಗೆ ಸರ್ಕಾರ ವಿಶ್ವ ಸುಧಾರಿತ ತಂತ್ರಜ್ಞಾನ ಬಳಸುತ್ತಿದೆ. ಲಂಡನ್‌ನ ವಿಶ್ವ ದಾಖಲೆ ಪರಿಶೀಲಿಸುವ ತಂಡದ ಸದಸ್ಯರು ಉಪಸ್ಥಿತರಿದ್ದು, ವೀಕ್ಷಿಸಲಿದ್ದಾರೆ.

ಈ ವಿಶೇಷ ಮಾನವ ಸರಪಳಿ ಪ್ರತಿ ಜಿಲ್ಲೆ, ತಾಲ್ಲೂಕು ಹಾಗೂ ಪ್ರಮುಖ ಗ್ರಾಮಗಳಲ್ಲಿ ಹಾದು ಹೋಗುವ ಹೆದ್ದಾರಿಗಳನ್ನು ಒಳಗೊಂಡಿರುತ್ತದೆ. ಭಾಗವಹಿಸುವ ಮಕ್ಕಳು, ಜನರಿಗೆ ನೀರು, ಹಾಲು, ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಆಯಾ ಠಾಣಾ ವ್ಯಾಪ್ತಿಯ ಪೊಲೀಸರಿಗೆ ಸಂಚಾರ ನಿರ್ವಹಣೆಯ ಹೊಣೆಗಾರಿಕೆ ನೀಡಲಾಗಿದೆ. ಸ್ಥಳೀಯರು ಸಹ ಎಲ್ಲೆಡೆ ಹಬ್ಬದಂತೆ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಸಮಯ	ಸರಪಳಿ ಚಟುವಟಿಕೆ
9.30-9.37	ಸರದಿಯಲ್ಲಿ ನಿಲ್ಲುವುದು
9.37-9.40	ನಾಡಗೀತೆ
9.40-9.55	ಮುಖ್ಯ ಅತಿಥಿಗಳಿಂದ ಭಾಷಣ
9.55-9.57	ಸಂವಿಧಾನದ ಪ್ರಸ್ತಾವನೆ ಓದುವುದು
9.57-9.59	ಕೈಕೈ ಹಿಡಿದು ಮಾನವ ಸರಪಳಿ ನಿರ್ಮಾಣ
10	ಜೈ ಹಿಂದ್–ಜೈ ಕರ್ನಾಟಕ ಘೋಷಣೆ ಕೂಗುವ ಮೂಲಕ ಮುಕ್ತಾಯ

ಬೆಳಿಗ್ಗೆ 9ಕ್ಕೆ ಸಿ.ಎಂ ಚಾಲನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗ ಬೆಳಿಗ್ಗೆ 9ಕ್ಕೆ ಸಂವಿಧಾನ ಪೀಠಿಕೆ ಓದುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮಹತ್ವ ಸಾರುತ್ತಾ ಜಾಗೃತಿ ಮೂಡಿಸಲು ವಿಶ್ವಮಟ್ಟದ ಕಾರ್ಯಕ್ರಮ ರೂಪಿಸಲಾಗಿದೆ. ಎಲ್ಲರೂ ಭಾಗಿಯಾಗುವ ಮೂಲಕ ಪ್ರಜಾಪ್ರಭುತ್ವ ಉಳಿಸಿ, ಬೆಳೆಸಲಿದ್ದಾರೆ

ಎಚ್.ಸಿ. ಮಹಾದೇವಪ್ಪ

ಸಮಾಜ ಕಲ್ಯಾಣ ಸಚಿವ.

ನಂತರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯಾ ಜಿಲ್ಲೆಗಳ ಜನರು ಸಂವಿಧಾನ ಪೀಠಿಕೆ ಓದಿ ಮಾನವ ಸರಪಳಿ ನಿರ್ಮಿಸುತ್ತಾರೆ. ಪ್ರತಿ ಜಿಲ್ಲೆ ತಾಲೂಕುಗಳಲ್ಲೂ ಕಾರ್ಯಕ್ರಮ ನಡೆಯಲಿದೆ. ದಕ್ಷಿಣ ಕನ್ನಡದ ಜನರು ಸಮುದ್ರದಲ್ಲೇ ನಿಂತು ಮಾನವ ಸರಪಳಿ ರಚಿಸಲಿದ್ದಾರೆ. ಮಂಗಳೂರಿನ ಹರೇಕಳ ಹಾಜಬ್ಬ ಅವರನ್ನು ರಾಯಭಾರಿಯನ್ನಾಗಿ ನೇಮಿಸಲಾಗಿದೆ.

ವೇಷ, ಭೂಷಣ ಹಾಗೂ ವಿಶೇಷ ಸಂದೇಶ ಸಾರುವ ವಿಭಿನ್ನ ಪ್ರಯತ್ನ ಮಾಡಿದ ಜಿಲ್ಲೆಗಳಿಗೆ ಐದು ವಿಭಾಗಗಳಲ್ಲಿ ತಲಾ ಮೂರು ಪ್ರಶಸ್ತಿ ನೀಡಲಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ತಿಳಿಸಿದ್ದಾರೆ.

‘ಲೋಕಾ’ ಪ್ರಕರಣ: ರಾಜ್ಯಪಾಲ ನಿರ್ದೇಶನ

ಒಂದನೇ ಪುಟದಿಂದ...

ರಾಜ್ಯಪಾಲರ ನಿರ್ದೇಶನವೇನು?: ‘ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅವಲೋಕಿಸಿದಾಗ, ಲೋಕಾಯುಕ್ತ ಸಂಸ್ಥೆಪ್ರಾಸಿಕ್ಯೂಷನ್ ಮಂಜೂರಾತಿಗಾಗಿ ಕೋರಿದ ಕೆಲವು ಪ್ರಕರಣಗಳಲ್ಲಿ ನಿರ್ಧಾರ ತೆಗೆದುಕೊಂಡಿರುವುದನ್ನು ಗಮನಿಸಿದ್ದೇನೆ. ಲೋಕಾಯುಕ್ತದ ಕೆಲವು ಪ್ರಕರಣಗಳಲ್ಲಿನ ಪ್ರಸ್ತಾವಗಳನ್ನು ರಾಜ್ಯ ಸರ್ಕಾರ ತಿರಸ್ಕರಿಸಿದೆ. ಕೆಲವು ಪ್ರಕರಣಗಳಲ್ಲಿ ಮಂಜೂರಾತಿ ನೀಡಲಾಗಿದೆ. ಅಲ್ಲದೆ, ಇನ್ನೂ ಕೆಲವು ಪ್ರಕರಣಗಳಲ್ಲಿ ಎಚ್ಚರಿಕೆ ನೀಡಿ ತಿರಸ್ಕರಿಸಲಾಗಿದೆ’.

‘ಹೀಗಾಗಿ, ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ 2023ರ ಮೇ 20ರಿಂದ ಇಲ್ಲಿಯವರೆಗೆ ಲೋಕಾಯುಕ್ತದಿಂದ ರಾಜ್ಯ ಸರ್ಕಾರವು ಸ್ವೀಕರಿಸಿದ ಎಲ್ಲ ಪ್ರಸ್ತಾವಗಳ ಸಮಗ್ರವಾದ ವಿವರಗಳನ್ನು ನಾನು ನೀಡಿರುವ ನಮೂನೆಯಲ್ಲಿ ಒದಗಿಸಬೇಕು’ ಎಂದು ರಾಜ್ಯಪಾಲರು ನಿರ್ದೇಶನ ನೀಡಿದ್ದಾರೆ.

ತಿಪಟೂರು: ಉಂಡೆ ಕೊಬ್ಬರಿ ಬೆಲೆ ದಿಢೀರ್ ಕುಸಿತ

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು ಜಿಲ್ಲೆ): ಮಾರುಕಟ್ಟೆಯಲ್ಲಿ ಕೊಬ್ಬರಿ ಬೆಲೆ ದಿಢೀರ್ ಕುಸಿತ ಕಂಡಿದ್ದು ರೈತರು ಕಂಗಾಲಾಗಿದ್ದಾರೆ. ಮೂರೇ ದಿನದಲ್ಲಿ ₹1,300 ಕಡಿಮೆಯಾಗಿದೆ.

ತಿಪಟೂರು ಎಪಿಎಂಸಿಯಲ್ಲಿ ಸೆ. 11ರಂದು ಕ್ವಿಂಟಲ್ ಕೊಬ್ಬರಿ ₹15,022ಕ್ಕೆ ಹರಾಜಾಗಿತ್ತು. ಶನಿವಾರ ₹13,700ಕ್ಕೆ ಕುಸಿದಿದೆ. ಮೂರು ದಿನದ ಹಿಂದೆ 2,150 ಕ್ವಿಂಟಲ್ (5,002 ಚೀಲ) ಆವಕ ಆಗಿತ್ತು. ಶನಿವಾರ 4,304 ಕ್ವಿಂಟಲ್ (10,011 ಚೀಲ) ಕೊಬ್ಬರಿಯನ್ನು ಮಾರುಕಟ್ಟೆಗೆ ತರಲಾಗಿತ್ತು. ಕನಿಷ್ಠ ₹13 ಸಾವಿರ ದರ ಸಿಕ್ಕಿದೆ.

ಜಿಲ್ಲೆಯ ವಿವಿಧ ಭಾಗದ ರೈತರು ಬೆಲೆ ಏರಿಕೆಯ ಆಶಾಭಾವನೆಯೊಂದಿಗೆ ಹಲವು ದಿನಗಳಿಂದ ಸಂಗ್ರಹಿಸಿಟ್ಟಿದ್ದ ಕೊಬ್ಬರಿಯನ್ನು ಮಾರುಕಟ್ಟೆಗೆ ತಂದಿದ್ದರು. ದರ ಇಳಿಕೆ ಆಗಿರುವುದನ್ನು ಕಂಡು ಸಪ್ಪೆ ಮೋರೆ ಹೊತ್ತು ಮನೆಗಳಿಗೆ ವಾಪಸಾದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

4ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ಸಿ ಹೆಚ್ ಜಾಕೋಬ್ ಲೋಬೊ
ಜನನ: 19.06.1930 – ಮರಣ: 14.09.2020
ಪ್ರೀತಿಯ ಅಪ್ಪಾ, ಪ್ರತಿದಿನವೂ ನಿಮ್ಮನ್ನು ನೆನೆಯುತ್ತೇವೆ. ದೇವರು ನಿಮ್ಮ ಆತ್ಮಕ್ಕೆ ಶಾಂತಿಸಿಗಲಿ ಎಂದು ಪ್ರಾರ್ಥಿಸುವ.
ನಿಮ್ಮ ನಲ್ಮೆಯ ಮಕ್ಕಳು, ಮೊಮ್ಮಕ್ಕಳು, ಜಾಕ್ವೆಲಿನ್ ಪರಿವಾರ

ಶ್ರೀಮತಿ ಸುಂದರಮ್ಮ 15–09–2017
ಶ್ರೀ ಕೆ. ಚಿಕ್ಕಣ್ಣ 15–05–1982
ಚಿರಸ್ಮರಣೆ
ಇಂದ
ಸುಂದರ್ ಕುಮಾರ್ (ಬಿಳಿಯಣ್ಣ) ಮತ್ತು ಕುಟುಂಬ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಈರುಳ್ಳಿ ಧಾರಣೆ ಏರುಮುಖ

ಕೇಂದ್ರ ಸರ್ಕಾರ ಈರುಳ್ಳಿ ಮೇಲಿನ ಕನಿಷ್ಠ ರಫ್ತು ದರವನ್ನು ರದ್ದುಪಡಿಸಿದೆ. ಮೇ 4ರಂದು ವಿಧಿಸಿದ್ದ ರಫ್ತು ಸುಂಕದಲ್ಲಿ ಅರ್ಧದಷ್ಟು ಕಡಿತಗೊಳಿಸಿದೆ. ಇದರಿಂದ ಮಾರುಕಟ್ಟೆಗೆ ಆವಕ ಕಡಿಮೆಯಾಗುತ್ತಿದೆ. ಇದು ಸಗಟು ಧಾರಣೆ ಏರಿಕೆಗೂ ಕಾರಣವಾಗಿದೆ. ಇದೇ ಪರಿಸ್ಥಿತಿ ಮುಂದುವರಿಸಿದರೆ ಮುಂಬರುವ ದಿನಗಳಲ್ಲಿ ಚಿಲ್ಲರೆ ದರದಲ್ಲಿ ಏರಿಕೆಯಾಗುವ ಸಾಧ್ಯತೆಯಿದೆ ಎಂಬುದು ವ್ಯಾಪಾರಿಗಳ ಅನಿಸಿಕೆ

ಶ್ರಾವಣ ಬಳಿಕ ಹೆಚ್ಚಿದ ಬೇಡಿಕೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಕಳೆದ ಒಂದು ವಾರದಿಂದ ಈರುಳ್ಳಿ ದರ ಏರಿಕೆಯಾಗುತ್ತಿದೆ.

ಕಳೆದ ಶನಿವಾರ (ಸೆಪ್ಟೆಂಬರ್ 7) ಕೆ.ಜಿಗೆ ₹40 ಇದ್ದ ದರ, ಈಗ ₹60ಕ್ಕೆ ಜಿಗಿದಿದೆ. ಬೆಳಗಾವಿ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ಗರಿಷ್ಠ ₹3,000ದಿಂದ ₹4,000 ಇದ್ದ ಬೆಲೆಯು ಪ್ರಸ್ತುತ ₹5,200ಕ್ಕೆ ಮುಟ್ಟಿದೆ.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಪ್ರತಿ ಬುಧವಾರ ಮತ್ತು ಶನಿವಾರ ಹರಾಜು ಪ್ರಕ್ರಿಯೆ ನಡೆಯುತ್ತದೆ. ಕಳೆದ ಬುಧವಾರ (ಸೆಪ್ಟೆಂಬರ್ 11) ಕನಿಷ್ಠ ₹3,000, ಗರಿಷ್ಠ ₹5,000 ದರ ಇತ್ತು. ಒಂದೇ ದಿನದಲ್ಲಿ 90 ಲೋಡ್ ಲಾರಿಗಳಷ್ಟು ಈರುಳ್ಳಿ ಮಾರಾಟವಾಗಿದೆ. ಮೂರು ದಿನದಲ್ಲಿ ಮತ್ತೆ ₹200 ಏರಿಕೆ ಕಂಡಿದೆ.

ಹಾವೇರಿ ನಗರದ ಚಿಲ್ಲರೆ ಮಾರುಕಟ್ಟೆಯಲ್ಲಿ ರಾಜ್ಯದಲ್ಲೇ ಅತಿಹೆಚ್ಚು ಎಂದರೆ ಕೆ.ಜಿಗೆ ಕನಿಷ್ಠ ₹60ರಿಂದ ಗರಿಷ್ಠ ₹70ರವರೆಗೆ ಮಾರಾಟವಾಗುತ್ತಿದೆ. ವಾರದ ಹಿಂದೆ ಇಲ್ಲಿ ಕನಿಷ್ಠ ₹50ರಿಂದ ಗರಿಷ್ಠ ₹55 ದರ ಇತ್ತು.

ಬಾಗಲಕೋಟೆಯಲ್ಲಿ ಕೂಡ 'ಎ' ಗ್ರೇಡ್ ಈರುಳ್ಳಿ ಪ್ರತಿ ಕೆ.ಜಿಗೆ ₹ 50ರಿಂದ ₹56, ಉತ್ತರ ಕನ್ನಡದಲ್ಲಿ ₹60 ಮತ್ತು ವಿಜಯನಗರದಲ್ಲಿ ₹50ರಿಂದ ₹60ರಂತೆ ಬಿಕರಿ ಯಾಗುತ್ತಿದೆ. ರಾಜ್ಯದಲ್ಲಿ ಈರುಳ್ಳಿಯ ಮಾದರಿ ದರವೇ ಕ್ವಿಂಟಲ್‌ಗೆ ₹4,200ರಿಂದ ₹5,000 ಇದೆ.

ದರ ಏರಿಕೆಗೆ ಕಾರಣ ಏನು?: ಶ್ರಾವಣ ಮಾಸ ಮುಗಿದ ಬಳಿಕ ಮಾಂಸಾಹಾರದ ಹೋಟೆಲ್, ರೆಸ್ಟೋರೆಂಟ್, ಖಾನಾವಳಿ, ಬಾರ್‌ಗಳಿಂದ ಈರುಳ್ಳಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಇದು ಪ್ರತಿ ವರ್ಷದ ಬೆಳವಣಿಗೆಯಾಗಿದೆ.

'ಈ ಬಾರಿ ಉತ್ತರ ಭಾರತದಲ್ಲಿ ಅತಿವೃಷ್ಟಿಯಿಂದ ಈರುಳ್ಳಿ ಫಸಲು ಹಾಳಾಗಿದೆ. ಗುಜರಾತ್, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶಕ್ಕೆ ಹೆಚ್ಚು ರವಾನೆ ಆಗುತ್ತಿದೆ. ಮುಂಬೈ, ಪುಣೆ, ಸೂರತ್, ದೆಹಲಿ ಮುಂತಾದ ನಗರಗಳಲ್ಲೂ ಬೇಡಿಕೆ ಹೆಚ್ಚಿದ್ದರಿಂದ ಇಲ್ಲಿ ಮಾರಾಟ ಆಗಬೇಕಾದ ಈರುಳ್ಳಿ ಆ ಪ್ರದೇಶಕ್ಕೆ ಪೂರೈಕೆಯಾಗು ತ್ತಿದೆ. ಇನ್ನೊಂದೆಡೆ, ಈ ಬಾರಿಯ ಮುಂಗಾರು ಫಸಲು ಇನ್ನೂ ಮಾರುಕಟ್ಟೆಗೆ ಬಂದಿಲ್ಲ. ಹಾಗಾಗಿ, ದರ ಏರಿಕೆ ಕಂಡಿದೆ' ಎನ್ನುತ್ತಾರೆ ಎಪಿಎಂಸಿ ಅಧಿಕಾರಿಗಳು.



ಬೆಳಗಾವಿಯ ಎಪಿಎಂಸಿಯಲ್ಲಿ ಶನಿವಾರ ಈರುಳ್ಳಿ ಲೋಡ್ ಮಾಡಿದ ಕಾರ್ಮಿಕ

> **ಅಕ್ಟೋಬರ್ ನಂತರ ಹೊಸ ಈರುಳ್ಳಿ ಮಾರುಕಟ್ಟೆ ಬರಲಿದೆ. ಜನವರಿವರೆಗೆ ದರ ಹೀಗೆ ಇದ್ದರೆ ಮಾತ್ರ ರೈತರಿಗೆ ಲಾಭ ಸಿಗಲಿದೆ**
> **ಮಲ್ಲಪ್ಪ ಶೇಡಬಾಳ,** ರೈತ, ಕಲ್ಲೋಳಿ

ಕ್ವಿಂಟಲ್‌ಗೆ ₹600 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರ್ಕಾರವು ಈರುಳ್ಳಿ ಮೇಲಿನ ಕನಿಷ್ಠ ರಫ್ತು ದರವನ್ನು (ಎಂಇಪಿ) ರದ್ದುಪಡಿಸಿದೆ. ಅಲ್ಲದೆ, ಈರುಳ್ಳಿ ರಫ್ತು ಮೇಲೆ ವಿಧಿಸಿದ್ದ ಶೇ 40ರಷ್ಟು ಸುಂಕವನ್ನು ಅರ್ಧದಷ್ಟು ಕಡಿತಗೊಳಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಪೂರೈಕೆ ಸುಧಾರಿಸಲು ಮತ್ತು ಬೆಲೆ ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮಕೈಗೊಂಡಿದೆ. ಪ್ರತಿ ಟನ್‌ಗೆ ₹46,154 ಎಂಇಪಿ ನಿಗದಿಪಡಿಸಲಾಗಿತ್ತು.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಈರುಳ್ಳಿ ಬೆಳೆಯಲಾಗುತ್ತದೆ. ಆ ರಾಜ್ಯದ ವಿಧಾನಸಭೆಗೆ ಶೀಘ್ರವೇ ಚುನಾವಣೆ ಘೋಷಣೆಯಾಗಲಿದೆ. ಹಾಗಾಗಿ, ರಾಜಕೀಯ ಲಾಭದ ಲೆಕ್ಕಾಚಾರದಲ್ಲಿ ಸರ್ಕಾರ ಈ ಕ್ರಮಕೈಗೊಂಡಿದೆ ಎಂದು ಹೇಳಲಾಗಿದೆ.

ಸರ್ಕಾರದ ಈ ಕ್ರಮದ ಬೆನ್ನಲ್ಲೇ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಶನಿವಾರ ಸಗಟು ಬೆಲೆಯು ಕ್ವಿಂಟಲ್‌ಗೆ ₹600 ಏರಿಕೆಯಾಗಿದೆ.

'ಎಂಇಪಿ ರದ್ದತಿ ಹಾಗೂ ರಫ್ತು ಸುಂಕವನ್ನು ಶೇ 20ಕ್ಕೆ ಇಳಿಸಿರುವುದು ವರ್ತಕರಿಗೆ ವರದಾನವಾಗಿದೆ. ಬಹುತೇಕರು ರಫ್ತಿಗೆ ಮುಂದಾಗುತ್ತಾರೆ. ಶುಕ್ರವಾರ ಮಾರುಕಟ್ಟೆಗೆ 61 ಸಾವಿರ ಚೀಲ (ಪ್ರತಿ ಚೀಲ 50 ಕೆ.ಜಿ) ಈರುಳ್ಳಿ ಪೂರೈಕೆಯಾಗಿತ್ತು. ಶನಿವಾರ 51 ಸಾವಿರ ಚೀಲ ಪೂರೈಕೆಯಾಗಿದೆ. ಇದರಿಂದ ಸಗಟು ಬೆಲೆ ಏರಿಕೆಯಾಗಿದೆ' ಎಂದು ವರ್ತಕ ಜಿ. ಲೋಕಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಎ' ಗ್ರೇಡ್ ಈರುಳ್ಳಿ ಪ್ರತಿ ಕ್ವಿಂಟಲ್‌ಗೆ 4,000ದಿಂದ ₹4,200ಕ್ಕೆ ಮಾರಾಟವಾಗಿದೆ. ವರ್ತಕರು ರಫ್ತಿಗೆ ಮುಂದಾದರೆ ಮಾರುಕಟ್ಟೆಗೆ ಪೂರೈಕೆ ಮತ್ತಷ್ಟು ಕಡಿಮೆಯಾಗಲಿದೆ. ಇದರಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ದರ ಏರಿಕೆಯಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ' ಎಂದರು.

38 ಲಕ್ಷ ಟನ್ — ರೈತರು ಮತ್ತು ವರ್ತಕರ ಬಳಿ ಇರುವ ಈರುಳ್ಳಿ ದಾಸ್ತಾನು ಪ್ರಮಾಣ

2.6 ಲಕ್ಷ ಟನ್ — ಪ್ರಸಕ್ತ ವರ್ಷದ ಜುಲೈ ಅಂತ್ಯಕ್ಕೆ ರಫ್ತು ಮಾಡಿರುವ ಈರುಳ್ಳಿ

16.07 ಲಕ್ಷ ಟನ್ — 2023–24ರಲ್ಲಿ ರಫ್ತು ಮಾಡಿದ ಈರುಳ್ಳಿ ಪ್ರಮಾಣ

2.9 ಲಕ್ಷ ಹೆಕ್ಟೇರ್ — ಮುಂಗಾರಿನಲ್ಲಿ ಈರುಳ್ಳಿ ಬಿತ್ತನೆ ಆಗಿರುವ ಪ್ರದೇಶ

ದೆಹಲಿ, ಮುಂಬೈನಲ್ಲಿ ದರ ಇಳಿಕೆ

ನವದೆಹಲಿ (ಪಿಟಿಐ): ರಿಯಾಯಿತಿ ದರದಡಿ ಈರುಳ್ಳಿ ಮಾರಾಟಕ್ಕೆ ಚಾಲನೆ ನೀಡಿರುವುದರಿಂದ ದೇಶದ ಪ್ರಮುಖ ನಗರಗಳ ವ್ಯಾಪ್ತಿಯ ಚಿಲ್ಲರೆ ಮಾರುಕಟ್ಟೆಯಲ್ಲಿ ಧಾರಣೆ ಇಳಿಕೆಯಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಶನಿವಾರ ತಿಳಿಸಿದೆ.

ಕೇಂದ್ರ ಸರ್ಕಾರವು ಸೆಪ್ಟೆಂಬರ್ 5ರಂದು ದೆಹಲಿ ಮತ್ತು ಮುಂಬೈನಲ್ಲಿ ಪ್ರತಿ ಕೆ.ಜಿಗೆ ₹35 ದರದಲ್ಲಿ ಸಂಚಾರ ವಾಹನಗಳು, ಎನ್‌ಸಿಸಿಎಫ್ ಮತ್ತು ನಾಫೆಡ್ ಮೂಲಕ ಮಾರಾಟಕ್ಕೆ ಚಾಲನೆ ನೀಡಿತ್ತು. ಎರಡನೇ ಹಂತದಲ್ಲಿ ಬೆಂಗಳೂರು ಸೇರಿ ದೇಶದ ಪ್ರಮುಖ ನಗರಗಳಲ್ಲಿ ಮಾರಾಟ ಆರಂಭಿಸುವುದಾಗಿ ಹೇಳಿದೆ.

ಸದ್ಯ ದೆಹಲಿಯಲ್ಲಿ ಪ್ರತಿ ಕೆ.ಜಿ ದರವು ₹60ರಿಂದ ₹55ಕ್ಕೆ ಇಳಿಕೆಯಾಗಿದೆ. ಮುಂಬೈನಲ್ಲಿ ₹61ರಿಂದ ₹56ಕ್ಕೆ ಹಾಗೂ ಚೆನ್ನೈನಲ್ಲಿ ₹65ರಿಂದ 58ಕ್ಕೆ ತಗ್ಗಿದೆ ಎಂದು ವಿವರಿಸಿದೆ.

ಬೇಡಿಕೆಗೆ ಅನುಗುಣವಾಗಿ ರಿಯಾಯಿತಿ ದರದಡಿ ಈರುಳ್ಳಿ ಮಾರಾಟ ಹೆಚ್ಚಳಕ್ಕೆ ಕೇಂದ್ರ ನಿರ್ಧರಿಸಿದೆ. ಇ-ಕಾಮರ್ಸ್ ವೇದಿಕೆಗಳು, ಕೇಂದ್ರೀಯ ಭಂಡಾರ ಮಳಿಗೆಗಳು ಮತ್ತು ಮದರ್ ಡೈರಿಯ ಸಫಲ್ ಮಳಿಗೆಗಳ ಮೂಲಕವೂ ಮಾರಾಟಕ್ಕೆ ಸಿದ್ಧತೆ ನಡೆಸಿದೆ.

ಈರುಳ್ಳಿ ಕಟಾವು ಮಾಡಿದ ಬಳಿಕ ಸಕಾಲದಲ್ಲಿ ಸಂಸ್ಕರಣೆ ಮಾಡದಿದ್ದರೆ ಬಹುಬೇಗ ಹಾಳಾಗುತ್ತದೆ. ಹಾಗಾಗಿ, ಸಂಸ್ಕರಣಾ ಸ್ಥಳಗಳಿಗೆ ಸಾಗಿಸಲು ಅನುವಾಗುವಂತೆ ರಸ್ತೆ ಹಾಗೂ ರೈಲು ಸಾಗಣೆಯನ್ನು ಬಲಪಡಿಸಲಾಗಿದೆ. ಮಾರುಕಟ್ಟೆಯಲ್ಲಿನ ಬೆಲೆ ಮತ್ತು ಬೇಡಿಕೆಗೆ ಅನುಗುಣವಾಗಿ ಈರುಳ್ಳಿ ಪೂರೈಸಲು ರಾಜ್ಯ ಸರ್ಕಾರಗಳ ಜೊತೆಗೆ ನಿರಂತರವಾಗಿ ಸಂಪರ್ಕ ಹೊಂದಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಸದ್ಯ 4.7 ಲಕ್ಷ ಟನ್‌ನಷ್ಟು ಈರುಳ್ಳಿ ಕಾಪು ದಾಸ್ತಾನಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಮುಂಗಾರು ಅವಧಿಯಲ್ಲಿ ಈರುಳ್ಳಿ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಮುಂಬರುವ ತಿಂಗಳುಗಳಲ್ಲೂ ಬೆಲೆ ನಿಯಂತ್ರಣದಲ್ಲಿ ಇರಲಿದೆ' ಎಂದು ಹೇಳಿದೆ.

ಬೆಳೆಗಾರರ ಬಳಿ ಸರಕು ಖಾಲಿ

ನಾಸಿಕ್ (ಮಹಾರಾಷ್ಟ್ರ) (ಪಿಟಿಐ): ಕನಿಷ್ಠ ರಫ್ತು ದರ ರದ್ದು ಹಾಗೂ ರಫ್ತು ಸುಂಕವನ್ನು ಅರ್ಧದಷ್ಟು ಇಳಿಕೆ ಮಾಡಿರುವುದರಿಂದ ದೇಶದ ಅತಿದೊಡ್ಡ ಈರುಳ್ಳಿ ಸಗಟು ಮಾರುಕಟ್ಟೆಯಾದ ಲಾಸನ್‌ಗಾಂವ್ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಶನಿವಾರ ಬೆಲೆ ಏರಿಕೆಯಾಗಿದೆ.

ಪ್ರತಿ ಕ್ವಿಂಟಲ್‌ಗೆ ಸರಾಸರಿ ₹433 ಏರಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರತಿ ಕ್ವಿಂಟಲ್‌ಗೆ ₹3,700ರಿಂದ ₹4,951 ಧಾರಣೆ ಇದೆ. ಸರಾಸರಿ ಬೆಲೆ ₹4,700 ಆಗಿದೆ.

'ಎಂಇಪಿ ರದ್ದುಪಡಿರುವುದು ಒಳ್ಳೆಯ ನಿರ್ಧಾರ. ರಫ್ತಿಗೆ ನಿರ್ಬಂಧ ಹೇರಿದರೆ ಮಾರುಕಟ್ಟೆ ಮೇಲೆ ಪರಿಣಾಮ ಬೀರಲಿದೆ. ಈಗ ಎಂಇಪಿ ರದ್ದುಪಡಿಸಿದರೂ ರೈತರ ಬಳಿ ಈರುಳ್ಳಿ ಖಾಲಿಯಾಗಿದೆ' ಎಂದು ಎಪಿಎಂಸಿ ಅಧ್ಯಕ್ಷ ಬಾಳಸಾಹೇಬ್ ಕ್ಷೀರಸಾಗರ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988
ರಿಯಲ್ ಎಸ್ಟೇಟ್ ಬೈಯಿಂಗ್
Commerical
Multiple Locations

ವ್ಯಾಪಾರ
Business to Business
Finance
LOAN AGAINST PROPERTY / BUSINESS / PROJECTS CONTACT: +91 8754809650
ಭವಿಷ್ಯ
Astrology
★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ, ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ADMISSION CORNER
Admission Guidance for 2024-25
Under NRI & Management Quota
MBBS, MS/MD, BDS, BAMS, BHMS, B Tech, BE & MBA
Get Admission in the Best College in Karnataka
FCC, BLR: 9900005943/9900005947
Toll free: 1800-570-3344 | www.fccbharat.com

Sundaram Motors
Solicit response for
Workshop & Showroom Space on Long Term Lease
at Whitefield - Varthur Corridor
Land Requirement:
• Brown field project sites with shed would be preferred
• Land Classification should be in Commercial / Industrial Category
Workshop
• Frontage should be minimum 130 feet
• Plot Area 25000-40000 sq. ft.
• Built up Area including Mezzanine 20000-30000 sq. ft.
Showroom
• Frontage should be minimum 130 feet
• Plot Area 5000 sq. ft
• Built up Area including Mezzanine 4000 sq. ft.
• 200 kw 24-hour power, Water supply and drainage provision is mandatory
• Land & Building to have clear titles and as per Government Regulations
• Pollution control board clearance is mandatory
Workshop Space for Outright Purchase
at Goraguntepalya - Nelamangala (Tumkur Road) Corridor
Land Requirement:
• Green field project sites with shed would be preferred
• Land Classification should be in Commercial / Industrial Category
• Frontage should be minimum 130 feet
• Plot Area to be 30000 - 40,000 sq. ft.
• 200 kw 24-hour power, Water supply and drainage provision is mandatory
• Land & Building to have clear titles and as per Govt. Regulations
Proposals can be mailed to
mgshgkrishna@sundarammotors.com
Please contact : 99002 35566
Sundaram Motors

ಪ್ರವಾಸ
Holiday Package Tours
4/11/24ರಿಂದ17ದಿನಗಳು ಖಜುರಾಹೊ., ಚಿತ್ರಕೂಟ ಅಯೋಧ್ಯ , ಮುಕ್ತಿನಾಥ ಕಟ್ಮಂಡು ಜನಕಪುರ ದೇವಘಢ ಗಯ ವಾರಣಸಿ. ಶ್ರೀ ಗಂಗಾ ಟೂರಿಸ್ಟ್:9480253807
ವಾಹನ
Four Wheelers Selling
Others
VEHICLE GOOD Condition With Current Insurance & FcMarco Polo 2019 - 32 Seater,Ct: 8574471511 / 8754461511 /9500051511
ಉದ್ಯೋಗಾವಕಾಶ
General
ಬೆಂಗಳೂರಿನಲ್ಲಿರುವ ಟೈರ್ ಅಂಗಡಿಗೆ ಸಹಾಯಕರು ಬೇಕಾಗಿದ್ದಾರೆ, ಸಂಬಳ 12,000/ ಜೊತೆಗೆ ಊಟ ಮತ್ತು ವಸತಿ ಕೊಡಲಾಗುವುದು. ಕೂಡಲೇ ಸಂಪರ್ಕಿಸಿ: 9900902109.

ರಕ್ಷಾ ಸೆಕ್ಯುರಿಟಿ ಸರ್ವಿಸಸ್ ಸೆಕ್ಯುರಿಟಿ ಗಾರ್ಡ್ ಹುದ್ದೆಗಳಿಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನುನೇಮಿಸಿಕೊಳ್ಳುತ್ತಿದೆ. ಪ್ರತಿಷ್ಠಿತ MNCಯಲ್ಲಿ ಉದ್ಯೋಗದ ಸ್ಥಳವು ಬೆಂಗಳೂರು ಆಗಿರುತ್ತದೆ. ಪುರುಷ/ ಮಹಿಳಾಅಭ್ಯರ್ಥಿಗಳಿಗೆ ಮೂಲ ಇಂಗ್ಲಿಷ್ ಮಾತನಾಡುವ/ ಬರವಣಿಗೆ ಕೌಶಲ್ಯ ಹೊಂದಿರುವ ಉತ್ತಮಅವಕಾಶ, ಕನ್ನಡ ಭಾಷೆಹೆಚ್ಚುವರಿ ಪ್ರಯೋಜನವಾಗಿದೆ. ವಿದ್ಯಾರ್ಹತೆ: 10ನೇ ತರಗತಿ ತೇರ್ಗಡೆಯ ಅಗತ್ಯವಿದೆ, ವಯಸ್ಸು: 18-30ವರ್ಷಗಳನಡುವೆ ಇರಬೇಕು ಉದ್ಯಮದಲ್ಲಿ ಉತ್ತಮ ಸಂಬಳ. *ಕ್ಲೈಂಟ್ ಸಂದರ್ಶನದಲ್ಲಿ ಉತ್ತೀರ್ಣರಾಗಲು ಒಳಪಟ್ಟಿರುತ್ತದೆ. ನೋಂದಣಿಗಾಗಿ ಸಂಪರ್ಕಿಸಿ: ಸಂತೋಷ್- 9493419561 ವೈ.ಎಸ್.ಶಾಹಿದ್- 6281557937 ಎನ್.ಕೆ.ಯಾದವ್- 6300676517.

Wanted
ವಾರ್ಡ್ ಬಾಯ್ ಮತ್ತು ಆಯಾ (ಮಹಿಳೆ) ತಕ್ಷಣ ಬೇಕಾಗಿದ್ದಾರೆ, ಉಚಿತ ಊಟ, ವಸತಿ ಸೌಲಭ್ಯವಿದೆ. ಬೆಂಗಳೂರಿನ ಸುಸಜ್ಜಿತ ವೃದ್ಧಾಶ್ರಮಕ್ಕೆ. ದೂರವಾಣಿ: 7619583088
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
Engg/ Production Technical
12TH/ ITI/ Diploma in Elec/ Mech/ Piping at Malur. Experience of Industrial RO preferred. Email to: info@toyamindia.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಗೇಮಿಂಗ್, ಬ್ಯಾಂಕಿಂಗ್, ವಿಮೆ ವಲಯದಲ್ಲಿ ಹೆಚ್ಚು

₹2.01 ಲಕ್ಷ ಕೋಟಿ ಜಿಎಸ್‌ಟಿ ವಂಚನೆ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ಒಟ್ಟು 6,084 ಪ್ರಕರಣಗಳನ್ನು ಭೇದಿಸಿ, ₹2.01 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆಯನ್ನು ಪತ್ತೆ ಹಚ್ಚಿದೆ. ಈ ಪೈಕಿ ₹26,605 ಕೋಟಿಯನ್ನು ವಂಚನೆ ಎಸಗಿದವರು ಮರು ಪಾವತಿಸಿದ್ದಾರೆ.

ಆನ್‌ಲೈನ್ ಗೇಮಿಂಗ್, ಬ್ಯಾಂಕಿಂಗ್, ಹಣಕಾಸು ಸೇವೆ ಮತ್ತು ವಿಮೆ (ಬಿಎಫ್‌ಎಸ್‌ಐ), ಕಬ್ಬಿಣ, ತಾಮ್ರ ಹಾಗೂ ಮಿಶ್ರಲೋಹದ ಸರಕು ವಲಯದಲ್ಲಿ ಅತಿಹೆಚ್ಚು ವಂಚನೆ ಪ್ರಕರಣಗಳು ನಡೆದಿವೆ ಎಂದು ಡಿಜಿಜಿಐ ವಾರ್ಷಿಕ ವರದಿ ತಿಳಿಸಿದೆ.

2022-23ರಲ್ಲಿ ಒಟ್ಟು 4,872 ಪ್ರಕರಣಗಳಲ್ಲಿ ₹1.01 ಲಕ್ಷ ಕೋಟಿ ವಂಚನೆಯನ್ನು ಬಯಲಿಗೆ ಎಳೆದಿತ್ತು. ಈ ಪೈಕಿ ₹20,713 ಕೋಟಿಯನ್ನು ವಂಚನೆ ಎಸಗಿದವರು ಮರುಪಾವತಿದ್ದಾರೆ ಎಂದು ಹೇಳಿದೆ.

2023-24ರಲ್ಲಿ ಆನ್‌ಲೈನ್ ಗೇಮಿಂಗ್ ವಲಯದಲ್ಲಿ ₹81,875 ಕೋಟಿ ಮೊತ್ತದ 78 ವಂಚನೆ ಪ್ರಕರಣಗಳು ಬೆಳಕಿಗೆ ಬಂದಿವೆ. ಬಿಎಫ್‌ಎಸ್‌ಐ ವಲಯದಲ್ಲಿ 171 ಪ್ರಕರಣ ದಾಖಲಿಸಿ, ₹18,961 ಕೋಟಿ ವಂಚನೆಯನ್ನು ಪತ್ತೆ ಹಚ್ಚಲಾಗಿದೆ. ಕೆಲಸ ಗುತ್ತಿಗೆ ಮತ್ತು ಸೇವಾ ವಲಯದಲ್ಲಿ ₹40 ಕೋಟಿ ಹಾಗೂ ಔಷಧ ತಯಾರಿಕೆ ವಲಯದಲ್ಲಿ ₹2,846 ಕೋಟಿ ವಂಚನೆಯನ್ನು ಬಯಲಿಗೆ ಎಳೆಯಲಾಗಿದೆ ಎಂದು ವಿವರಿಸಿದೆ.

ಕಬ್ಬಿಣ, ತಾಮ್ರ ಹಾಗೂ ಮಿಶ್ರಲೋಹ ವಲಯದಲ್ಲಿ ₹16,806 ಕೋಟಿ ವಂಚನೆ ನಡೆದಿದೆ. ಪಾನ್ ಮಸಾಲಾ, ತಂಬಾಕು, ಸಿಗರೇಟ್, ಬೀಡಿ ತಯಾರಿಕೆ ವಲಯದಲ್ಲಿ ₹5,794 ಕೋಟಿ ಮೊತ್ತದ ವಂಚನೆಯನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದೆ.

2017-18ರಲ್ಲಿ ₹7,879 ಕೋಟಿ, 2018-19ರಲ್ಲಿ ₹19,319 ಕೋಟಿ, 2019-20ರಲ್ಲಿ ₹21,739 ಕೋಟಿ, 2020-21ರಲ್ಲಿ ₹31,908 ಕೋಟಿ ಹಾಗೂ 2021-22ರಲ್ಲಿ ₹50,325 ಕೋಟಿ ವಂಚನೆಯನ್ನು ಪತ್ತೆ ಹಚ್ಚಲಾಗಿದೆ.

ಕಚ್ಚಾ, ಸಂಸ್ಕರಿಸಿದ ಎಣ್ಣೆ ಮೇಲಿನ ಸುಂಕ ಏರಿಕೆ

ನವದೆಹಲಿ (ಪಿಟಿಐ): ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕಚ್ಚಾ ತಾಳೆ ಎಣ್ಣೆ ಮತ್ತು ಸಂಸ್ಕರಿಸಿದ ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಹೆಚ್ಚಿಸಿದೆ.

ಕೇಂದ್ರ ಹಣಕಾಸು ಸಚಿವಾಲಯ ಪ್ರಕಟಿಸಿರುವ ಅಧಿಸೂಚನೆ ಪ್ರಕಾರ ಕಚ್ಚಾ ತಾಳೆ, ಸೋಯಾಬಿನ್ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ 20ರಷ್ಟು ಹೆಚ್ಚಿಸಲಾಗಿದೆ.

ಸಂಸ್ಕರಿಸಿದ ತಾಳೆ, ಸೋಯಾಬಿನ್ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ 12.5ರಿಂದ ಶೇ 32.5ಕ್ಕೆ ಏರಿಕೆ ಮಾಡಿದೆ.

'ಸೋಯಾಬಿನ್ ಹಾಗೂ ಎಣ್ಣೆಕಾಳು ಬೆಳೆಯುವ ರೈತರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ. ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ರೈತರಿಗೆ ಹೆಚ್ಚು ಪ್ರಯೋಜನ ದೊರೆಯಲಿದೆ' ಎಂದು ಸರ್ಕಾರ ಹೇಳಿದೆ.

ಅಲ್ಲದೆ, ಎಣ್ಣೆಕಾಳು ಬೆಳೆಯುವ ಗುಜರಾತ್, ರಾಜಸ್ಥಾನ, ಕರ್ನಾಟಕ, ಆಂಧ್ರಪ್ರದೇಶ, ಉತ್ತರ ಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ರೈತರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದೆ.ಕಳೆದ ಎರಡು ವರ್ಷದಿಂದ ದೇಶೀಯವಾಗಿ ಉತ್ಪಾದನೆಯಾಗುವ ಖಾದ್ಯ ತೈಲದ ಬೆಲೆ ಇಳಿಕೆಯಾಗುತ್ತಿದೆ. ಹಾಗಾಗಿ, ಬೆಲೆ ನಿರ್ವಹಣೆಯ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಗೋಧಿ ದಾಸ್ತಾನಿಗೆ ಮಿತಿ ಹೇರಿದ ಕೇಂದ್ರ

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿ ಗೋಧಿ ಧಾರಣೆಯು ಏರಿಕೆ ಕಾಣುತ್ತಿರುವುದರಿಂದ ಕೇಂದ್ರ ಸರ್ಕಾರವು, ಗೋಧಿ ದಾಸ್ತಾನು ಮಿತಿಯನ್ನು ಮತ್ತಷ್ಟು ತಗ್ಗಿಸಿದೆ.

ಎರಡು ತಿಂಗಳ ಹಿಂದೆ ವರ್ತಕರು, ಸಗಟುದಾರರು 3 ಸಾವಿರ ಟನ್‌ವರೆಗೂ ದಾಸ್ತಾನು ಮಾಡಿಟ್ಟುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಹೊಸ ನಿಯಮಾವಳಿ ಅನ್ವಯ ಇದನ್ನು 2 ಸಾವಿರ ಟನ್‌ಗೆ ಇಳಿಸಿದೆ. ಮುಂದಿನ ವರ್ಷದ ಮಾರ್ಚ್ ಅಂತ್ಯದವರೆಗೆ ಈ ಪರಿಷ್ಕೃತ ಆದೇಶ ಜಾರಿಯಲ್ಲಿ ಇರಲಿದೆ ಎಂದು ಸರ್ಕಾರ ಹೇಳಿದೆ.

ಚಿಲ್ಲರೆ ಮತ್ತು ದೊಡ್ಡ ಮಾರಾಟಗಾರರು ಪ್ರತಿ ಚಿಲ್ಲರೆ ಮಳಿಗೆಗೆ 10 ಟನ್ ದಾಸ್ತಾನಿಟ್ಟು ಕೊಳ್ಳಬಹುದಾಗಿದೆ. ಶುಕ್ರವಾರದಂದು ದೇಶದಲ್ಲಿ ಕೆ.ಜಿ ಗೋಧಿಯ ಚಿಲ್ಲರೆ ದರ ₹31.06 ಇದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹403-553
ದ್ವಿತಳಿ (ಬಿ.ವಿ)	₹380-735

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹206

(ಪ್ರತಿ ಕೆ.ಜಿಗೆ)

'ಅಂತರಿಕ್ಷದಿಂದಲೇ ಸುನಿತಾ, ಬುಚ್ ಮತದಾನ'

ವಾಷಿಂಗ್ಟನ್ (ಪಿಟಿಐ): ಅಂತರ ರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಸದ್ಯ 'ಅತಂತ್ರ'ರಾಗಿರುವ ನಾಸಾ ಗಗನ ಯಾತ್ರಿಗಳಾದ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರು, ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಬಾಹ್ಯಾಕಾಶ ಕೇಂದ್ರದಿಂದಲೇ ಮತಹಕ್ಕು ಚಲಾಯಿಸುವ ಸಾಧ್ಯತೆಗಳಿವೆ.

'ಇದು, ನಮ್ಮ ಆದ್ಯ ಕರ್ತವ್ಯ. ಒಬ್ಬ ಪ್ರಜೆಯಾಗಿ ನಾನು ಬಾಹ್ಯಾಕಾಶ ಕೇಂದ್ರದಿಂದಲೇ ಮತ ಹಕ್ಕು ಚಲಾಯಿಸುವುದನ್ನು ಎದುರು ನೋಡುತ್ತಿದ್ದೇನೆ' ಎಂದು ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ದೂರವಾಣಿ ಮೂಲಕ ಪ್ರತಿಕ್ರಿಯಿಸಿದ್ದಾರೆ. 58 ವರ್ಷದ ಸುನಿತಾ, 61 ವರ್ಷ ವಯಸ್ಸಿನ ವಿಲ್ಮೋರ್ ಅವರು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಾಹ್ಯಾಕಾಶ ಕೇಂದ್ರದಿಂದಲೇ ಪಾಲ್ಗೊಂಡಿದ್ದರು.

ಜೂನ್‌ನಿಂದ ಇಬ್ಬರೂ ಬಾಹ್ಯಾಕಾಶ ಕೇಂದ್ರದಲ್ಲಿದ್ದಾರೆ. ಅವರನ್ನು ಕರೆತರಬೇಕಿದ್ದ ಸ್ಟಾರ್‌ಲೈನರ್ ಅಂತರಿಕ್ಷ ನೌಕೆಯಲ್ಲಿನ ತಾಂತ್ರಿಕ ದೋಷದಿಂದಾಗಿ ಬರಲಾಗಿಲ್ಲ.

ಮಡಕಶಿರಾ: ಕೈಗಾರಿಕೆ ಸ್ಥಾಪನೆ ಪರಿಶೀಲನೆ– ಎಚ್‌ಡಿಕೆ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಡಕಶಿರಾದಲ್ಲಿ ಕೈಗಾರಿಕೆ ಸ್ಥಾಪಿಸುವುದರಿಂದ ಪಾವಗಡ, ಶಿರಾ, ಮಧುಗಿರಿ, ಹಿರಿಯೂರು ಭಾಗದ ಜನರಿಗೆ ಅನುಕೂಲ ಆಗುತ್ತದೆ. ಈ ಸಂಬಂಧ ಉದ್ಯಮಿಗಳ ಜತೆಗೆ ಮಾತುಕತೆ ನಡೆಸುತ್ತೇನೆ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಡಕಶಿರಾ ಶಾಸಕ ಎಂ.ಎಸ್. ರಾಜು ಮತ್ತು ಪಾವಗಡ ಮಾಜಿ ಶಾಸಕ ಕೆ.ಎಂ. ತಿಮ್ಮರಾಯಪ್ಪ ಅವರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಕೈಗಾರಿಕೆ ಸ್ಥಾಪನೆಗೆ ಮನವಿ ಸಲ್ಲಿಸಿದ್ದರು.

'ಮಡಕಶಿರಾದ ಸುಮಾರು 40,000 ಮಂದಿ ಕೆಲಸಕ್ಕಾಗಿ ಬೆಂಗಳೂರಿಗೆ ವಲಸೆ ಬಂದಿದ್ದಾರೆ. ಪಾವಗಡ ಸಮೀಪವೇ 1,600 ಎಕರೆ ಜಮೀನು ಇದೆ. ಅಲ್ಲಿ ಕೈಗಾರಿಕೆ ಸ್ಥಾಪಿಸಿದರೆ ಅನುಕೂಲ ಆಗಲಿದೆ' ಎಂದು ಮನವಿ ಸಲ್ಲಿಸಿದರು.

ತ್ವರಿತವಾಗಿ ಕೈಗಾರಿಕೆ ಸ್ಥಾಪಿಸುವ ಮೂಲಕ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕು. ಜನರು ಉದ್ಯೋಗ ಅರಸಿ ಹೊರಹೋಗುವುದನ್ನು ತಪ್ಪಿಸಬೇಕು ಎಂದು ಮನವಿ ಮಾಡಿದರು.

ಎಚ್.ಡಿ. ಕುಮಾರಸ್ವಾಮಿ

'ಈ ಪ್ರದೇಶಕ್ಕೆ ಸೂಕ್ತವಾಗುವ ಕೈಗಾರಿಕೆ ಸ್ಥಾಪನೆ ಸಂಬಂಧ ಉದ್ದಿಮೆದಾರರ ಜತೆ ಚರ್ಚಿಸುತ್ತೇನೆ. ಇಲ್ಲಿ ಉದ್ದಿಮೆ ಸ್ಥಾಪನೆಯಾದರೆ, ಜನರು ಕೆಲಸಕ್ಕಾಗಿ ನಗರಗಳಿಗೆ ವಲಸೆ ಹೋಗುವುದು ತಪ್ಪುತ್ತದೆ' ಎಂದು ಕುಮಾರಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಕುಮಾರಸ್ವಾಮಿ ಅವರು ಜನರ ಅಹವಾಲು ಸ್ವೀಕರಿಸಿದರು. 'ಆಂಧ್ರಪ್ರದೇಶದ ಮಡಕಶಿರಾ ಮತ್ತಿತರ ಪ್ರದೇಶದಲ್ಲಿ ಇರುವ ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ, ಕುಂಚಿಟಿಗ, ಸಾದರ ಮತ್ತು ವೀರಶೈವರನ್ನು ಹಿಂದುಳಿದ ವರ್ಗಕ್ಕೆ ಸೇರಿಸುವ ಸಂಬಂಧ ಕೇಂದ್ರ ಗೃಹ ಸಚಿವ ಮತ್ತು ಸಮಾಜ ಕಲ್ಯಾಣ ಸಚಿವರ ಜತೆ ಚರ್ಚಿಸುತ್ತೇನೆ' ಎಂದು ಭರವಸೆ ನೀಡಿದರು.

ದ್ವಿಪಕ್ಷೀಯ ಬಾಂಧವ್ಯ: ಸ್ವಿಸ್ ಸಚಿವರ ಜತೆ ಚರ್ಚೆ

ಜಿನೀವಾ (ಪಿಟಿಐ): ಸ್ವಿಟ್ಜರ್‌ಲ್ಯಾಂಡ್‌ನ ವಿದೇಶಾಂಗ ಸಚಿವ ಇನಾಜಿಯೊ ಡ್ಯಾನಿಲೆ ಜಿಯೊವಾನಿ ಜೊತೆಗೆ, ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಾಣಿಜ್ಯ ವಹಿವಾಟು ಒಳಗೊಂಡು ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತು ಇಲ್ಲಿ ಚರ್ಚಿಸಿದರು.

ಭಾರತ ಮತ್ತು ನಾಲ್ಕು ಐರೋಪ್ಯ ದೇಶಗಳ ಒಕ್ಕೂಟ ಇಎಫ್‌ಟಿಎ ಜತೆಗಿನ ವಾಣಿಜ್ಯ ಒಪ್ಪಂದವನ್ನು ಕೇಂದ್ರವಾಗಿಸಿ ಕೊಂಡು ಈ ಮಾತುಕತೆ ನಡೆಯಿತು. ಈ ಒಕ್ಕೂಟದಲ್ಲಿ ಸ್ವಿಟ್ಜರ್‌ಲ್ಯಾಂಡ್ ಹೊರತುಪಡಿಸಿ ಐಸ್‌ಲ್ಯಾಂಡ್, ಲಿಚೆನ್‌ಸ್ಟೀನ್, ನಾರ್ವೆ ರಾಷ್ಟ್ರಗಳಿವೆ.

ಐರೋಪ್ಯ ಮುಕ್ತ ವಾಣಿಜ್ಯ ಒಕ್ಕೂಟ (ಇಎಫ್‌ಟಿಎ) ಜೊತೆಗೆ ಭಾರತ ಕಳೆದ ಮಾರ್ಚ್ ತಿಂಗಳಲ್ಲಿ ವಾಣಿಜ್ಯ ಮತ್ತು ಆರ್ಥಿಕ ಪಾಲುದಾರಿಕೆ ಕುರಿತು ಒಪ್ಪಂದಕ್ಕೆ ಸಹಿ ಹಾಕಿತ್ತು. ಒಕ್ಕೂಟದ ನಾಲ್ಕು ರಾಷ್ಟ್ರಗಳಿಂದ ಸುಮಾರು 100 ಬಿಲಿಯನ್ ಡಾಲರ್ ಹೂಡಿಕೆಯಾಗಿತ್ತು.

ಬಿಜೆಪಿಗೆ ಮತ್ತೆ ಏಕನಾಥ್ ಖಡ್ಸೆ?

ಏಕನಾಥ ಖಡ್ಸೆ

ಮುಂಬೈ: ಬಿಜೆಪಿಗೆ ಮರಳಲಿದ್ದಾರೆ ಎನ್ನಲಾಗಿದ್ದ ಮಹಾರಾಷ್ಟ್ರದ ಹಿರಿಯ ರಾಜಕಾರಣಿ ಏಕನಾಥ ಖಡ್ಸೆ, ಡಿಸಿಎಂ ದೇವೇಂದ್ರ ಫಡಣವೀಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. 'ರಾಜ್ಯಪಾಲರಾಗಿ ನೇಮಿಸುವ ಭರವಸೆಯನ್ನು ನನಗೆ ನೀಡಲಾಗಿತ್ತು' ಎಂದೂ ಹೇಳಿದ್ದಾರೆ.

'ಆದರೆ, ಈಗ ನಡೆಯುತ್ತಿರುವ ಗಣೇಶೋತ್ಸವ ಆಚರಣೆ ಮುಗಿದ ಬಳಿಕ ಪಕ್ಷ ಈ ವಿಷಯವನ್ನು ಗಮನಿಸಲಿದೆ' ಎಂದು ಫಡಣವೀಸ್ ಈ ಕುರಿತು ಪ್ರತಿಕ್ರಿಯಿಸಿದ್ದಾರೆ. ನಾಗ್ಪುರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಡಿಸಿಎಂ, 'ಪಕ್ಷ ಕೈಗೊಳ್ಳುವ ತೀರ್ಮಾನವನ್ನು ಸ್ವಾಗತಿ ಸುತ್ತೇವೆ. ಗಣೇಶೋತ್ಸವ ಆಚರಣೆ ಬಳಿಕವೇ ಈ ಬಗ್ಗೆ ತೀರ್ಮಾನಿಸಲಾಗುತ್ತದೆ' ಎಂದು ಹೇಳಿದರು.

72 ವರ್ಷ ವಯಸ್ಸಿನ ಖಡ್ಸೆ, ಒಬಿಸಿ ವರ್ಗದ ಲೇವಾ–ಪಾಟೀಲ ಸಮುದಾಯದವರು. ಉತ್ತರ ಮಹಾರಾಷ್ಟ್ರ–ಖಂಡೇಶ್ ವಲಯದಲ್ಲಿ ತಮ್ಮದೇ ಪ್ರಭಾವ ಹೊಂದಿದ್ದಾರೆ. ಫಡಣವೀಸ್, ಮುಖಂಡ ಗಿರೀಶ್ ಮಹಾಜನ್ ಜೊತೆಗಿನ ವೈಮನಸ್ಯದಿಂದಾಗಿ ಖಡ್ಸೆ ಅವರು, ಅಕ್ಟೋಬರ್ 2020ರಲ್ಲಿ ಬಿಜೆಪಿ ತೊರೆದಿದ್ದು, ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಸೇರಿದ್ದರು.

ಅನುಭವವನ್ನು ಆಧರಿಸಿ ಎನ್‌ಸಿಪಿ ಅವರನ್ನು ಪರಿಷತ್ ಸದಸ್ಯರಾಗಿಸಿತ್ತು. ಸದ್ಯ ಅವರು, ಎನ್‌ಸಿಪಿ ಶರದ್ ಬಣದ ಮುಖ್ಯಸ್ಥರಾಗಿದ್ದಾರೆ.

ಡೋಡಾ ಜಿಲ್ಲೆಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ

'ಕಾಶ್ಮೀರದಲ್ಲಿ ಭಯೋತ್ಪಾದನೆ ಅಂತ್ಯ ಸನ್ನಿಹಿತ'

ಮುಖ್ಯಾಂಶಗಳು
- ಕೇಂದ್ರಾಡಳಿತ ಪ್ರದೇಶದಲ್ಲಿ ಸೆ. 18ರಂದು ಮೊದಲ ಹಂತದ ಚುನಾವಣೆ
- ಪಕ್ಷದ ಅಭ್ಯರ್ಥಿಗಳ ಪರ ಪ್ರಧಾನಿ ಚೊಚ್ಚಲ ಚುನಾವಣಾ ರ‍್ಯಾಲಿ
- ಕುಟುಂಬ ರಾಜಕಾರಣದ ವಿರುದ್ಧ ಕಿಡಿ

ಜಮ್ಮು (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯ ಅಂತ್ಯ ಸನ್ನಿಹಿತವಾಗುತ್ತಿದ್ದು, ಅತ್ಯಂತ ಸುಂದರವಾದ ಪ್ರದೇಶವನ್ನು ನಾಶಪಡಿಸಿದ ಕುಟುಂಬ ರಾಜಕಾರಣವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರವು ಹೊಸ ನಾಯಕತ್ವವನ್ನು ಪರಿಚಯಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಜಮ್ಮು ಪ್ರಾಂತ್ಯದ ಡೋಡಾ ಜಿಲ್ಲೆಯಲ್ಲಿ ಶನಿವಾರ ಬಿಜೆಪಿ ಅಭ್ಯರ್ಥಿಗಳ ಪರ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ನಾವು ಹಾಗೂ ನೀವು ಸೇರಿಕೊಂಡು, ಜಮ್ಮು ಮತ್ತು ಕಾಶ್ಮೀರವನ್ನು ದೇಶದ ಸಂಪದ್ಭರಿತ ರಾಜ್ಯವನ್ನಾಗಿ ನಿರ್ಮಿಸೋಣ' ಎಂದು ಕರೆ ನೀಡಿದರು.

ಇದೇ ಸೆ. 18ರಂದು ರಾಜ್ಯ ವಿಧಾನಸಭೆಗೆ ಮೊದಲ ಹಂತದ ಮತದಾನ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಮೊದಲ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡರು.

'ಸ್ವಾತಂತ್ರ್ಯ ನಂತರ, ಜಮ್ಮು ಮತ್ತು ಕಾಶ್ಮೀರವು ವಿದೇಶಿ ಶಕ್ತಿಗಳು ಹಾಗೂ ಕುಟುಂಬ ರಾಜಕಾರಣಕ್ಕೆ ಗುರಿಯಾಗಿದ್ದರಿಂದ ಸುಂದರ ಪ್ರದೇಶದ ಒಳಗೆ ನಿರ್ವಾತ ಸೃಷ್ಟಿಸಿತು. ಕುಟುಂಬ ರಾಜಕಾರಣ ನಡೆಸಿದವರು, ಮಕ್ಕಳನ್ನು ಉತ್ತರಾಧಿಕಾರಿಯನ್ನಾಗಿ ಮಾಡಿ, ಹೊಸ ನಾಯಕತ್ವದ ಬೆಳವಣಿಗೆಗೆ ಅವಕಾಶ ನೀಡಲಿಲ್ಲ' ಎಂದು ಅಬ್ದುಲ್ಲಾ ಹಾಗೂ ಮುಫ್ತಿ ಕುಟುಂಬದ ವಿರುದ್ಧ ಕಿಡಿಕಾರಿದರು. '2014ರಲ್ಲಿ ನಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ನಮ್ಮ ಸರ್ಕಾರವು ಯುವ ನಾಯಕತ್ವಕ್ಕೆ ಹೆಚ್ಚಿನ ಆದ್ಯತೆ ನೀಡಿದೆ' ಎಂದರು.

ಕಣಿವೆಗೆ ರೈಲು ಸಂಪರ್ಕ ಶೀಘ್ರ: 'ಜಮ್ಮು ಮತ್ತು ಕಾಶ್ಮೀರ ಸಂಪರ್ಕ ಹೊಂದದ ಎಲ್ಲ ಪ್ರದೇಶಗಳಿಗೂ ಶೀಘ್ರದಲ್ಲಿ ರೈಲು ಸಂಪರ್ಕ ದೊರೆಯಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದರು.

'ಕಣಿವೆಯ ರಾಮ್‌ಬನ್, ಡೋಡಾ, ಕಿಶ್ತ್‌ವಾಢ್ ಹಾಗೂ ಕಾಶ್ಮೀರಕ್ಕೆ ನವದೆಹಲಿಯಿಂದಲೇ ನೇರ ರೈಲು ಸಂಪರ್ಕ ಲಭ್ಯವಾಗಲಿದೆ. ನಿಮ್ಮ ಕನಸುಗಳನ್ನು ನಾನು ಈಡೇರಿಸುತ್ತೇನೆ' ಎಂದು ಭರವಸೆ ನೀಡಿದರು. 'ಶ್ರೀನಗರದಿಂದ ರಾಮಬನ್ ನಡುವೆ ಶೀಘ್ರದಲ್ಲಿಯೇ ರೈಲು ಸಂಚಾರ ಆರಂಭಗೊಳ್ಳಲಿದೆ. ರೈಲು ಮಾರ್ಗ, ನಿಲ್ದಾಣ ಪೂರ್ಣಗೊಂಡಿದ್ದು, ಪ್ರಾಯೋಗಿಕ ಸಂಚಾರವೂ ಆರಂಭಗೊಂಡಿದೆ' ಎಂದರು.

ರಾಹುಲ್ ವಿರುದ್ಧ ಕಿಡಿ: ರ‍್ಯಾಲಿಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡ ರಾಹುಲ್ ಗಾಂಧಿ ವಿರುದ್ಧವೂ ಕಿಡಿಕಾರಿದರು. 'ಅಮೆರಿಕದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತದ ಪತ್ರಕರ್ತನ ಮೇಲೆ ರಾಹುಲ್ ಗಾಂಧಿ ತಂಡದಿಂದ ಹಲ್ಲೆ ನಡೆಸಲಾಗಿದೆ. ಅಲ್ಲಿ 'ದ್ವೇಷ ಹಂಚುವವರು', ಇಲ್ಲಿ 'ಪ್ರೀತಿಯ ಅಂಗಡಿ' ತೆರೆಯುವುದಾಗಿ ಮಾತನಾಡುತ್ತಿದ್ದಾರೆ' ಎಂದು ರಾಹುಲ್ ನಡೆಯನ್ನು ವ್ಯಂಗ್ಯವಾಡಿದರು.

ಜಮ್ಮು ಪ್ರಾಂತ್ಯದ ಡೋಡಾ ಜಿಲ್ಲೆಯಲ್ಲಿ ಶನಿವಾರ ಬಿಜೆಪಿ ಅಭ್ಯರ್ಥಿಗಳ ಪರ ಪ್ರಧಾನಿ ನರೇಂದ್ರ ಮೋದಿ ನಡೆಸಿದ ಚೊಚ್ಚಲ ಚುನಾವಣಾ ರ‍್ಯಾಲಿಯಲ್ಲಿ ಭಾಗವಹಿಸಿದ್ದ ಬೆಂಬಲಿಗರು — ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

'ಹರಿಯಾಣದಲ್ಲಿ ಬಿಜೆಪಿಗೆ ಹ್ಯಾಟ್ರಿಕ್'

ಕುರುಕ್ಷೇತ್ರ (ಪಿಟಿಐ): ಹರಿಯಾಣದಲ್ಲಿ ಅಕ್ಟೋಬರ್ 5ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸತತ ಮೂರನೇ ಬಾರಿಯೂ ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ತನ್ನ ಮೊದಲ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಅಲ್ಲದೆ ರಾಜ್ಯದ ಬಿಜೆಪಿ ಸರ್ಕಾರದ ಕೆಲಸವನ್ನು ಶ್ಲಾಘಿಸಿದರು. 'ಕೇಂದ್ರದ ಎನ್‌ಡಿಎ ಸರ್ಕಾರ ಇನ್ನೂ 100 ದಿನ ಪೂರೈಸಿಲ್ಲ. ಅಷ್ಟರಲ್ಲಿಯೇ 15 ಲಕ್ಷ ಕೋಟಿ ರೂಪಾಯಿ ವೆಚ್ಚದ ಕೆಲಸಗಳನ್ನು ಆರಂಭಿಸಿದೆ' ಎಂದು ಅವರು ತಿಳಿಸಿದರು. ಹರಿಯಾಣದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ, 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಭಿವೃದ್ಧಿಗೆ ಹಣ ಕೇವಲ ಒಂದು ಜಿಲ್ಲೆಗೆ ಸೀಮಿತವಾಗಿತ್ತು. ಆದರೆ ಬಿಜೆಪಿ ಸಮಾನ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ' ಎಂದರು.

'ದೇಶದಲ್ಲಿ ಸುಳ್ಳು ಮತ್ತು ಅರಾಜಕತೆ ಹರಡಿ ಕಾಂಗ್ರೆಸ್ ರಾಜಕಾರಣ ಮಾಡುತ್ತದೆ. ಇತ್ತೀಚೆಗೆ ಕಾಂಗ್ರೆಸ್ ನಗರ ನಕ್ಸಲ್‌ನ ಹೊಸ ರೂಪವನ್ನೂ ತಾಳಿದ್ದು, ಯಾವುದೇ ಲಜ್ಜೆಯಿಲ್ಲದೆ ಸುಳ್ಳುಗಳನ್ನು ಹೇಳುತ್ತಿದೆ' ಎಂದು ಕಿಡಿಕಾರಿದರು. 'ಕಾಂಗ್ರೆಸ್ ಅವಧಿಯಲ್ಲಿ ಯಾವುದೇ ರೈತರ ಖಾತೆಗಳಿಗೆ ಹಣ ಜಮೆಯಾಗಿತ್ತಾ' ಎಂದು ಅವರು ಇದೇ ವೇಳೆ ಕೇಳಿದರು.

ಕಾಂಗ್ರೆಸ್ ಆಡಳಿತವಿರುವ ಹಿಮಾಚಲ ಪ್ರದೇಶದಲ್ಲಿ ಯಾರೊಬ್ಬರೂ ಸಂತಸದಿಂದಿಲ್ಲ. ಅಲ್ಲಿನ ಸರ್ಕಾರವು ಆರ್ಥಿಕ ನಿರ್ವಹಣೆ ಮತ್ತು ಹಣದುಬ್ಬರ ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಮೋದಿ ದೂರಿದರು.

ಕರ್ನಾಟಕ ಉದಾಹರಿಸಿ ಟೀಕೆ

ರೈತರ ವಿಷಯಗಳಿಗೆ ಸಂಬಂಧಿಸಿದಂತೆ ಭಾರಿ ಧ್ವನಿಯೆತ್ತಿ, ಕಣ್ಣೀರು ಹಾಕಿದ ಕಾಂಗ್ರೆಸ್, ತನ್ನ ಆಡಳಿತವಿರುವ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಎಷ್ಟು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಿದೆ ಎಂದು ಮೋದಿ ಪ್ರಶ್ನಿಸಿದರು.

'ಕೈ' ವೀಕ್ಷಕರಾಗಿ ಗೆಹಲೋತ್, ಮಾಕನ್, ಬಾಜ್ವಾ

ನವದೆಹಲಿ(ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಗೆ ಎಐಸಿಸಿ ಹಿರಿಯ ವೀಕ್ಷಕರನ್ನಾಗಿ ಅಶೋಕ್ ಗೆಹಲೋತ್, ಅಜಯ್ ಮಾಕನ್ ಮತ್ತು ಪರತಾಪ್ ಸಿಂಗ್ ಬಾಜ್ವಾ ಅವರನ್ನು ಕಾಂಗ್ರೆಸ್ ಶನಿವಾರ ನೇಮಿಸಿದೆ.

ಈ ನೇಮಕಾತಿಯನ್ನು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಹೇಳಿಕೆಯಲ್ಲಿ ತಿಳಿಸಿದೆ.

ಮಾಕೆನ್ ಪಕ್ಷದ ಖಜಾಂಚಿಯಾಗಿದ್ದರೆ, ಅಶೋಕ್ ಗೆಹಲೋತ್ ರಾಜಸ್ಥಾನದಲ್ಲಿ ಮುಖ್ಯಮಂತ್ರಿಯಾಗಿದ್ದವರು. ಬಾಜ್ವಾ ಪಂಜಾಬ್ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾರೆ.

ಹರಿಯಾಣ ಚುನಾವಣೆಗೆ ಪಕ್ಷವು 89 ಅಭ್ಯರ್ಥಿಗಳ ಹೆಸರನ್ನು ಘೋಷಿಸಿದೆ. ಸಿಪಿಎಂಗೆ ಭಿವಾನಿ ಕ್ಷೇತ್ರವನ್ನು ಬಿಟ್ಟುಕೊಟ್ಟಿದೆ.

ತಾಜ್ ಮಹಲ್ ಗುಮ್ಮಟ ಸೋರಿಕೆ

ಆಗ್ರಾ (ಪಿಟಿಐ): ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಸತತ ಮಳೆಯಿಂದಾಗಿ ತಾಜ್ ಮಹಲ್‌ನ ಮುಖ್ಯ ಗುಮ್ಮಟದಲ್ಲಿ ನೀರಿನ ಸೋರಿಕೆ ಆಗುತ್ತಿದೆ. ಮಳೆಯಿಂದ ಮಹಲ್‌ನ ಆವರಣದಲ್ಲಿರುವ ಉದ್ಯಾನ ನೀರಿನಲ್ಲಿ ಮುಳುಗಿದೆ.

ತಾಜ್ ಮಹಲ್ ಆವರಣದ ಉದ್ಯಾನವು ಜಲಾವೃತವಾಗಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಸಾಕಷ್ಟು ಹಂಚಿಕೆಯಾಗಿದ್ದು, ಪ್ರಯಾಣಿಕರ ಗಮನಸೆಳೆಯುತ್ತಿದೆ. ಈ ಬಗ್ಗೆ ವಿವರಣೆ ನೀಡಿರುವ ಆಗ್ರಾ ವೃತ್ತದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಇದೊಂದು ಸ್ವಾಭಾವಿಕ ನೀರು ಜಿನುಗುವಿಕೆ. ಇದರಿಂದ ಯಾವುದೇ ಹಾನಿ ಇಲ್ಲ ಎಂದು ತಿಳಿಸಿದ್ದಾರೆ.

ಆಗ್ರಾ ವೃತ್ತದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮುಖ್ಯ ಅಧೀಕ್ಷಕ ರಾಜ್‌ಕುಮಾರ್ ಪಟೇಲ್ ಅವರು, 'ತಾಜ್ ಮಹಲ್‌ನ ಮುಖ್ಯ ಗೋಪುರದಲ್ಲಿ ಸೋರಿಕೆ ಆಗುತ್ತಿರುವುದನ್ನು ಗಮನಿಸಿದ್ದೇವೆ. ನಾವು ಪರಿಶೀಲಿಸಿದಾಗ ಇದು ಸ್ವಾಭಾವಿಕ ಎಂದು ತಿಳಿದುಬಂದಿದ್ದು, ಗೋಪುರಕ್ಕೆ ಯಾವುದೇ ಹಾನಿಯಾಗಿಲ್ಲ. ಮುಖ್ಯ ಗುಮ್ಮಟವನ್ನು ಡ್ರೋನ್ ಕ್ಯಾಮೆರಾ ಮೂಲಕ ಪರಿಶೀಲಿಸಿದ್ದೇವೆ' ಎಂದು ತಿಳಿಸಿದ್ದಾರೆ.

ಉದ್ಯಾನ ಜಲಾವೃತವಾಗಿರುವ 20 ಸೆಕೆಂಡುಗಳ ವಿಡಿಯೊ ಗುರುವಾರ ಸಂಜೆ ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಹಂಚಿಕೆಯಾಗಿದ್ದು, ಇಲ್ಲಿಗೆ ಭೇಟಿ ನೀಡಿದ ಪ್ರವಾಸಿಗರು ಸಹ ಅದರ ವಿಡಿಯೊ ಚಿತ್ರೀಕರಿಸಿಕೊಂಡಿದ್ದಾರೆ.

ಸತತ ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿ ಹಾಗೂ ಬೆಳೆಗಳು ನೀರಿನಲ್ಲಿ ಮುಳುಗಿದ್ದು, ಸ್ಥಳೀಯರು ಪ್ರವಾಹದ ಪರಿಣಾಮ ಎದುರಿಸುವಂತಾಗಿದೆ. ಆಗ್ರಾ ಸರ್ಕಾರಿ ಆಡಳಿತವು ಎಲ್ಲ ಶಾಲೆಗಳಿಗೆ ರಜೆ ನೀಡಲು ಆದೇಶಿಸಿದೆ.

ದೀಪಜ್ಯೋತಿ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ಹುಟ್ಟಿದ ಕರುವಿನ ಜತೆ ದುರ್ಗಾಮಾತೆಗೆ ಪೂಜೆ ಸಲ್ಲಿಸಿದರು. ಮುದ್ದಾದ ಕರುವಿಗೆ 'ದೀಪಜ್ಯೋತಿ' ಎಂದು ನಾಮಕರಣ ಮಾಡಲಾಗಿದೆ ಎಂದು ಮೋದಿ ಅವರು ತಿಳಿಸಿದ್ದಾರೆ – ಪಿಟಿಐ ಚಿತ್ರ

'ಅಮಿತ್ ಶಾ ರಾಜೀನಾಮೆ ನೀಡಲಿ'

ನವದೆಹಲಿ (ಪಿಟಿಐ): 'ಅರವಿಂದ್ ಕೇಜ್ರಿವಾಲ್ ಅವರನ್ನು 'ಸುಳ್ಳು' ಪ್ರಕರಣವೊಂದರಲ್ಲಿ ಸಿಲುಕಿಸಿ ಜೈಲಿಗೆ ಅಟ್ಟಿ, ಈಗ ಅವರ ರಾಜೀನಾಮೆಗೆ ಆಗ್ರಹಿಸುತ್ತಿರುವ ಅಮಿತ್ ಶಾ ಅವರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಸಂಸದ ಸಂಜಯ್ ಸಿಂಗ್ ಅವರು ಗುಡುಗಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೆಹಲಿ ಮುಖ್ಯಮಂತ್ರಿಯನ್ನು ಜೈಲಿಗೆ ಕಳುಹಿಸಿದ್ದರ ಹಿಂದೆ ಗೃಹ ಸಚಿವರ ಕೈವಾಡವಿದೆ. ಜನರಿಂದ ಚುನಾಯಿತವಾದ ಸರ್ಕಾರವನ್ನು ಅಮಿತ್ ಶಾ ಅವರು ಬೀಳಿಸುತ್ತಾರೆ; ಮುಖ್ಯಮಂತ್ರಿಗಳನ್ನು ಜೈಲಿಗೆ ಅಟ್ಟುತ್ತಾರೆ; ರಾಜಕೀಯ ಪಕ್ಷಗಳನ್ನು ವಿಭಜಿಸುತ್ತಾರೆ. ಇಂತಹ ಗೃಹ ಸಚಿವರು ಅಧಿಕಾರದಲ್ಲಿ ಮುಂದುವರೆಯಬಾರದು' ಎಂದು ಆರೋಪಿಸಿದರು.

'ಮುಖ್ಯಮಂತ್ರಿ ಬಳಿ ಯಾವುದೇ ಖಾತೆಗಳಿಲ್ಲ. ಆದ್ದರಿಂದ ಅವರು ಯಾವುದೇ ಕಡತಗಳಿಗೆ ಸಹಿ ಹಾಕಬೇಕಾದ ಪ್ರಮೇಯವೇ ಬರುವುದಿಲ್ಲ. ಲೆಫ್ಟಿನೆಂಟ್ ಗವರ್ನರ್ ಅವರ ಅನುಮೋದನೆಗಾಗಿ ಕಳುಹಿಸಬೇಕಾದ ಕಡತಗಳಿಗೆ ಅವರು ಸಹಿ ಹಾಕಲಿದ್ದಾರೆ. ಇಂಥ ಕಡತಗಳಿಗೆ ಸಹಿ ಹಾಕಲು ಸುಪ್ರೀಂ ಕೋರ್ಟ್ ಅವಕಾಶ ನೀಡಿದೆ' ಎಂದರು.

'ಸರ್ಕಾರಿ ಆದೇಶ ಮೀರಿ ಪಟಾಕಿ ಬಳಕೆ' ದೂರು: ಕೇಜ್ರಿವಾಲ್ ಅವರನ್ನು ಅವರ ನಿವಾಸದ ಮುಂದೆ ಪಟಾಕಿ ಸಿಡಿಸಿ ಸ್ವಾಗತಿಸಲಾಗಿತ್ತು. ಪಟಾಕಿ ಸಿಡಿಸಿದ್ದಕ್ಕಾಗಿ ದೆಹಲಿ ಪೊಲೀಸರು ಶನಿವಾರ ದೂರು ದಾಖಲಿಸಿಕೊಂಡಿದ್ದಾರೆ. ವಾಯು ಮಾಲಿನ್ಯ ತಡೆಗಟ್ಟುವ ಉದ್ದೇಶದಿಂದ ದೆಹಲಿ ಸರ್ಕಾರವು ಪಟಾಕಿ ಉತ್ಪಾದನೆ, ವಿತರಣೆ ಹಾಗೂ ಬಳಕೆಗೆ ನಿಷೇಧ ಹೇರಿ ಸೋಮವಾರ ಆದೇಶ ಹೊರಡಿಸಿತ್ತು. ಬಿಎನ್‌ಎಸ್ ಸೆಕ್ಷನ್ 223 (ಉದ್ದೇಶಪೂರ್ವಕವಾಗಿ ಸರ್ಕಾರಿ ಆದೇಶವನ್ನು ಉಲ್ಲಂಘಿಸುವುದು) ಅಡಿಯಲ್ಲಿ ಅಪರಿಚಿತ ವ್ಯಕ್ತಿಯ ಮೇಲೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ಕಾಶ್ಮೀರದಲ್ಲಿ ಯೋಧರಿಬ್ಬರು ಹುತಾತ್ಮ; ಮೂವರು ಉಗ್ರರ ಹತ್ಯೆ

ನವದೆಹಲಿ/ಶ್ರೀನಗರ(ಎಎಫ್‌ಪಿ/ಪಿಟಿಐ): ವಿಧಾನಸಭೆ ಚುನಾವಣೆಗೆ ಕೆಲವೇ ದಿನಗಳ ಮೊದಲು ಕಾಶ್ಮೀರದಲ್ಲಿ ಶಂಕಿತ ಉಗ್ರರೊಂದಿಗಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ಯೋಧರು ಹುತಾತ್ಮರಾಗಿದ್ದು, ಮತ್ತಿಬ್ಬರು ಯೋಧರು ಗಾಯಗೊಂಡಿದ್ದಾರೆ.

ಕಿಶ್ತವಾಢ್ ಜಿಲ್ಲೆಯಲ್ಲಿ ಶುಕ್ರವಾರ ಗುಂಡಿನ ಚಕಮಕಿ ನಡೆದಿದೆ ಎಂದು ಭಾರತೀಯ ಸೇನೆ ಹೇಳಿದೆ. ಪ್ರಾಣಾರ್ಪಣೆ ಮಾಡಿರುವ ಯೋಧರಿಗೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಭಾರತೀಯ ಸೇನೆ ಗೌರವ ಸಲ್ಲಿಸಿದೆ.

ಇದೇ ವೇಳೆ, ಭದ್ರತಾ ಪಡೆಗಳು ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಎನ್‌ಕೌಂಟರ್ ನಡೆಸಿ ಮೂವರು ಭಯೋತ್ಪಾದಕರನ್ನು ಶನಿವಾರ ಬೆಳಿಗ್ಗೆ ಹತ್ಯೆ ಮಾಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಯಾದ ಭಯೋತ್ಪಾದಕರ ಗುರುತು ಮತ್ತು ಅವರು ಯಾವ ಉಗ್ರ ಸಂಘಟನೆಯ ಜತೆಗೆ ನಂಟು ಹೊಂದಿದ್ದಾರೆ ಎಂಬುದನ್ನು ಪತ್ತೆ ಮಾಡಲಾಗುತ್ತಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ಹೇಳಿದ್ದಾರೆ.

ಉತ್ತರ ಕಾಶ್ಮೀರ ಜಿಲ್ಲೆಯ ಪಟ್ಟನ್ ಪ್ರದೇಶದ ಚಕ್ ಟಪ್ಪರ್ ಕ್ರೀರಿಯಲ್ಲಿ ಶುಕ್ರವಾರ ತಡರಾತ್ರಿಯೇ ಉಗ್ರರ ನಿಗ್ರಹಕ್ಕೆ ಶೋಧ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಉಗ್ರರು ಭದ್ರತಾ ಪಡೆಗಳತ್ತ ಗುಂಡು ಹಾರಿಸಿದರು. ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ದಶಕದ ನಂತರ ಮೊದಲ ಬಾರಿಗೆ ವಿಧಾನಸಭಾ ಚುನಾವಣೆ ನಡೆಯುತ್ತಿದ್ದು, ಚುನಾವಣೆಗೂ ಮುನ್ನ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಘರ್ಷಣೆಗಳು ಹೆಚ್ಚುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ಜಮ್ಮುವಿನಲ್ಲಿ ನಡೆದ ಘರ್ಷಣೆಗಳಲ್ಲಿ 50ಕ್ಕೂ ಹೆಚ್ಚು ಯೋಧರು ಹುತಾತ್ಮರಾಗಿದ್ದಾರೆ.

ಉಗ್ರರ ನಿಗ್ರಹಕ್ಕೆ ಕಾರ್ಯಾಚರಣೆ

ಜಮ್ಮು (ಪಿಟಿಐ): ಗುಂಡಿನ ಚಕಮಕಿಯಲ್ಲಿ ಇಬ್ಬರು ಭಾರತೀಯ ಯೋಧರು ಹುತಾತ್ಮರಾಗಿ, ಮೂವರು ಭಯೋತ್ಪಾದಕರನ್ನು ಹತ್ಯೆ ಮಾಡಿದ ನಂತರ ಭದ್ರತಾ ಪಡೆಗಳು ಶನಿವಾರ ಕಿಶ್ತವಾಢ್, ಉಧಮ್‌ಪುರ, ಪೂಂಚ್ ಮತ್ತು ರಾಜೌರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಭಯೋತ್ಪಾದಕರ ನಿಗ್ರಹಕ್ಕೆ ಕಾರ್ಯಾಚರಣೆ ತೀವ್ರಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಿಶ್ತವಾಢ್ ಜಿಲ್ಲೆಯ ಛತ್ರೂ ವ್ಯಾಪ್ತಿಯ ಪಿಂಗ್ನಾಲ್ ದುಗಡ್ಡಾದ ಅರಣ್ಯದಲ್ಲಿ ಭದ್ರತಾ ಪಡೆಗಳು ಮತ್ತು ಪೊಲೀಸರು ನಡೆಸುತ್ತಿರುವ ಜಂಟಿ ಕಾರ್ಯಾಚರಣೆ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಶುಕ್ರವಾರ ರಾತ್ರಿ ಗುಂಡಿನ ಚಕಮಕಿಯ ನಂತರ, ಸುತ್ತಲೂ ಕವಿದಿದ್ದ ಕತ್ತಲೆಯ ಲಾಭ ಪಡೆದು ಸ್ಥಳದಿಂದ ಪರಾರಿಯಾಗಿರುವ ಭಯೋತ್ಪಾದಕರ ಪತ್ತೆಗೆ ಡ್ರೋನ್‌ಗಳು ಮತ್ತು ಇತರ ಅತ್ಯಾಧುನಿಕ ಉಪಕರಣಗಳೊಂದಿಗೆ ಭದ್ರತಾ ಪಡೆಗಳು ಇಡೀ ಪ್ರದೇಶವನ್ನು ಸುತ್ತುವರಿದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆ.11 ರಂದು ಪಾಕಿಸ್ತಾನ ಮೂಲದ ಜೈಶ್-ಎ-ಮೊಹಮ್ಮದ್ (ಜೆಎಂ) ಸಂಘಟನೆಯ ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಿದ ನಂತರ ಉಧಮ್‌ಪುರ ಜಿಲ್ಲೆಯ ಬಸಂತ್‌ಗಢ ಪ್ರದೇಶದ ಖಂಡಾರಾ ಟಾಪ್, ಕುದ್ವಾ ಮತ್ತು ರೈಚಕ್‌ನ ಮೇಲ್ಭಾಗದಲ್ಲಿ ತೀವ್ರ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಪೂಂಚ್‌ನ ಸುರನ್‌ಕೋಟೆ ಮತ್ತು ರಜೌರಿ ಜಿಲ್ಲೆಯ ನೌಶೆರಾ ಮತ್ತು ಥನಾಮಂಡಿ ಅರಣ್ಯ ಪ್ರದೇಶಗಳಲ್ಲಿ ಭದ್ರತಾ ಪಡೆಗಳು ಶೋಧ ನಡೆಸುತ್ತಿವೆ ಎಂದು ಅವರು ಹೇಳಿದರು.

'ದಲಿತ ಬಾಲಕನ ಬೆತ್ತಲೆಗೊಳಿಸಿ, ನೃತ್ಯಕ್ಕೆ ಒತ್ತಾಯ'

ಕೋಟಾ (ಪಿಟಿಐ): ತಮ್ಮ ಮ್ಯೂಸಿಕ್ ಸಿಸ್ಟಂನ ವೈರ್ ಕದ್ದಿದ್ದಾನೆ ಎಂದು ಆರೋಪಿಸಿ ಆರು ಮಂದಿ ಸೇರಿ 12 ವರ್ಷದ ದಲಿತ ಬಾಲಕನ್ನು ಬೆತ್ತಲೆಗೊಳಿಸಿ, ಹಾಡೊಂದಕ್ಕೆ ನಗುತ್ತಾ ನೃತ್ಯ ಮಾಡಬೇಕೆಂದು ಬಲವಂತ ಮಾಡಿ, ನೃತ್ಯದ ದೃಶ್ಯಗಳನ್ನು ವಿಡಿಯೊ ಮಾಡಿರುವ ಘಟನೆ ಇಲ್ಲಿ ನಡೆದಿದೆ.

ಘಟನೆ ಬಗ್ಗೆ ಪೊಲೀಸರು ಶನಿವಾರ ಮಾಹಿತಿ ನೀಡಿದ್ದಾರೆ. 'ಸಂಗೀತ ತಂಡ ವೊಂದರ ಆರು ಮಂದಿ ಈ ಕೃತ್ಯ ನಡೆಸಿದ್ದು, ಇವರನ್ನು ಬಂಧಿಸಲಾಗಿದೆ. ಇವರ ಮೇಲೆ ಪೋಕ್ಸೊ ಸೇರಿದಂತೆ ಭಾರತೀಯ ನ್ಯಾಯ ಸಂಹಿತೆ, ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು. ಬಾಲಕ ನೃತ್ಯ ಮಾಡುತ್ತಿರುವಾಗ ಆರು ಮಂದಿ, ಆತನ ಮುಂದೆ ಕುಳಿತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ. ಪೊಲೀಸರ ಕೈಗೂ ವಿಡಿಯೊ ತಲುಪಿದೆ. ಈ ಬಳಿಕ, ಸಂತ್ರಸ್ತ ಬಾಲಕನ್ನು ಪತ್ತೆ ಹಚ್ಚಿದ ಪೊಲೀಸರು, ಅವರ ತಂದೆ ದೂರು ನೀಡುವಂತೆ ಮಾಡಿದ್ದಾರೆ.

ಎನ್‌ಕೌಂಟರ್: ನಕ್ಸಲ್ ಸಾವು

ರಾಯ್‌ಪುರ್ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶನಿವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲ್ ಒಬ್ಬ ಮೃತಪಟ್ಟ ಎಂದು ಪೊಲೀಸರು ತಿಳಿಸಿದರು.

'ಇಲ್ಲಿನ ಚಿಂತಾಗುಫಾ ಪೊಲೀಸ್ ಠಾಣಾ ವ್ಯಾಪ್ತಿಯ ತುಮಲ್‌ಪಾರ ಗ್ರಾಮದ ಶಿಖರದ ದಟ್ಟ ಅರಣ್ಯದಲ್ಲಿ ಬೆಳಿಗ್ಗೆ ನಕ್ಸಲ್ ವಿರೋಧಿ ಪಡೆ ಹಾಗೂ ಭದ್ರತಾ ಪಡೆಗಳು ಜಂಟಿಯಾಗಿ ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲ್ ಮೃತಪಟ್ಟರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವ್ಹಾಣ್ ತಿಳಿಸಿದರು.

'ಕಾರ್ಯಾಚರಣೆಯಲ್ಲಿ ಜಿಲ್ಲಾ ಮೀಸಲು ಪೊಲೀಸ್ ಪಡೆ, ಬಸ್ತರ್‌ನ ಹೋರಾಟಗಾರರು, ರಾಜ್ಯ ಹಾಗೂ ಜಿಲ್ಲಾ ಪೊಲೀಸರು ಭಾಗಿಯಾಗಿದ್ದರು. ನಿರಂತರ ಗುಂಡಿನ ದಾಳಿ ನಿಂತ ಬಳಿಕ ಸ್ಥಳದಲ್ಲಿ ನಕ್ಸಲರ ಮೃತದೇಹವು ಪತ್ತೆಯಾಗಿದ್ದು, ಅಪಾರ ಪ್ರಮಾಣದ ಶಸ್ತ್ರಾಸ್ತ್ರ, ಮದ್ದುಗುಂಡು, ನಕ್ಸಲ್ ಚಳವಳಿಗೆ ಸಂಬಂಧಿಸಿದ ಕರಪತ್ರಗಳು ಪತ್ತೆಯಾದವು' ಎಂದು ಅವರು ವಿವರಿಸಿದರು. 'ಮೃತ ನಕ್ಸಲನ ಗುರುತು ಪತ್ತೆಯಾಗಿಲ್ಲ. ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ' ಎಂದರು.

154 ನಕ್ಸಲರು ಮೃತ: 'ಈ ವರ್ಷದಲ್ಲಿ ಸುಕ್ಮಾ ಸೇರಿದಂತೆ ರಾಜ್ಯದ ಬಸ್ತಾರ್ ವಿಭಾಗದಲ್ಲಿ ವಿವಿಧೆಡೆ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು 154 ನಕ್ಸಲರು ಮೃತಪಟ್ಟಿದ್ದಾರೆ' ಎಂದು ಎಸ್‌ಪಿ ಕಿರಣ್ ಚವ್ಹಾಣ್ ತಿಳಿಸಿದರು.

ಎಂಟು ಮಂದಿ ನಕ್ಸಲರ ಬಂಧನ–ಶಸ್ತ್ರಾಸ್ತ್ರ ವಶ: ಸುಕ್ಮಾ ಜಿಲ್ಲೆಯ ಜಗರ್‌ಗುಂಡ ಪೊಲೀಸ್ ಠಾಣಾ ವ್ಯಾಪ್ತಿಯ ಬೈನ್‌ಪಲ್ಲಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದ ಜಂಟಿ ಶೋಧ ಕಾರ್ಯಾಚರಣೆಯಲ್ಲಿ ೮ಟು ಮಂದಿ ನಕ್ಸಲರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು. ಸ್ಥಳದಲ್ಲಿ ನಕ್ಸಲರು ಬೀಡುಬಿಟ್ಟಿರುವುದನ್ನು ಖಚಿತಪಡಿಸಿಕೊಂಡ ಭದ್ರತಾ ಪಡೆಗಳು ಸುತ್ತುವರಿದು ವಶಕ್ಕೆ ತೆಗೆದುಕೊಂಡವು.

ಬಂಧಿತರ ಪೈಕಿ ಮುಚಕಿ ಪಾಲಾ (33) ಕಮಾಂಡರ್ ಆಗಿದ್ದು, ಆತನ ತಲೆಗೆ ₹1 ಲಕ್ಷ ನಗದು ಬಹುಮಾನ ಘೋಷಿಸಲಾಗಿತ್ತು. ಉಪ ಕಮಾಂಡರ್ ಆಗಿದ್ದ ಮದ್ಕಾಂ ಸನ್ನು (40), ಉಳಿದವರು ಸಂಘಟನೆಯ ಇತರೆ ಸದಸ್ಯರಾಗಿದ್ದಾರೆ ಎಂದು ವಿವರಿಸಿದರು.

ನಕ್ಸಲರಿಂದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸುಕ್ಮಾ ಪೊಲೀಸರು ತಿಳಿಸಿದರು.

ನಕ್ಸಲ್ ನಾಯಕನ ವಿರುದ್ಧ ಆರೋಪಪಟ್ಟಿ

ಪಟ್ನಾ (ಪಿಟಿಐ): ಬಿಹಾರದ ಮಗಧ್ ಜಿಲ್ಲೆಯಲ್ಲಿ ನಿಷೇಧಿತ ನಕ್ಸಲ್ ಸಂಘಟನೆಯನ್ನು ಮತ್ತೆ ಬಲಪಡಿಸಲು ನಡೆಸಿದ ಪಿತೂರಿಯಲ್ಲಿ ಭಾಗಿಯಾದ ಪ್ರಮುಖ ನಕ್ಸಲ್ ನಾಯಕನ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಆರೋಪಪಟ್ಟಿ ಸಲ್ಲಿಸಿದೆ ಎಂದು ಶನಿವಾರ ಅಧಿಕಾರಿಗಳು ತಿಳಿಸಿದ್ದಾರೆ.

ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಶುಕ್ರವಾರ ಸಲ್ಲಿಸಲಾದ ಹೆಚ್ಚುವರಿ ಆರೋಪಪಟ್ಟಿಯಲ್ಲಿ ನಿಷೇಧಿತ ನಕ್ಸಲ್ ಸಂಘಟನೆ ಸಿಪಿಐನ ನಾಯಕ ಪ್ರಮೋದ್ ಮಿಶ್ರಾ ಎಂಬಾತನ ನಿಕಟವರ್ತಿಯಾಗಿದ್ದ ವಿನೋದ್ ಮಿಶ್ರಾನನ್ನು ಹೆಸರಿಸಲಾಗಿದೆ. ಆರೋಪಿ ಮಿಶ್ರಾ, ಸಿಪಿಐ (ಮಾವೋವಾದಿ) ನಕ್ಸಲ್ ಸಂಘಟನೆಯ ನಾಯಕರು ಸಭೆ ನಡೆಸಲು ತನ್ನ ಮನೆಯಲ್ಲಿ ಆಶ್ರಯ ನೀಡಿದ್ದನು ಎಂದು ತನಿಖೆಯಲ್ಲಿ ತಿಳಿದುಬಂದಿರುವುದಾಗಿ ಎನ್‌ಐಎ ತಿಳಿಸಿದೆ.

ಬೆಳಗಾವಿಯ ತುಷಾರ್ ದಾಖಲೆ

ಮೈಸೂರಿನಲ್ಲಿ ಅಂತರ ಜಿಲ್ಲಾ ಜೂನಿಯರ್ ಅಥ್ಲೆಟಿಕ್ಸ್

ಪ್ರಜಾವಾಣಿ ವಾರ್ತೆ

ಮೈಸೂರು: ಬೆಳಗಾವಿಯ ಬಿ.ಎಚ್.ತುಷಾರ್ ವಸಂತ್, ಶನಿವಾರ ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆರಂಭವಾದ ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನಲ್ಲಿ ಪುರುಷರ 800 ಮೀಟರ್ಸ್ ಓಟದಲ್ಲಿ ಹೊಸ ದಾಖಲೆ ಬರೆದರು.

ತುಷಾರ್ 1ನಿ. 49.71 ಸೆ.ಗಳಲ್ಲಿ ದೂರವನ್ನು ಕ್ರಮಿಸುವ ಮೂಲಕ 2022ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಂ.ಸಿ. ಮಿಲನ್ ಸ್ಥಾಪಿಸಿದ್ದ (1ನಿ.53.40 ಸೆ.) ಕೂಟ ದಾಖಲೆಯನ್ನು ಮುರಿದರು. ಇದೇ ವಯೋಮಿತಿಯ ಮಹಿಳೆಯರ 800 ಮೀಟರ್ಸ್ ಓಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದೀಪಶ್ರೀ 2ನಿ.16.25 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರ ಸ್ಥಾನ ತಮ್ಮದಾಗಿಸಿಕೊಂಡರು.

ಮೈಸೂರು ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಆಶ್ರಯದಲ್ಲಿ ನಡೆದಿರುವ ಟೂರ್ನಿಯಲ್ಲಿ ಒಟ್ಟು 5 ವಿಭಾಗಗಳಲ್ಲಿ 136 ಸ್ಪರ್ಧೆಗಳು ನಿಗದಿಯಾಗಿದ್ದು, 1,600 ಸ್ಪರ್ಧಿಗಳು ಪಾಲ್ಗೊಂಡಿದ್ದಾರೆ. ಸೆ. 17ರವರೆಗೆ ಸ್ಪರ್ಧೆಗಳು ನಡೆಯಲಿವೆ.

ಮೊದಲ ದಿನದ ಫಲಿತಾಂಶ: ಪುರುಷರು: 23 ವರ್ಷದ ಒಳಗಿನವರು: 800 ಮೀ. ಓಟ: ಬಿ.ಎಚ್.ತುಷಾರ್ ವಸಂತ್ (ಬೆಳಗಾವಿ, ಕಾಲ: 1ನಿ. 49.71 ಸೆ)–1, ಕೆ. ಲೋಕೇಶ (ಯಾದಗಿರಿ)–2, ಎಸ್. ಕಮಲ್ ಕಣ್ಣನ್ (ಬೆಂಗಳೂರು)–3; 20 ವರ್ಷದ ಒಳಗಿನವರು: 800 ಮೀ. ಓಟ: ಜೆ.ಆರ್.ಕಲ್ಯಾಣ್ (ಬೆಂಗಳೂರು, ಕಾಲ: 1ನಿ.58.70 ಸೆ.)–1, ಎಚ್.ವೈ. ಚಿಂತನ್ (ಯಾದಗಿರಿ)–2, ಕಾಶಿ ಬೊಯಣ್ಣ (ದಕ್ಷಿಣ ಕನ್ನಡ)–3.

ಮಹಿಳೆಯರು: 23 ವರ್ಷದ ಒಳಗಿನವರು: ದೀಪಶ್ರೀ (ದಕ್ಷಿಣ ಕನ್ನಡ, ಕಾಲ: 2ನಿ.16.25 ಸೆ.)–1, ಪ್ರತೀಕ್ಷಾ (ಉಡುಪಿ)–2, ರೇಖಾ ಬಸಪ್ಪ (ದಕ್ಷಿಣ ಕನ್ನಡ)–3; 20 ವರ್ಷದೊಳಗಿವರು: ವೈಷ್ಣವಿ (ಬೆಳಗಾವಿ, 2ನಿ.20.20 ಸೆ)–1, ಪ್ರೀತಿಶಾ ಶೆಟ್ಟಿ (ದಕ್ಷಿಣ ಕನ್ನಡ)–2.

23 ವರ್ಷದ ಒಳಗಿನ ಪುರುಷರ 800 ಮೀಟರ್ಸ್ ಓಟದಲ್ಲಿ ಕೂಟ ದಾಖಲೆ ನಿರ್ಮಿಸಿದ ಬೆಳಗಾವಿಯ ಬಿ.ಎಚ್. ತುಷಾರ್ ವಸಂತ್ ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜು

ಡೇವಿಸ್ ಕಪ್: ಸ್ವೀಡನ್‌ಗೆ 2–0 ಮುನ್ನಡೆ

ಸ್ಟಾಕ್‌ಹೋಮ್: ಭಾರತ ತಂಡ, ಡೇವಿಸ್ ಕಪ್ ವಿಶ್ವ ಗುಂಪು ಒಂದರ ಪಂದ್ಯದಲ್ಲಿ ಸ್ವೀಡನ್ ವಿರುದ್ಧ ಮೊದಲ ದಿನವಾದ ಶನಿವಾರ 0–2 ಹಿನ್ನಡೆ ಅನುಭವಿಸಿತು. ಮೊದಲ ಸಿಂಗಲ್ಸ್ ಪಂದ್ಯ ಆಡಿದ ಶ್ರೀರಾಮ್ ಬಾಲಾಜಿ ಮತ್ತು ಎರಡನೇ ಸಿಂಗಲ್ಸ್ ಆಡಿದ ರಾಮಕುಮಾರ್ ರಾಮನಾಥನ್ ಇಬ್ಬರೂ ಎದುರಾಳಿಗಳಿಗೆ ನೇರ ಸೆಟ್‌ಗಳಲ್ಲಿ ಮಣಿದರು.

ರಾಯಲ್ ಟೆನಿಸ್ ಹಾಲ್‌ನಲ್ಲಿ ನಡೆದ ಪಂದ್ಯದ ಸಿಂಗಲ್ಸ್‌ನಲ್ಲಿ ಎಲಿಯಾಸ್ ಯೀಮರ್ 6–4 6–2 ರಿಂದ ಡಬಲ್ಸ್ ಪರಿಣತ ಶ್ರೀರಾಮ್ ಸೋಲಿಸಲು ಅಷ್ಟೇನೂ ಕಷ್ಟಪಡಲಿಲ್ಲ.

ಟೆನಿಸ್ ದಿಗ್ಗಜ ಬ್ಯೋನ್ ಬೋರ್ಗ್ ಅವರ ಮಗ, 21 ವರ್ಷ ವಯಸ್ಸಿನ ಲಿಯೊ ಬೋರ್ಗ್ ಎರಡನೇ ಪಂದ್ಯದಲ್ಲಿ ರಾಮಕುಮಾರ್ ಅವರನ್ನು 6–3, 6–4 ರಿಂದ ಹಿಮ್ಮೆಟ್ಟಿಸಲು ಕೇವಲ 58 ನಿಮಿಷ ತೆಗೆದುಕೊಂಡರು.

ಚೆಸ್ ಒಲಿಂಪಿಯಾಡ್: ಮಹಿಳಾ ವಿಭಾಗದಲ್ಲೂ ಮುನ್ನಡೆ

ಹಂಗರಿ 'ಬಿ' ಮೇಲೆ ಗೆದ್ದ ಭಾರತ

ಬುಡಾಪೆಸ್ಟ್ (ಹಂಗರಿ), (ಪಿಟಿಐ): ಮೊದಲ ಎರಡು ಪಂದ್ಯಗಳನ್ನು 4–0 ಅಂತರದಿಂದ ಗೆದ್ದಿದ್ದ ಭಾರತ ತಂಡ, 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದ ಮೂರನೇ ಸುತ್ತಿನಲ್ಲಿ ಶುಕ್ರವಾರ ಹಂಗರಿ 'ಬಿ' ತಂಡದ ಎದುರು ಗೆಲ್ಲುವ ಮೊದಲು ಅರ್ಧ ಪಾಯಿಂಟ್ ಕಳೆದುಕೊಂಡಿತು.

ಅರ್ಜುನ್ ಇರಿಗೇಶಿ ಅವರು ಪೀಟರ್ ಪ್ರೊಹಝ್ಕಾ ವಿರುದ್ಧ ಆಕ್ರಮಣಕಾರಿಯಾಗಿ ಆಡಿ, ಕ್ವೀನ್ ಬಲಿಗೊಟ್ಟು ನಂತರ 'ಚೆಕ್‌ಮೇಟ್' ಮಾಡಿ ಭಾರತದ ಗೆಲುವಿನಲ್ಲಿ ಗಮನ ಸೆಳೆದರು.

ವಿದಿತ್ ಗುಜರಾತಿ, ಪಾಪ್ ಗ್ಯಾಬೊರ್ ಎದುರು 'ಡ್ರಾ'ಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಆದರೆ ಇನ್ನಿಬ್ಬರು ಆಟಗಾರರು– ಡಿ.ಗುಕೇಶ್ ಮತ್ತು ಆರ್.ಪ್ರಜ್ಞಾನಂದ ಕ್ರಮವಾಗಿ ಆ್ಯಡಂ ಕೊಝಾಕ್ ಮತ್ತು ಥಾಮಸ್ ಬನುಝ್ ಅವರನ್ನು ಸೋಲಿಸಿ ಭಾರತದ ಯಶಸ್ಸಿನ ಓಟ ಮುಂದುವರಿಸಿದರು.

ಅರ್ಜುನ್ ಇರಿಗೇಶಿ ಪಿಟಿಐ ಚಿತ್ರ

ಹಾರಿಕಾಗೆ ಸೋಲು: ಮಹಿಳೆಯರ ವಿಭಾಗದಲ್ಲಿ ಮೊದಲ ಬೋರ್ಡ್‌ನಲ್ಲಿ ಡಿ.ಹಾರಿಕ ಅವರು ಆಘಾತಕಾರಿ ಸೋಲನುಭವಿಸಿದರು ಭಾರತ 3–1 ರಿಂದ ಸ್ವಿಜರ್ಲೆಂಡ್ ತಂಡವನ್ನು ಸೋಲಿಸುವಲ್ಲಿ ಯಶಸ್ವಿಯಾಯಿತು.

ಇತ್ತೀಚೆಗಷ್ಟೇ ರಷ್ಯಾದ ಪೌರತ್ವ ತ್ಯಜಿಸಿ ಸ್ವಿಜರ್ಲೆಂಡ್‌ಗೆ ವಲಸೆಹೋಗಿ ಇತ್ತೀಚೆಗೆ ಅಲ್ಲಿನ ತಂಡ ಸೇರಿಕೊಂಡಿರುವ ಅಲೆಕ್ಸಾಂಡ್ರಾ ಕೊಸ್ಟೆನಿಯುಕ್ ಅವರು ಹಾರಿಕಾ ಅವರನ್ನು ಸೋಲಿಸಿದರು.

ಆದರೆ ವೈಶಾಲಿ, ಎದುರಾಳಿ ಘಝಲ್ ಹಕಿಮಿಫರ್ದ್ ಅವರಿಗೆ ಮೇಲುಗೈಗೆ ಅವಕಾಶ ನೀಡದೇ ಗೆಲುವು ಪಡೆದರು. ಹಕಿಮಿಫರ್ದ್, ಇರಾನ್ ಪೌರತ್ವ ತೊರೆದು ಇತ್ತೀಚೆಗೆ ಸ್ವಿಜರ್ಲೆಂಡ್‌ನಲ್ಲಿ ನೆಲೆಕಂಡುಕೊಂಡಿದ್ದಾರೆ. ವಿಶ್ವ ಜೂನಿಯರ್ ಚಾಂಪಿಯನ್ ದಿವ್ಯಾ ದೇಶಮುಖ್ ಮತ್ತು ನಾಲ್ಕನೇ ಬೋರ್ಡ್‌ನಲ್ಲಿ ವಂತಿಕಾ ಅಗರವಾಲ್ ತಮ್ಮ ಎದುರಾಳಿಗಳನ್ನು ಸೋಲಿಸಿದರು.

ಓಪನ್ ವಿಭಾಗದ ಅನಿರೀಕ್ಷಿತ ಫಲಿತಾಂಶವೊಂದರಲ್ಲಿ ಇಟಲಿ 3–1 ರಿಂದ ಐದನೇ ಶ್ರೇಯಾಂಕದ ಹಾಲೆಂಡ್‌ಗೆ ಅನಿರೀಕ್ಷಿತ ಆಘಾತ ನೀಡಿದರು. ಡಚ್ ತಂಡದ ಅಗ್ರ ಆಟಗಾರ ಅನಿಶ್ ಗಿರಿ ಸೋಲನುಭವಿಸಿದ್ದು ತಂಡಕ್ಕೆ ದೊಡ್ಡ ಹಿನ್ನಡೆಯಾಯಿತು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ. ಜಿಲ್ಲಾ ಅಧಿಕಾರಿಗಳ ಕಛೇರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ
ಮೌಲಾನ ಅಜಾದ ಭವನ, ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರ, ಬಳ್ಳಾರಿ–583101.E-mail:domballari22@gmail.com
Phone No: 08392-200125/224

ಸಂಖ್ಯೆ :ಅಕಇಬ/ಆ.ಸಾ.ಟೆಂ/ಸಿಆರ್–10/2024–25 ದಿನಾಂಕ:12–09–2024

ಟೆಂಡರ್ ಪ್ರಕಟಣೆ

ವಿಷಯ: 2024–25ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ, ಟೆಂಡರ್ ಆಹ್ವಾನಿಸುವ ಕುರಿತು.
ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: MWD 265 MDS 2023 ಬೆಂಗಳೂರು ದಿನಾಂಕ: 18–07–2023.

2024–25ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗಾಗಿ ಸೆಪ್ಟಂಬರ್–2024 ರಿಂದ 12 ಮಾಹೆಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ನಿಯಮ 17(2)ರಡಿ 15 ದಿನಗಳ ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್ (E-Procurement) ಮೂಲಕ ಆಹ್ವಾನಿಸಲಾಗಿದೆ.

ಇ – ಟೆಂಡರ್ ಘಟನಾವಳಿಗಳು: 1.ಟೆಂಡರ್ ಪ್ರಕಟಣೆ ದಿನಾಂಕ ದಿನಾಂಕ:12–09–2024. 2.ಟೆಂಡರ್ ಸಂಖ್ಯೆ: MWD/2024-25/IND0079 Date:12-09-2024. 3.ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ.418.98/–ಲಕ್ಷಗಳು. 4.ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: ದಿನಾಂಕ:12–09–2024. 5.ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: ದಿನಾಂಕ: 14–10–2024 ಸಂಜೆ 5.00 ಗಂಟೆ. 6.ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: ದಿನಾಂಕ: 16–10–2024 ಸಂಜೆ 5.00 ಗಂಟೆ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ. 7.ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ. ದಿನಾಂಕ: 22–10–2024 ಬೆಳಿಗ್ಗೆ 11.00 ಗಂಟೆ (ದಿನಾಂಕ ಬದಲಾವಣೆ ಆದಲ್ಲಿ ತಿಳಿಸಲಾಗುವುದು). 8.ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ. (ದೂರವಾಣಿ ಸಂಖ್ಯೆ: 08392–200125) 9538940305

ಟೆಂಡರ್ ತಪಶೀಲುಗಳಿಗಾಗಿ NEFT (Online) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು (Website: https://Kppp.karnataka.gov.in) ನಲ್ಲಿ ನೋಡಬಹುದು.
ಸಹಿ/– (ವಿಠೋಬಾ ಹೊನಕಾಂಡೆ)
ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/440/ಕೆಎಸ್‌ಎಂಸಿಎ/2024–25

ನವದೀಪ್ ಸಿಂಗ್
ಹರಿಯಾಣ, 23 ವರ್ಷ
ಸ್ಪರ್ಧೆ: ಪುರುಷರ ಜಾವೆಲಿನ್ ಎಫ್41
ಸಾಧನೆ: ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು, ವಿಶ್ವ ಪ್ಯಾರಾ ಗ್ರ್ಯಾನ್‌ಪ್ರಿಕ್ಸ್‌ನಲ್ಲಿ ಚಿನ್ನ, ಏಷ್ಯನ್ ಯೂತ್ ಪ್ಯಾರಾ ಗೇಮ್ಸ್‌ನಲ್ಲಿ ಸ್ವರ್ಣ

ನವದೀಪ್ ಎತ್ತರದ ಸಾಧನೆ...

ಪ್ಯಾರಾಲಿಂಪಿಕ್ಸ್‌ನಲ್ಲಿ ಮಿಂಚು ಹರಿಸಿದ ಅಥ್ಲೀಟ್‌ಗಳಲ್ಲಿ ಹೆಚ್ಚು ಗಮನ ಸೆಳೆದ ಹೆಸರು ನಾಲ್ಕೂವರೆ ಅಡಿ ಎತ್ತರದ ಜಾವೆಲಿನ್ ಥ್ರೋ ಪಟು ನವದೀಪ್ ಸಿಂಗ್. ಈ ಕುಬ್ಜನ ಚಿನ್ನದ ಪಯಣವೇ ರೋಚಕ.

ಹರಿಯಾಣದ ಮಧ್ಯಮ ವರ್ಗದ ಕೃಷಿ ಕುಟುಂಬದಲ್ಲಿ ಜನಿಸಿದ ನವದೀಪ್ ಜೀವನದಲ್ಲಿ ಸಾಕಷ್ಟು ನೋವುಗಳನ್ನುಂಡವರು. ನವದೀಪ್ ಅವರಿಗೆ ಎರಡು ವರ್ಷ ತುಂಬಿದಾಗ ಕುಬ್ಜತೆ ಇರುವುದು ಪತ್ತೆಯಾಗಿತ್ತು. ರಾಷ್ಟ್ರ ಮಟ್ಟದ ಕುಸ್ತಿಪಟುವಾಗಿದ್ದ ತಂದೆ ದಲ್ಬೀರ್ ಸಿಂಗ್ ವಾಸ್ತವವನ್ನು ಅರಿತುಕೊಂಡು ಮಗನನ್ನು ಬೆಂಬಲಿಸಿದರು. ಅವರ ಕ್ರೀಡಾಸಕ್ತಿಗೆ ನೀರೆರೆದು ಪೋಷಿಸಿದರು.

ನವದೀಪ್ ಅವರ ಎತ್ತರ ಕೇವಲ ನಾಲ್ಕು ಅಡಿ ನಾಲ್ಕು ಇಂಚು. ಆದರೆ, ಕುಬ್ಜತೆಯನ್ನು ತಮ್ಮ ಸಾಧನೆಗೆ ಅಡ್ಡಿಯಾಗಲು ಬಿಡಲಿಲ್ಲ. 2017ರಲ್ಲಿ ಏಷ್ಯನ್ ಯೂತ್ ಪ್ಯಾರಾ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಮೊದಲ ಹೆಜ್ಜೆಯಿಟ್ಟರು. ರಾಷ್ಟ್ರೀಯ ಸ್ಪರ್ಧೆ ಮತ್ತು 2021ರಲ್ಲಿ ವಿಶ್ವ ಪ್ಯಾರಾ ಗ್ರ್ಯಾನ್‌ಪ್ರಿಕ್ಸ್ ಕೂಟದಲ್ಲಿ ಚಿನ್ನದ ಪದಕಗಳನ್ನು ಗೆದ್ದು ದಾಖಲೆ ಬರೆದರು.

ಒಲಿದ ಅದೃಷ್ಟ

ಪ್ಯಾರಿಸ್‌ನಲ್ಲಿ ನಡೆದ ಫೈನಲ್‌ನಲ್ಲಿ 47.32 ಮೀಟರ್ ಸಾಧನೆಯೊಂದಿಗೆ ನವದೀಪ್ ಬೆಳ್ಳಿ ಪದಕವನ್ನು ಕೊರಳಿಗೇರಿಸಿಕೊಂಡಿದ್ದರು. ಆದರೆ, ಇವರಿಗಿಂತ ಕೊಂಚ ದೂರ ಎಸೆದಿದ್ದ ಇರಾನ್ ಅಥ್ಲೀಟ್ ವಿವಾದಾತ್ಮಕ ಬಾವುಟ ತೋರಿಸಿ ಅನರ್ಹಗೊಂಡರು. ಹೀಗಾಗಿ, ಬೆಳ್ಳಿಯ ಸಾಧನೆಗೆ ಚಿನ್ನದ ಮೆರುಗಿನ ಅದೃಷ್ಟ ಒಲಿಯಿತು.

ಆದಾಯ ತೆರಿಗೆ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿರುವ ಅವರು, ಸದ್ಯ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶೀತಲ್ ದೇವಿ

ಜಮ್ಮು ಕಾಶ್ಮೀರ, 17 ವರ್ಷ • **ಸ್ಪರ್ಧೆ:** ಆರ್ಚರಿ ಕಾಂಪೌಂಡ್ ಮಿಶ್ರ ಟೀಮ್ • **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚು, ಏಷ್ಯನ್ ಗೇಮ್ಸ್‌ನಲ್ಲಿ ಎರಡು ಚಿನ್ನ ಸೇರಿ ಮೂರು ಪದಕಗಳು

ಬಿಲ್ಗಾರ್ತಿ ಶೀತಲ್ ಎಂಬ ಅಚ್ಚರಿ

ಎರಡೂ ತೋಳುಗಳಿಲ್ಲದ ಶೀತಲ್ ದೇವಿ ಆರ್ಚರಿಯ ಸಾಧನೆಯನ್ನು ಕಂಡು ವಿಶ್ವವೇ ಬೆರಗಾಗಿದೆ. ಕಾಲಿನಲ್ಲಿ ಬಿಲ್ಲನ್ನು ಹಿಡಿದುಕೊಂಡು ಬಾಯಿಯಿಂದ ಬಾಣವನ್ನು ಬಿಗಿಗೊಳಿಸಿ ಗುರಿಯಿಡುವ ಇವರ ಕೌಶಲ ಅಚ್ಚರಿ ಮೂಡಿಸಿದೆ.

ಜಮ್ಮು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಕೃಷಿ ಕುಟುಂಬದ ಹಿನ್ನೆಲೆಯ ಮನ್ ಸಿಂಗ್ ಮತ್ತು ಶಕ್ತಿ ದೇವಿ ದಂಪತಿಯ ಮುದ್ದಿನ ಮಗಳು ಶೀತಲ್‌ಗೆ ಹುಟ್ಟುವಾಗಲೇ ಕೈಗಳು ಬೆಳೆದಿರಲಿಲ್ಲ. ಅಪರೂಪದ ಫೋಕೊಮೆಲಿಯಾ ಎಂಬ ಕಾಯಿಲೆಗೆ ತುತ್ತಾಗಿದ್ದ ಆಕೆಗೆ ಕೈಗಳಿಲ್ಲ ಎಂಬ ಕೊರತೆ ಕಾಡದಂತೆ ಪೋಷಕರು ನೋಡಿಕೊಂಡಿದ್ದರು.

ತೋಳುಗಳಿಲ್ಲದಿದ್ದರೂ ಮನೆಯ ಸುತ್ತಮುತ್ತಲಿನ ಮರಗಳನ್ನು ಸರಸರನೆ ಏರುತ್ತಿದ್ದರು. ಅದೇ ಅಭ್ಯಾಸ ಇವರ ಶರೀರಕ್ಕೆ ಬಲ ತುಂಬಿತು. 2019ರಲ್ಲಿ ಕಿಶ್ತ್ವಾರ್‌ನಲ್ಲಿ ಭಾರತೀಯ ಸೇನೆ ಆಯೋಜಿಸಿದ್ದ ಯುವ ಕ್ರೀಡಾಕೂಟದ ವೇಳೆ ಶೀತಲ್ ಅವರ ಕ್ರೀಡಾಸ್ಫೂರ್ತಿಯನ್ನು ಕಂಡು ಸೇನೆಯ ಅಧಿಕಾರಿಗಳು ಸಹಾಯಹಸ್ತ ಚಾಚಿದರು. ಬೆಂಗಳೂರಿನ ಮೇಜರ್ ಅಕ್ಷಯ್ ಮೆಮೋರಿಯಲ್ ಟ್ರಸ್ಟ್‌ನ ನೆರವೂ ದೊರಕಿತು. ಇದು ಅವರ ಆರ್ಚರಿ ಬದುಕಿಗೆ ಹೊಸ ದಿಕ್ಕನ್ನು ತೋರಿಸಿತು.

ಆರಂಭದಲ್ಲಿ 27.5 ಕೆಜಿ ಭಾರದ ಬಿಲ್ಲನ್ನು ಎತ್ತಲು ಸಾಧ್ಯವಾಗದ ಪರಿಸ್ಥಿತಿ ಅವರದ್ದಾಗಿತ್ತು. ಬಿಲ್ಲು ಹಿಡಿಯಲು ಬಳಸುವ ಬ್ಯಾಂಡ್‌ನಿಂದಾಗಿ ಭುಜದಲ್ಲಿ ಅದೆಷ್ಟೋ ಬಾರಿ ಗಾಯವಾಗಿತ್ತು. ಆದರೆ, ಹಂತಹಂತವಾಗಿ ಪರಿಣತಿ ಗಳಿಸಿದರು. ಪ್ಯಾರಿಸ್‌ನಲ್ಲಿ ವೈಯಕ್ತಿಕ ಸ್ಪರ್ಧೆಯಲ್ಲಿ ನಿರಾಸೆ ಅನುಭವಿಸಿದರೂ ಮಿಶ್ರ ತಂಡ ಸ್ಪರ್ಧೆಯಲ್ಲಿ ರಾಕೇಶ್ ಕುಮಾರ್ ಅವರೊಂದಿಗೆ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಇವರ ಬಾಣ ಪ್ರಯೋಗದ ಕೌಶಲ ನೋಡಲೆಂದೇ ಪ್ರೇಕ್ಷಕರು ಸೇರಿದ್ದರು. ಅಲ್ಲಿ ಪದಕ ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಕ್ರೀಡಾಪಟು ಕೂಡ ಆಗಿದ್ದಾರೆ. ಎರಡೂ ತೋಳುಗಳಿಲ್ಲದ ವಿಶ್ವದ ಮೊದಲ ಬಿಲ್ಗಾರ್ತಿಯಾಗಿರುವ ಶೀತಲ್‌ಗೆ ಅರ್ಜುನ ಪ್ರಶಸ್ತಿ ಲಭಿಸಿದೆ.

ಸವಾಲು ಸಾವಿರ ಆತ್ಮವಿಶ್ವಾಸ ಅಪಾರ

ಅಂಗವೈಕಲ್ಯ ದೇಹಕ್ಕಷ್ಟೇ, ಮನಸ್ಸಿಗಲ್ಲ ಎನ್ನುವಂತೆ ಬದುಕಿ, ಸಾಧಿಸಿ ತೋರಿಸಿದ ಜೀವಚೇತನಗಳಿವು. ಹುಟ್ಟನಿಂದ, ಅಪಘಾತ, ಅಪರೂಪದ ಕಾಯಿಲೆಗಳಿಂದ ಅಂಗಗಳನ್ನು ಕಳೆದುಕೊಂಡರೂ ಕೊರಗದೇ ಎದ್ದುನಿಂತು ಜಯಿಸಿದವರು. ನೋವು, ಸಂಕಷ್ಟ, ಕಷ್ಟನಷ್ಟಗಳಿಗೇ ಸವಾಲು ಹಾಕಿದವರು. ಇವರಿಗೆ ಕೊರತೆ ಕಾಡದಂತೆ ನೋಡಿಕೊಂಡವರು ಪೋಷಕರು. ಅವರ ಕಕ್ಕುಲಾತಿಯಿಂದಲೇ ಬೆಳೆದ ಇವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ ಪದಕಗಳನ್ನು ಮುಡಿಗೇರಿಸಿಕೊಂಡರು. ಇಂತಹ ಹತ್ತು ಸಾಧಕ–ಸಾಧಕಿಯರ ಸ್ಫೂರ್ತಿದಾಯಕ ಕಥನಗಳ ಗುಚ್ಛವನ್ನು **ಪ್ರದೀಶ್ ಎಚ್. ಮರೋಡಿ** ಕಟ್ಟಿಕೊಟ್ಟಿದ್ದಾರೆ

ಛಿದ್ರಗೊಂಡಿದ್ದು ಕಾಲು, ಕನಸಲ್ಲ!

ಪುರುಷರ ಷಾಟ್‌ಪಟ್‌ನಲ್ಲಿ ಕಂಚು ಗೆದ್ದ ನಾಗಾಲ್ಯಾಂಡ್‌ನ ಹೊಕಾಟೊ ಹೊಟೊಝೆ ಸೆಮಾ ಅವರು ಭಾರತೀಯ ಸೇನೆಯ ಸೈನಿಕ. ಅವರು ಕೇವಲ 17 ವರ್ಷ ವಯಸ್ಸಿನಲ್ಲಿ ಸೇನೆಗೆ ಸೇರಿದ್ದರು. 2002ರಲ್ಲಿ ವಿಶೇಷ ಪಡೆಯ ಭಾಗವಾಗಿದ್ದ ಹೊಕಾಟೊ ಗಡಿ ನಿಯಂತ್ರಣ ರೇಖೆ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಜಮ್ಮು ಕಾಶ್ಮೀರದ ಚೌಕಿಬಾಲ್‌ನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನೆಲಬಾಂಬ್ ಸ್ಫೋಟಗೊಂಡು ಅವರ ಎಡಗಾಲಿನ ಮಂಡಿಯ ಕೆಳಗಿನ ಭಾಗ ಛಿದ್ರಗೊಂಡಿತು.

ಯುವ ಸೈನಿಕನ ಕನಸುಗಳು ಕಾಲಿನೊಂದಿಗೆ ನುಚ್ಚುನೂರಾದರೂ ಎದೆಗುಂದಲಿಲ್ಲ. ತಮ್ಮ ನೋವನ್ನು ಮೆಟ್ಟಿನಿಲ್ಲಲು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡರು. 32 ವರ್ಷ ವಯಸ್ಸಿನಲ್ಲಿ ಅವರ ಫಿಟ್ನೆಸ್ ನೋಡಿ ಸೇನೆಯ ಹಿರಿಯ ಅಧಿಕಾರಿಗಳು ಷಾಟ್‌ಪಟ್ ಕ್ರೀಡೆಯತ್ತ ಗುರಿ ಕೇಂದ್ರೀಕರಿಸಲು ಪ್ರೋತ್ಸಾಹಿಸಿದರು. ರಾಕೇಶ್ ರಾವತ್ ಅವರ ಗರಡಿಯಲ್ಲಿ ಅಭ್ಯಾಸ ಆರಂಭಿಸಿದರು.

2022ರಲ್ಲಿ ಮೊರಾಕೊ ಗ್ರ್ಯಾನ್‌ಪ್ರಿಯಲ್ಲಿ ಬೆಳ್ಳಿಯ ಸಾಧನೆ ಮಾಡಿದ್ದ ಹೊಕಾಟೊ, ಪ್ಯಾರಿಸ್‌ನಲ್ಲಿ ವೈಯಕ್ತಿಕ ಅತ್ಯುತ್ತಮ 14.65 ಮೀಟರ್ ಸಾಧನೆಯೊಂದಿಗೆ ಭಾರತಕ್ಕೆ ಪ್ಯಾರಾಲಿಂಪಿಕ್ಸ್ ಪದಕವನ್ನು ಗೆದ್ದಿದ್ದಾರೆ.

ಹೊಕಾಟೊ ಹೊಟೊಝೆ ಸೆಮಾ
- **ನಾಗಾಲ್ಯಾಂಡ್, 40 ವರ್ಷ**
- **ಸ್ಪರ್ಧೆ:** ಪುರುಷರ ಷಾಟ್‌ಪಟ್ ಎಫ್57
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚು, ಏಷ್ಯನ್ ಕ್ರೀಡಾಕೂಟದಲ್ಲಿ ಕಂಚು, ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಬೆಳ್ಳಿ

ಸಾಧನೆಯ ಹಳಿಗೆ ಮರಳಿದ ಬದುಕು

ಹಿಮಾಚಲ ಪ್ರದೇಶದ ಮಂಡಿಯ ಐಐಟಿ ಪದವೀಧರ ನಿತೇಶ್‌ಕುಮಾರ್. ಕಾಲ್ಬಲವನ್ನೇ ನೆಚ್ಚಿಕೊಂಡಿರುವ ಫುಟ್‌ಬಾಲ್ ಕ್ರೀಡೆ ಬಗ್ಗೆ ಆಸಕ್ತಿ ಹೊಂದಿದ್ದ ನಿತೇಶ್ ಅವರ ಒಂದು ಕಾಲನ್ನು ನುಜ್ಜುಗುಜ್ಜು ಮಾಡಿದ್ದು 2009ರಲ್ಲಿ ನಡೆದ ದುರ್ಘಟನೆ. ವಿಶಾಖಪಟ್ಟಣದಲ್ಲಿ ನಡೆದ ರೈಲು ಅಪಘಾತ ನಿತೇಶ್ ಅವರ ಬದುಕಿನ ಹಳಿ ತಪ್ಪಿಸಿತು. ಆಗ ಅವರ ವಯಸ್ಸು 15 ವರ್ಷ. ಎಡಗಾಲಿಗೆ ಗಂಭೀರ ಪೆಟ್ಟಾಗಿ ಸುಮಾರು ಆರು ತಿಂಗಳು ಹಾಸಿಗೆ ಹಿಡಿದಿದ್ದರು. ನಿಧಾನವಾಗಿ ಚೇತರಿಸಿಕೊಂಡ ಅವರು ಪುಣೆಯ ಕೃತಕ ಅಂಗಜೋಡಣಾ ಕೇಂದ್ರಕ್ಕೆ ಭೇಟಿ ನೀಡಿದರು. ಅಲ್ಲಿ ಗಾಯಗೊಂಡ ಸೈನಿಕರು ಅಂಗಜೋಡಣೆಯ ನಂತರ ಸವಾಲುಗಳಿಗೆ ಸಜ್ಜಾಗುತ್ತಿದ್ದ ಪರಿಯನ್ನು ನೋಡಿ ತನ್ನಲ್ಲೂ ಮನೋಸ್ಥೈರ್ಯ ಬೆಳೆಸಿಕೊಂಡರು.

ಕಲಿಕೆಯಲ್ಲೂ ಪ್ರತಿಭಾನ್ವಿತರಾಗಿದ್ದ ಅವರು ಐಐಟಿಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದರು. ಈ ವೇಳೆ ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್ ಆಗಿದ್ದ ಪ್ರಮೋದ್ ಭಗತ್ ಅವರೊಂದಿಗಿನ ಆಕಸ್ಮಿಕ ಭೇಟಿ ಅವರ ಬದುಕಿಗೆ ಹೊಸ ದಿಕ್ಕು ತೋರಿತು. ವರ್ಷ ಕಳೆದಂತೆ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಕೌಶಲ ವೃದ್ಧಿಸಿಕೊಂಡರು. 2016ರಲ್ಲಿ ಫರಿದಾಬಾದ್‌ನಲ್ಲಿ ನಡೆದ ಪ್ಯಾರಾ ರಾಷ್ಟ್ರೀಯ ಕೂಟದಲ್ಲಿ ಹರಿಯಾಣ ತಂಡವನ್ನು ಪ್ರತಿನಿಧಿಸಿ ಕಂಚಿನ ಪದಕ ಗೆದ್ದರು. ಆನಂತರದ್ದು ಯಶೋಗಾಥೆ. ಪ್ಯಾರಿಸ್‌ನಲ್ಲಿ ಚಿನ್ನದ ಸಾಧನೆ ಮಾಡಿರುವ ಇವರು, ಪ್ರಸ್ತುತ ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೂರನೇ (ಸಿಂಗಲ್ಸ್) ಸ್ಥಾನದಲ್ಲಿದ್ದಾರೆ.

ನಿತೇಶ್ ಕುಮಾರ್
- **ರಾಜಸ್ಥಾನ, 29 ವರ್ಷ** • **ಸ್ಪರ್ಧೆ:** ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್ ಎಸ್ಎಲ್ 3
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬೆಳ್ಳಿ ಸೇರಿ ಮೂರು ಪದಕ, ಏಷ್ಯನ್ ಗೇಮ್ಸ್‌ನಲ್ಲಿ ಒಂದು ಸ್ವರ್ಣ ಸೇರಿ ನಾಲ್ಕು ಪದಕ

ಅಂಧನ ಬದುಕಲ್ಲಿ ಜೂಡೊ ಬೆಳಕು

ಪ್ಯಾರಾಲಿಂಪಿಕ್ಸ್‌ನ ಇತಿಹಾಸದಲ್ಲೇ ಜೂಡೊ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಪದಕವನ್ನು ತಂದುಕೊಟ್ಟ ಕಪಿಲ್ ಪರಮಾರ್ ಅವರು ಬದುಕುಳಿದಿದ್ದೇ ಪವಾಡ. ಮಧ್ಯಪ್ರದೇಶದ ಶಿವೋರ್ ಎಂಬ ಹಳ್ಳಿಯ ಟ್ಯಾಕ್ಸಿ ಚಾಲಕನ ಪುತ್ರನಾಗಿರುವ ಇವರು ಬಾಲ್ಯದಲ್ಲಿ ವಿದ್ಯುತ್ ಆಘಾತಕ್ಕೆ ಒಳಗಾಗಿದ್ದರು. ಹೊಲದಲ್ಲಿ ಆಟವಾಡುತ್ತಿದ್ದಾಗ ನೀರಿನ ಪಂಪ್ ಅನ್ನು ಆಕಸ್ಮಿಕವಾಗಿ ಸ್ಪರ್ಶಿಸಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದರು.

ಭೋಪಾಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಯಿತು. ಆರು ತಿಂಗಳು ಕೋಮಾದಲ್ಲಿದ್ದ ಕಪಿಲ್ ಕಣ್ಣುಗಳಿಗೆ ತೀವ್ರ ಹಾನಿಯಾಗಿತ್ತು. ಪ್ರಜ್ಞೆ ಬಂದಾಗ ಅವರು ಶೇಕಡ 90ರಷ್ಟು ದೃಷ್ಟಿ ಕಳೆದುಕೊಂಡಿದ್ದರು. ಇಲ್ಲಿಗೆ ಮಗನ ಬದುಕೇ ಮುಗಿಯಿತು ಎಂದು ಪೋಷಕರು ಕಣ್ಣೀರು ಹಾಕಿದ್ದರು. ವರ್ಷಗಳ ಬಳಿಕ ಚೇತರಿಸಿಕೊಂಡ ಅವರನ್ನು ಜೂಡೊ ಕ್ರೀಡೆ ಆಕರ್ಷಿಸಿತು. ಕಪಿಲ್ ಅವರ ಆಸಕ್ತಿಗೆ ಪೋಷಕರು ಮತ್ತು ಸಹೋದರರು ಜೀವ ತುಂಬಿದರು.

ಕೋಚ್ ಭಗವಾನ್ ದಾಸ್ ಮತ್ತು ಮನೋಜ್ ಪ್ರೋತ್ಸಾಹದಿಂದ ಅಂಧರ ಜೂಡೊ ಪಯಣ ಶುರು ಮಾಡಿದರು. ಬಿಡುವಿನ ಸಮಯದಲ್ಲಿ ಜೀವನ ನಿರ್ವಹಣೆಗಾಗಿ ಅಣ್ಣನೊಂದಿಗೆ ಸೇರಿ ಚಹಾ ಮಾರಾಟ ಮಾಡುತ್ತಿದ್ದರು.

ಹಂತಹಂತವಾಗಿ ಸಾಧನೆಯ ಮೆಟ್ಟಿಲನ್ನು ಏರಿದ ಅವರು ಪ್ಯಾರಿಸ್‌ನಲ್ಲಿ ಜಾದೂ ಮಾಡಿದರು. ಪುರುಷರ 60 ಕೆ.ಜಿ ಜೆ–1 ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ ಕಪಿಲ್ ಅವರು ಬ್ರೆಜಿಲ್‌ನ ಎಲಿಯೆಲ್ಟನ್ ಡಿ ಒಲಿವೇರಾ ಅವರನ್ನು ಕೇವಲ 33 ಸೆಕೆಂಡುಗಳಲ್ಲಿ ಹಿಮ್ಮೆಟ್ಟಿಸಿ ಗಮನ ಸೆಳೆದರು.

ಕಪಿಲ್ ಪರಮಾರ್
- **ಮಧ್ಯಪ್ರದೇಶ, 24 ವರ್ಷ**
- **ಸ್ಪರ್ಧೆ:** ಪುರುಷರ ಜೂಡೊ 60 ಕೆಜಿ ಜೆ–1
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚು, ವಿಶ್ವ ಗೇಮ್ಸ್‌ನಲ್ಲಿ ಕಂಚು, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ, ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ



ಅವನಿ ಅಂದ್ರೆ ಗೆಲುವು!

ಅಪಘಾತವೆಂಬ ಆಘಾತ ಜೀವನದ ಗುರಿ ತಪ್ಪಿಸಲು ನೋಡಿದರೆ, ಗಾಲಿ ಕುರ್ಚಿಯಲ್ಲಿಯೇ ಕುಳಿತು 'ಗುರಿ' ಮುಟ್ಟಿದವರು ಶೂಟರ್ ಅವನಿ ಲೇಖರಾ. ಜೈಪುರದ ಅವನಿ ಚಿಕ್ಕಂದಿನಿಂದಲೇ ಕಲ್ಲು–ಮುಳ್ಳುಗಳ ಹಾದಿಯಲ್ಲಿ ಸಾಗಿದವರು. 2012ರಲ್ಲಿ ಸಂಭವಿಸಿದ ಕಾರು ಅಪಘಾತ ಇವರನ್ನು ಗಂಭೀರವಾಗಿ ಗಾಯಗೊಳಿಸಿದ್ದು ಮಾತ್ರವಲ್ಲದೆ, ಪಾರ್ಶ್ವವಾಯುವಿಗೂ ಈಡು ಮಾಡಿತು. ನಂತರ, ಅವನಿ ಅನಿವಾರ್ಯವಾಗಿ ಆಶ್ರಯಿಸಿದ್ದು ಗಾಲಿ ಕುರ್ಚಿಯನ್ನು. ಆ ಕುರ್ಚಿಯ ಗಾಲಿಗೆ ಕೀಲಾದವರು ತಂದೆ ಪ್ರವೀಣ್ ಲೇಖರಾ. ಅವರು ಮಗಳಿಗಿದ್ದ ಬಿಲ್ಲುಗಾರಿಕೆಯ ಆಸಕ್ತಿಯನ್ನು ಗುರುತಿಸಿ ತರಬೇತಿ ಕೊಡಿಸಿದರು. ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಶೂಟರ್ ಅಭಿನವ್ ಬಿಂದ್ರಾ ಅವರನ್ನು ಸ್ಫೂರ್ತಿಯಾಗಿಸಿಕೊಂಡಿದ್ದ ಅವನಿ, ಆರ್ಚರಿಯಿಂದ ಶೂಟಿಂಗ್‌ನತ್ತ ಮುಖ ಮಾಡಿದರು. 2015ರಲ್ಲಿ ಕ್ರೀಡಾಲೋಕ ಪ್ರವೇಶಿಸಿದ ಅವರು ಹಿಂದಿರುಗಿ ನೋಡಲೇ ಇಲ್ಲ. ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಮಹಿಳೆ ಎಂಬ ಹಿರಿಮೆಗೆ ಪಾತ್ರರಾದರು. ಅಲ್ಲದೆ, ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಸ್ವರ್ಣ ಗೆದ್ದ ದೇಶದ ಮೊದಲ ಕ್ರೀಡಾಪಟು ಎಂದೆನಿಸಿದರು. ಅವರ ಸಾಧನೆಗೆ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ, ಪದ್ಮಶ್ರೀ ಪ್ರಶಸ್ತಿ ಲಭಿಸಿವೆ.

ಅವನಿ ಲೇಖರಾ
- **ರಾಜಸ್ಥಾನ, 22 ವರ್ಷ**
- **ಸ್ಪರ್ಧೆ:** ಮಹಿಳೆಯರ ಶೂಟಿಂಗ್ 10 ಮೀಟರ್ ಏರ್ ರೈಫಲ್ ಎಸ್ಎಚ್1
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಎರಡು ಚಿನ್ನ ಸೇರಿ ಮೂರು ಪದಕ, ಪ್ಯಾರಾ ವಿಶ್ವಕಪ್‌ನಲ್ಲೂ ಎರಡು ಸ್ವರ್ಣ ಸೇರಿ ಮೂರು ಪದಕ, ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ

ಆತ್ಮಹತ್ಯೆ ಯೋಚನೆಗೆ 'ಆರ್ಚರಿ' ಮದ್ದು!

ರಾಕೇಶ್ ಕುಮಾರ್
- **ಜಮ್ಮು ಕಾಶ್ಮೀರ, 39 ವರ್ಷ**
- **ಸ್ಪರ್ಧೆ:** ಆರ್ಚರಿ ಕಾಂಪೌಂಡ್ ಮಿಶ್ರ ತಂಡ
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚು, ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಏಷ್ಯನ್ ಗೇಮ್ಸ್‌ನಲ್ಲಿ ಒಂದು ಚಿನ್ನ, ಎರಡು ಬೆಳ್ಳಿ

ಕೆಲ ವರ್ಷಗಳ ಹಿಂದೆ ಅಪಘಾತಕ್ಕೊಳಗಾಗಿ ಕಷ್ಟನಷ್ಟಗಳನ್ನು ತಾಳಲಾರದೆ ಆತ್ಮಹತ್ಯೆಗೆ ಯತ್ನಿಸಿದ್ದ ರಾಕೇಶ್ ಕುಮಾರ್ ಈಗ ಕ್ರೀಡಾಭಿಮಾನಿಗಳ ಕಣ್ಮಣಿ. ಜಮ್ಮು ಮತ್ತು ಕಾಶ್ಮೀರದ ಕತ್ರಾ ನಿವಾಸಿಯಾಗಿರುವ ಇವರು ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರು. 2009ರಲ್ಲಿ ಭೀಕರ ಅಪಘಾತದಿಂದಾಗಿ ರಾಕೇಶ್ ತಮ್ಮ ಎರಡೂ ಕಾಲುಗಳ ಸ್ವಾಧೀನ ಕಳೆದುಕೊಂಡರು. ಅಂದಿನಿಂದ ಗಾಲಿಕುರ್ಚಿಯ ಆಧಾರದಿಂದಲೇ ಜೀವನ ಸಾಗಿಸುತ್ತಿದ್ದಾರೆ.

ಸಾಮಾನ್ಯನಂತೆ ಎಲ್ಲೆಡೆ ಓಡಾಡುತ್ತಿದ್ದ ರಾಕೇಶ್ ಅಪಘಾತದ ಬಳಿಕ ಒತ್ತಡಕ್ಕೆ ಒಳಗಾದರು. ಆರು ತಿಂಗಳು ಹಾಸಿಗೆ ಹಿಡಿದಿದ್ದ ಅವರಿಗೆ ಚೇತರಿಸಿಕೊಳ್ಳಲು ಮೂರು ವರ್ಷಗಳು ಬೇಕಾದವು. ಈ ಮಧ್ಯೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಮೂರು ಬಾರಿ ಆತ್ಮಹತ್ಯೆಗೆ ಯತ್ನಿಸಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ.

ಅವರ ಬದುಕಿಗೆ ಹೊಸ ತಿರುವು ನೀಡಿದ್ದೇ ಆರ್ಚರಿ. ಸಾಧಿಸುವ ಛಲದೊಂದಿಗೆ 2017ರಲ್ಲಿ ಬಿಲ್ಗಾರಿಕೆಯತ್ತ ಆಸಕ್ತಿ ಬೆಳೆಸಿಕೊಂಡರು. ಶ್ರೀಮಾತಾ ವೈಷ್ಣೋ ದೇವಿ ಶ್ರೈನ್ ಬೋರ್ಡ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಆರ್ಚರಿಯ ವಿದ್ಯೆ ಕಲಿಯಲು ಆರಂಭಿಸಿದರು. ಆರ್ಥಿಕ ಅಡಚಣೆ ಎದುರಾದಾಗ ಸ್ಥಳೀಯರು ಶಕ್ತಿ ತುಂಬಿದರು. ಅದರ ಪ್ರತಿಫಲವಾಗಿ ಭಾರತದ ಅಗ್ರ ಪ್ಯಾರಾ ಆರ್ಚರಿಪಟುಗಳಲ್ಲಿ ಇವರು ಒಬ್ಬರಾಗಿದ್ದಾರೆ. 2023ರ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ರಾಕೇಶ್ ಡಬಲ್ ಚಿನ್ನ ಗೆದ್ದಿದ್ದರು. ಏಷ್ಯನ್ ಕೂಟದಲ್ಲಿ ಮೂರು ಪದಕ ಜಯಿಸಿದ್ದ ಅವರು, ಪ್ಯಾರಿಸ್‌ನಲ್ಲಿ ಶೀತಲ್ ದೇವಿ ಅವರೊಂದಿಗೆ ಕಂಚಿಗೆ ಗುರಿಯಿಟ್ಟರು.

ಸುಮಿತ್ ಅಂಟಿಲ್
- ಹರಿಯಾಣ, 26 ವರ್ಷ
- ಸ್ಪರ್ಧೆ: ಪುರುಷರ ಜಾವೆಲಿನ್ ಥ್ರೋ ಎಫ್ 64
- ಸಾಧನೆ: ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಎರಡು ಚಿನ್ನ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಸೇರಿ ಮೂರು ಪದಕ, ಏಷ್ಯನ್ ಗೇಮ್ಸ್‌ನಲ್ಲಿ ವಿಶ್ವ ದಾಖಲೆಯೊಂದಿಗೆ ಸ್ವರ್ಣ

ಅಪಘಾತ ಧೃತಿಗೆಡಿಸಲಿಲ್ಲ!

ಏಳು ವರ್ಷ ಪ್ರಾಯದಲ್ಲೇ ತಂದೆಯನ್ನು ಕಳೆದುಕೊಂಡ ಸುಮಿತ್ ಅಂಟಿಲ್ ಬಾಲ್ಯದಿಂದಲೇ ಸವಾಲನ್ನು ಮೆಟ್ಟಿ ಬೆಳೆದವರು. ವಾಯುಪಡೆ ಅಧಿಕಾರಿಯಾಗಿದ್ದ ತಂದೆ ರಾಮ್‌ಕುಮಾರ್ ಅಂಟಿಲ್ ಅವರ ಹಾದಿಯಲ್ಲಿ ಸೇನೆ ಸೇರಲು ಹಂಬಲಿಸಿದ್ದ ಸುಮಿತ್ ಅವರ ಬದುಕನ್ನು ಸಂಕಷ್ಟಕ್ಕೆ ದೂಡಿದ್ದು 2015ರಲ್ಲಿ ನಡೆದ ಅಪಘಾತ.

ಟ್ಯೂಷನ್‌ನಿಂದ ವಾಪಸಾಗುತ್ತಿದ್ದಾಗ ವೇಗವಾಗಿ ಬಂದ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಾಗ ಎಡಗಾಲಿನ ಮಂಡಿಯ ಕೆಳಗಿನ ಭಾಗ ತುಂಡಾಗಿ ಹೋಯಿತು. ಹಾಗೆಯೇ ಅವರ ಕನಸುಗಳೂ ಕೂಡ. ಆದರೆ, ಅಮ್ಮನ ಆರೈಕೆ– ದೃಢವಾದ ಆತ್ಮವಿಶ್ವಾಸ ಸುಮಿತ್ ಅವರಿಗೆ ಪುನರ್ಜನ್ಮ ನೀಡಿತು. ಕೃತಕ ಕಾಲು ಕಟ್ಟಿಕೊಂಡು ನಡೆಯತೊಡಗಿದರು. ನಡೆಯುತ್ತಾ, ನಡೆಯುತ್ತಾ ಓಡಿದರು. ಹೀಗೆ, ಹೊಸ ಕನಸಿನೊಂದಿಗೆ ಓಡಲು ತೊಡಗಿದ್ದ ಸುಮಿತ್ ಕೈಗೆ ಬಂದಿದ್ದು ಜಾವೆಲಿನ್.

ಸುಮಿತ್ ಅವರ ಛಲ ಮತ್ತು ಕೌಶಲವನ್ನು ಗುರುತಿಸಿದ್ದು ಮತ್ತೊಬ್ಬ ಪ್ಯಾರಾ ಅಥ್ಲೀಟ್ ರಾಜಕುಮಾರ್. ಅಪಘಾತವಾದ ಎರಡೇ ವರ್ಷಕ್ಕೆ, ಅಂದರೆ 2017ರಲ್ಲಿ ಸುಮಿತ್ ಭರ್ಜಿಯನ್ನು ಎಸೆದು ಸೈ ಎನಿಸಿಕೊಂಡರು. ಮೂರು ವರ್ಷಗಳ ಹಿಂದೆ ಟೋಕಿಯೊದಲ್ಲಿ ಚಿನ್ನ ಗೆದ್ದಿದ್ದ ಸುಮಿತ್, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಅದನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. 70.59 ಮೀಟರ್ ಪ್ಯಾರಾಲಿಂಪಿಕ್ಸ್ ದಾಖಲೆಯೊಂದಿಗೆ ಸತತ ಚಿನ್ನ ಗೆದ್ದ ಭಾರತದ ಮೊದಲ ಪ್ಯಾರಾ ಅಥ್ಲೀಟ್. ಕಳೆದ ವರ್ಷ ಪ್ಯಾರಾ ಏಷ್ಯನ್ ಕೂಟದಲ್ಲೂ 73.29 ಮೀಟರ್ ಜಾವೆಲಿನ್ ಎಸೆದು ವಿಶ್ವ ದಾಖಲೆ ನಿರ್ಮಿಸಿದ್ದ, ಈ ಛಲದ ಕುವರನಿಗೆ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ, ಪದ್ಮಶ್ರೀ ಪ್ರಶಸ್ತಿ ಸಂದಿವೆ.

ಪ್ರೀತಿ ಪಾಲ್
- **ಉತ್ತರ ಪ್ರದೇಶ, 23 ವರ್ಷ**
- **ಸ್ಪರ್ಧೆ:** ಮಹಿಳೆಯರ 100, 200 ಮೀಟರ್ ಟಿ35
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಕಂಚು, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಕಂಚು

ನರಗಳ ದೌರ್ಬಲ್ಯ ಮೆಟ್ಟಿನಿಂತ ಪ್ರೀತಿ

ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್‌ನಲ್ಲಿ 100 ಮೀಟರ್ ಮತ್ತು 200 ಮೀಟರ್ ಓಟದಲ್ಲಿ ಪದಕ ಜಯಿಸುವುದು ಭಾರತಕ್ಕೆ ಈತನಕ ಕನಸಿನ ಮಾತಾಗಿತ್ತು. ಆದರೆ, ಉತ್ತರ ಪ್ರದೇಶದ ಮೀರತ್‌ನ ರೈತ ಕುಟುಂಬದ ಪ್ರೀತಿ ಪಾಲ್ ಈ ಎರಡೂ ಸ್ಪರ್ಧೆಗಳಲ್ಲಿ ಕಂಚಿಗೆ ಕೊರಳೊಡ್ಡಿ ಇತಿಹಾಸ ಬರೆದಿದ್ದಾರೆ.

ಪ್ಯಾರಿಸ್‌ನಲ್ಲಿ ಅಮೋಘ ಸಾಧನೆ ಮೆರೆದಿರುವ ಪ್ರೀತಿಯ ಬದುಕಿನ ಬಂಡಿ ಸರಳವಾಗಿರಲಿಲ್ಲ. ಅವರ ತಂದೆ ಅನಿಲ್ ಕುಮಾರ್ ಪಾಲ್ ಹಾಲಿನ ಡೇರಿ ನಡೆಸುತ್ತಿದ್ದಾರೆ. ನಾಲ್ಕು ಮಕ್ಕಳಲ್ಲಿ ಪ್ರೀತಿ ಎರಡನೆಯವರು. ಹೈಪರ್ಟೋನಿಯಾ, ಅಟಾಕ್ಸಿಯಾ ಮತ್ತು ಅಥೆಟೋಸಿಸ್ ಕಾಯಿಲೆಗಳಿಂದಾಗಿ ಬಾಲ್ಯದಲ್ಲೇ ಪ್ರೀತಿ ಅವರ ಕಾಲುಗಳಲ್ಲಿ ನರಗಳು ದುರ್ಬಲವಾಗಿವೆ. ಆರಂಭದಲ್ಲಿ ಮೀರತ್‌ನಲ್ಲಿ ಚಿಕಿತ್ಸೆ ಕೊಡಿಸಿ, ನಂತರ ದೆಹಲಿಯ ಆಸ್ಪತ್ರೆಗೆ ಕರೆದೊಯ್ದರೂ ಅವರು ಗುಣಮುಖವಾಗಲಿಲ್ಲ. ಸೊಟ್ಟ ಭಂಗಿಯಿಂದಾಗಿ ಬದುಕಿನ ಬಗ್ಗೆ 'ಪ್ರೀತಿ'ಯನ್ನೇ ಕಳೆದುಕೊಂಡಿದ್ದರು.

ಆರು ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಪ್ಯಾರಾ ಅಥ್ಲೀಟ್‌ಗಳ ಓಟ ಅವರ ಕಣ್ಣಿಗೆ ಬಿತ್ತು. ತಾನೂ ಯಾಕೆ ಟ್ರ್ಯಾಕ್‌ಗೆ ಇಳಿಯಬಾರದು ಎಂಬ ಪ್ರಶ್ನೆ ಅವರಲ್ಲೇ ಮೂಡಿತು. ಆ ಬಗ್ಗೆ ಮಾಹಿತಿ ಪಡೆದು, ಕೋಚ್ ಗಜೇಂದ್ರ ಸಿಂಗ್ ಅವರಿಂದ ತರಬೇತಿ ಪಡೆದರು. 2018ರಲ್ಲಿ ಮೊದಲ ಬಾರಿ ರಾಜ್ಯ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಮಿಂಚು ಹರಿಸಿದ ಅವರು ನಂತರ ಹಿಂತಿರುಗಿ ನೋಡಿಲ್ಲ. ಪ್ಯಾರಾಲಿಂಪಿಕ್‌ನ ಒಂದೇ ಕೂಟದ ಟ್ರ್ಯಾಕ್ ವಿಭಾಗದಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಅವರಾಗಿದ್ದಾರೆ.

ವಿರಳ ಕಾಯಿಲೆಗೆ ಅಂಜದ ಗಂಡು

ಹರಿಯಾಣ ಬಹದ್ದೂರ್‌ಗಢದ ಯೋಗೇಶ್ ಕಥುನಿಯಾ ವೈದ್ಯರಾಗಬೇಕೆಂದು ಕನಸು ಕಂಡವರು. ಯೋಧ ಜ್ಞಾನಚಂದ್ ಕಥುನಿಯಾ ಮತ್ತು ಗೃಹಿಣಿ ಮೀನಾದೇವಿ ದಂಪತಿ ಮಗನ ಭವಿಷ್ಯದ ಬಗ್ಗೆ ಸುಂದರ ಕನಸು ಕಂಡಿದ್ದರು. ಆದರೆ ಒಂಬತ್ತನೇ ವಯಸ್ಸಿನಲ್ಲಿ ಪಾರ್ಕ್‌ನಲ್ಲಿ ಬಿದ್ದ ಬಳಿಕ ಅವರಿಗೆ ಎದ್ದು ನಿಲ್ಲಲಾಗದ ಸ್ಥಿತಿ ಎದುರಾಯಿತು. ವೈದ್ಯರು ಪರೀಕ್ಷಿಸಿದಾಗ ಗ್ಯುಲಿಯನ್ ಬೇರ್ ಸಿಂಡ್ರೋಮ್ (ಜಿಬಿಎಸ್) ಎಂಬ ಅಪರೂಪದ ಕಾಯಿಲೆ ಇರುವುದು ಪತ್ತೆಯಾಯಿತು. ಇದರಿಂದ ಭಾಗಶಃ ಪಾರ್ಶ್ವವಾಯುವಿಗೆ ತುತ್ತಾದ ಅವರು ಗಾಲಿಕುರ್ಚಿಯನ್ನು ಅವಲಂಬಿಸುವಂತಾಯಿತು.

ಮೀನಾದೇವಿ ಅವರೇ ಫಿಸಿಯೋಥೆರಪಿ ತಂತ್ರಗಳನ್ನು ಕಲಿತು ಆರೈಕೆ ಮಾಡಿದರು. ಮೂರೇ ವರ್ಷದಲ್ಲಿ ಚೇತರಿಸಿಕೊಂಡ ಯೋಗೇಶ್ ಊರುಗೋಲಿನ ಸಹಾಯದಿಂದ ನಡೆಯಲು ಆರಂಭಿಸಿದರು. ಇದು ಅವರಲ್ಲಿ ಆತ್ಮಸ್ಥೈರ್ಯ ವೃದ್ಧಿಸುವ ಜೊತೆಗೆ ಸಾಧನೆಯ ಹಸಿವನ್ನು ಹೆಚ್ಚಿಸಿತು. ಚಂಡೀಗಢದ ಆರ್ಮಿ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸಿದ ಅವರು ಪ್ಯಾರಾ ಕ್ರೀಡೆಯತ್ತ ಗಮನ ಕೇಂದ್ರೀಕರಿಸಿದರು. 2016ರಲ್ಲಿ ಯೋಗೇಶ್ ಕ್ರೀಡಾ ಪಯಣ ಆರಂಭ. ಬರ್ಲಿನ್‌ನಲ್ಲಿ 2018ರಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 45.18 ಮೀಟರ್ ಡಿಸ್ಕಸ್ ಎಸೆತದೊಂದಿಗೆ ವಿಶ್ವ ದಾಖಲೆ ಬರೆದರು. ಕ್ರೀಡಾ ಸಾಧನೆಗೆ ಅರ್ಜುನ ಪ್ರಶಸ್ತಿ ದೊರಕಿದೆ.

ಯೋಗೇಶ್ ಕಥುನಿಯಾ
- **ಹರಿಯಾಣ, 27 ವರ್ಷ**
- **ಸ್ಪರ್ಧೆ:** ಪುರುಷರ ಡಿಸ್ಕಸ್ ಥ್ರೋ ಎಫ್56
- **ಸಾಧನೆ:** ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಬೆಳ್ಳಿ ಪದಕ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬೆಳ್ಳಿ ಸೇರಿ ಮೂರು ಪದಕ, ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ

ದುರಾಸೆಯ ಕಡಲಲಿ ನಗೆಯ ಹಾಯಿದೋಣಿ

ರಶ್ಮಿ ಎಸ್

ಊಟೂಟೂಟ... ಊಟೂಟೂಟ... ಅನ್ನೊಂತ ಎಡಗೈ ಎಡಹುಬ್ಬಿನ ಮೇಲಿನವರೆಗೂ ಎತ್ತುವ, ಸುಮ್ಮನಿದ್ದರೆ ಸದಾ ಗೋಲಿಯಾಟದ ಆಂಗಿಕ ಚಿಹ್ನೆಯಲ್ಲಿ ನಿರತನಾಗುವ, ಹಾಡು ಕೇಳಿದೊಡನೆ ಕುಣಿಯುವ, ಹೆಗಲು ಮುಟ್ಟಿದೊಡನೆ, 'ನಿಮ್ಮಂಥ ದೇವರಂಥ ಮನುಷಾನ ನೋಡಿಲ್ರಿ' ಎನ್ನುವ, ತೊಡೆ ಮುಟ್ಟಿದರೆ 'ನಿಮ್ಮಪ್ಪಂದು ತಿಂದೀನೇನಲೆ' ಎಂದು ಜರೆಯುವ ಹರಿ ಪಾತ್ರ ವೇದಿಕೆಗೆ ಬಂದರೆ ನಗೆಯುಕ್ಕಿ ಬರುತ್ತಿತ್ತು.

ಗಲಗಲಿ ಒಳಗಬಂದ್ರು, ಶಾಭಾಷ್ ಗಲಗಲಿ, ಬರೋಬ್ಬರಿ ವಿಳಾಸಕ್ಕ ಬಂದೀರಿ, ಒಂದು ಎರಡು ಮೂರು, ಗಲಗಲಿಯವರಿಗೆ ಹೆಣ್ಮಕ್ಕಳು ಕಂಡ್ರು. ಗಲಗಲಿಯವರು ಹೆಣ್ಮಕ್ಕಳ ಮಾತು ಕೇಳ್ತಾರ, ಹೆಣ್ಮಕ್ಕಳು ಗಲಗಲಿಯವರಿಗೆ ಹಚ್ಕೊಂಡಾರ, ಹೆಗಲಿಗೆ ಒರಗ್ಯಾರ ಅಂದ್ರ ಗಲಗಲಿ ಮ್ಯಾಲೆ ಪ್ರೀತಿ ಇದ್ದಂಗ ಐತಿ, ಇದೇ ಬರೋಬ್ಬರಿ ಟೈಮು, ಕೇಳೇಬಿಡ್ತೀನಿ.. ಒಂದು ಪಾಲಸಿ ಮಾಡ್ತೀರೇನು? ಇನ್‌ಸೈಡ್ ಔಟ್‌ನಂತೆ, ಲೌಡ್ ಥಿಂಕಿಂಗ್‌ನಂತೆ ಮನದ ಮಾತುಗಳೆಲ್ಲ ತುಟಿನಡುವೆ ಗೊಣಗುತ್ತಲೇ ಗಲಗಲ ಮಾತನಾಡುವ ಗಲಗಲಿಯ ಪಾತ್ರ ಎರಡನೆಯದ್ದು.

ಕನಸು ಮನಸುಗಳಲ್ಲೆಲ್ಲ ಲಾರಿ ಒಡೆಯನಾಗುವ ರಂಗ. ಬಾಯ್ಬಿಟ್ಟರೆ ಪ್ರಶ್ನೆಗಳ ಸರಮಾಲೆ. ಎಲ್ಲಿ, ಯಾರು, ಯಾಕ, ಹೆಂಗ.. ಏನು... ಬಾಯ್ಬಿಟ್ಟರೆ ಲಾರಿಯ ಕುರಿತೇ ಮಾತು. ಅದೇ ಭಾಷೆಯಲ್ಲಿಯೇ ಸಂಭಾಷಣೆ. ಇದು ಮೂರನೆಯ ಪಾತ್ರ.

ಮದನ್ ಸುಖಾತ್ಮೆ ಅಪಾರ ಆಸ್ತಿಯ ಒಡೆಯ. ಎರಡನೆಯ ಯುವ ಹೆಂಡ್ತಿ ವಂಚಿಸುವಳೆಂಬ ಗುಮಾನಿ ಸತ್ಯವಾದಾಗ ಹೆಂಡ್ತಿಯ ಅನಿರೀಕ್ಷಿತ ದಾಳಿಯಿಂದಾಗಿ ಸಾವನ್ನಪ್ಪಿದವ. ನಾಲ್ಕನೆಯ ಪಾತ್ರ.

'ಸಹಿ ರೀ ಸಹಿ' ನಾಟಕದ ಜೀವ ಮತ್ತು ಆತ್ಮಗಳು ಈ ಪಾತ್ರಗಳು. ಇವೆಲ್ಲ ಪಾತ್ರಗಳನ್ನೇ ಯಶ್ವಂತ್ ಸರದೇಶಪಾಂಡೆ ಸಲೀಸಾಗಿ ನಟಿಸಿದರು, ನೀರಿನ ಹರಿವಿನಂತೆ. ಹರಿಯುವ ನೀರನ್ನು ಯಾವ ಪಾತ್ರೆಗೆ ತುಂಬಿಸಿದರೂ ಆ ಪಾತ್ರೆಯ ಪಾತ್ರವನ್ನೇ ತಾಳುವಂತೆ! ಪ್ರತಿ ಪಾತ್ರಕ್ಕೂ ಅದರದ್ದೇ ಆದ ಮ್ಯಾನರಿಸಂ ಇದೆ, ರಿದಂ ಇದೆ. ಒಂದರೆ ಚಣವೂ ಗಮನ ಅತ್ತಿತ್ತ ಆಗದಂತೆ ಧ್ಯಾನಿಗನಂತೆ ಪ್ರಸ್ತುತಪಡಿಸುತ್ತ ಹೋಗುತ್ತಾರೆ. ನಾಲ್ಕೂಪಾತ್ರಗಳೂ ಒಟ್ಟಿಗೆ ವೇದಿಕೆಯ ಮೇಲೆ ತರುವುದು ಹೇಗೆ? ಅದಕ್ಕೂ ಯಶ್ವಂತ್ ಅವರ ವಿಶೇಷ ರಂಗ ತಂತ್ರವಿದೆ. ಅದನ್ನು ನೋಡಿಯೇ ಆನಂದಿಸಬೇಕು.

ಮರಾಠಿ ಮೂಲದ 'ಸಹಿ ರೀ ಸಹಿ' ನಾಟಕವನ್ನು ಯಶ್ವಂತ್ ಸರದೇಶಪಾಂಡೆಯವರ ಸಿಗ್ನೆಚರ್ ಧಾಟಿ ಧಾರವಾಡಿಗರ ಕನ್ನಡದಲ್ಲಿ ಅನುವಾದಿಸಿ, ರಂಗರೂಪಕ್ಕೆ ತರಲಾಗಿದೆ. ಕೇದಾರ್ ಶಿಂದೆ ಅವರ ರಚಿತ ಮತ್ತು ನಿರ್ದೇಶಿತ ಈ ನಾಟಕ ಮರಾಠಿ ನೆಲದಲ್ಲಿ 4444 ಪ್ರಯೋಗಗಳನ್ನು ಕಂಡಿವೆ. ಕಾಣುತ್ತಲೇ ಇದೆ. ಅಲ್ಲಿ ಖ್ಯಾತ ರಂಗಭೂಮಿ ಕಲಾವಿದ ಭಾರತ್ ಜಾಧವ್ ಮದನ್ ಸುಖಾತ್ಮೆಯ ಪಾತ್ರ ನಿರ್ವಹಿಸುತ್ತಾರೆ.

ಸಿರಿವಂತ ಉದ್ಯಮಿಯೊಬ್ಬ ಸಂದೇಹಾಸ್ಪದ ರೀತಿಯಲ್ಲಿ ಕಾಣೆಯಾಗುತ್ತಾನೆ. ಮೂರು ತಿಂಗಳ ನಂತರ ವಕೀಲರು ಅವರ ಮೂರು ಉಯಿಲುಗಳೊಂದಿಗೆ ಬರುತ್ತಾರೆ. ಒಂದರಲ್ಲಿ ಎರಡನೆಯ ಹೆಂಡತಿ ವಾರಸುದಾರಳೆಂದು, ಇನ್ನೊಂದರಲ್ಲಿ ಮೊದಲ ಹೆಂಡತಿ ಮತ್ತು ಪುತ್ರಿಯನ್ನೂ, ಮತ್ತೊಂದರಲ್ಲಿ ದೂರದ ಸಂಬಂಧಿ ಪಾಟೀಲ ಅವರನ್ನೂ ವಾರಸುದಾರರಾಗಿ ಬರೆದಿರುತ್ತಾರೆ. ಆದರೆ ಯಾವುದಕ್ಕೂ ಅವರ ಸಹಿ ಇರುವುದಿಲ್ಲ. ಯಾವುದು ಅಂತಿಮವಾಗಿ ಬರೆದಿದ್ದು ಎಂಬ ಸ್ಪಷ್ಟತೆಯೂ ಇರುವುದಿಲ್ಲ. ಮದನ್ ಆತ್ಮಸುಖೆಯನ್ನೇ ಹೋಲುವ ಹರಿ, ಗಲಗಲಿ ಮತ್ತು ರಂಗ ಅವರನ್ನು ಈ ಮೂರು ಪಕ್ಷದವರು ತಮ್ಮ ಪಾಲಿನ ಮದನ್ ಆಗಿ ಕಾಣಿಸಿಕೊಳ್ಳಲು ಒಲಿಸುತ್ತಾರೆ. ಕೊನೆಯ ಅಂಕದಲ್ಲಿ ಈ ಮೂರು

ಸಹಿ ರೀ ಸಹಿ ನಾಟಕದ ದೃಶ್ಯ

ಪಾತ್ರಗಳೊಂದಿಗೆ ನಿಜದ ಮದನ್ ಆತ್ಮಸುಖೆಯೂ ಪ್ರತ್ಯಕ್ಷವಾದಾಗ ಆಗುವ ಅವಾಂತರಗಳೇ ಈ ನಾಟಕದ ಕತೆಯಾಗಿದೆ.

ಕೇವಲ ಮನರಂಜನೆಯಷ್ಟೇ ಈ ನಾಟಕದ ಉದ್ದೇಶವಾಗಿರುವಂತೆ ಕಂಡರೂ ದುರಾಸೆ ಮಾನವನನ್ನು ಯಾವ ದಿಕ್ಕಿಗಾದರೂ ಕೊಂಡೊಯ್ಯಬಹುದು ಎಂಬಂತೆ ನಿರೂಪಿತವಾಗುತ್ತ ಹೋಗುತ್ತದೆ.

ಪಾತ್ರಗಳೆಲ್ಲವೂ ನಿಜದ ವ್ಯಕ್ತಿತ್ವವೇ ಹಂಗೆ ಎನ್ನುವಂತೆ ಮೈಗಿಳಿಸಿಕೊಂಡಿದ್ದಾರೆ ಕಲಾವಿದರು. ಅವರ ಆಂಗಿಕ ಅಭಿನಯ, ಅಭಿವ್ಯಕ್ತಿ, ಉಚ್ಚಾರ ಎಲ್ಲವೂ.. ನಟನೆಯೇ ಅಲ್ಲ ಅನಿಸುವಷ್ಟು ಸಹಜ. ಸಹಜವಾಗಿರುವ ನಟನೆಯೇ ಇದು ಎನ್ನುವಷ್ಟು ತಾದಾತ್ಮ್ಯ. ಇದಕ್ಕೆ ಮೊದಲ ಹೆಂಡತಿಯ ಪಾತ್ರ ನಿರ್ವಹಿಸಿದ ಪ್ರಿಯಾ ಕುಲಕರ್ಣಿ, ವಕೀಲ ಬಾಚಯ್ಯನ ಪಾತ್ರ ನಿರ್ವಹಿಸಿದ ಕೃಷ್ಣಮೂರ್ತಿ ಗಾಂವ್ಕರ್, ಮದನ್ ಪಾತ್ರದ ಅಣ್ಣನಾಗಿರುವ ಅರವಿಂದ ಪಾಟೀಲ, ಕುಡುಕನ ಪಾತ್ರದಲ್ಲಿ ರವಿ ಕುಲಕರ್ಣಿ, ಮಗಳ ಪಾತ್ರದಲ್ಲಿ ಅರ್ಪಿತಾ, ಎರಡನೆಯ ಹೆಂಡ್ತಿ ಪಾತ್ರದಲ್ಲಿ ಶಿಲ್ಪಾ ಪಾಂಡೆ ಜೀವ ತುಂಬಿದರು. ನಾಟಕದಲ್ಲಿ ಸಣ್ಣ ಸಣ್ಣ ಪಾತ್ರಗಳ ನಾಜೂಕುತನ ಮತ್ತು ಬಾರೀಕಿಗೆ ಕೊಂಕು ಬಾರದಂತೆ ಸಹಾಯಕ ಪಾತ್ರದಲ್ಲಿ ಸುಮಂತ್ ಕುಲಕರ್ಣಿ, ಶೇಖರ್ ಪಾಟೀಲ ಮಿಂಚಿದರು. ಇವರೆಲ್ಲರ ಮುಂದೆ ತೀರ ತುಸುವೆನಿಸುವಷ್ಟು, ಪಿಎ ಪಾತ್ರವಹಿಸಿದ ಪ್ರದೀಪ ಮುಧೋಳ ಪೇಲವವೆನಿಸಿದರು.

ಉಳಿದಂತೆ ಇಡೀ ನಾಟಕ ನಕ್ಕು ನಗಿಸುತ್ತಲೇ, ಮನರಂಜನೆಯ ಹೆಸರಿನಲ್ಲಿಯೇ ದುಡ್ಡು, ಆಸ್ತಿ ಸಿಗುವುದು ಎಂದಾದಾಗ ಮನುಷ್ಯ ತೋರುವ ಸಣ್ಣತನಗಳತ್ತ ಗಮನಸೆಳೆಯುತ್ತದೆ. ಎಲ್ಲಿಯೂ ಅಪಹಾಸ್ಯವಿಲ್ಲದೇ, ಸಮಾಜದ ಸಣ್ಣತನಗಳನ್ನು ವಿಡಂಬನಾತ್ಮಕವಾಗಿ ನೋಡುವ ಈ ನಾಟಕ ಮತ್ತೆ ಮತ್ತೆ ನೋಡಿಸಿಕೊಳ್ಳುತ್ತದೆ. ಪ್ರತಿಸಲವೂ ಅಷ್ಟೇ ನಕ್ಕು ಬರುವವರು ಇರುವುದರಿಂದಲೇ ಕನ್ನಡದಲ್ಲಿಯೂ 500ಕ್ಕೂ ಹೆಚ್ಚಿನ ಪ್ರದರ್ಶನ ಕಂಡಿದೆ.

ಮೊದಲ ದೃಶ್ಯದಲ್ಲಿ ಕಿರಿಯ ಹೆಂಡತಿ ಮೋಸ ಮಾಡುವುದನ್ನು ಕಂಡಾಗ ಮದನ್ ಆತ್ಮಸುಖೆ ಮುಡಿ ಹಿಡಿದು ಬೈಯ್ಯುವಾಗ ಮಾತ್ರ ತುಸು ಇರುಸುಮುರುಸಾಗುವುದು ನಿಜ. ಅದೊಂದೇ ನಾಟಕಕ್ಕೆ ದೃಷ್ಟಿಬೊಟ್ಟು. ❖

ಶೇಡಿ ಲಚ್ಚಣ್ಣ ಬೆಳೆಸಿದ ಸಾಲುಮರ

ಜಯಪ್ರಕಾಶ ತಲವಾಟ

1982ರಲ್ಲಿ ಆಗಷ್ಟೇ ಉತ್ತರ ಕನ್ನಡದಲ್ಲಿ 'ಪಶ್ಚಿಮ ಘಟ್ಟ ಉಳಿಸಿ' ಎಂಬ ಕೂಗು ಪ್ರಾರಂಭವಾಗಿತ್ತು. 'ವೃಕ್ಷಲಕ್ಷ್ಯ ಆಂದೋಲನ'ದ ಬಿಸಿ ಹುಟ್ಟಿಸಿದ ದಿನಗಳವು. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿಗೂ ಬಿಸಿ ತಟ್ಟಿತ್ತು. ಬಸ್ ತಂಗುದಾಣದ ಸಮೀಪವಿರುವ ಬಯಲನ್ನು ಯಾರಾದರೂ ಅತಿಕ್ರಮಿಸಿ ಮನೆಕಟ್ಟಿಸಿ ಬಿಡಬಹುದು ಎಂಬ ಆತಂಕ ಹೊಸಹಳ್ಳಿ ಗ್ರಾಮಸ್ಥರಲ್ಲಿತ್ತು. ಎಲ್ಲರೂ ಸೇರಿ ಬಯಲಿನ ಸುತ್ತ ಗಿಡಗಳನ್ನು ನೆಡಲು ತೀರ್ಮಾನಿಸಿ 60 ಸಸಿಗಳನ್ನು ನೆಟ್ಟರು. ನೆಡುವುದೇನೋ ಸುಲಭದ ಕೆಲಸ, ಬೆಳೆಸುವುದು? ದಿನ ಕಳೆದಂತೆ ಹತ್ತಾರು ತಾಪತ್ರಯಗಳಿಂದ ಊರಿನವರಲ್ಲಿ ಸಾಲುಮರಗಳ ಉತ್ಸಾಹ ಕುಗ್ಗಿತು. ಆದರೆ, ಶೇಡಿ ಲಕ್ಷ್ಮೀನಾರಾಯಣ (ಶೇಡಿ ಲಚ್ಚಣ್ಣ) ಮಾತ್ರ ವಿಶ್ವಾಸ ಕಳೆದುಕೊಳ್ಳದೇ ಸಸಿಗಳನ್ನು ಪೋಷಿಸುವ, ಸಂರಕ್ಷಿಸುವ, ಸಂವರ್ಧಿಸುವ ಕೆಲಸವನ್ನು ತಪಸ್ಸಿನಂತೆ ಮಾಡಿದರು.

ಶೇಡಿ ಲಚ್ಚಣ್ಣ ಅವರದು ಒಂದೇ ತತ್ವ. ಒಂದು ಸಸಿ ನೆಟ್ಟ ಗುಂಡಿಯಲ್ಲಿ ಮತ್ತೊಮ್ಮೆ ಸಸಿಯನ್ನು ನೆಡುವಂತಹ ಸಂದರ್ಭ ಬರಲೇಬಾರದು. ಅದು ಮರವಾಗಿಯೇ ಬೆಳೆಯಬೇಕು. ಆಗ ನೆಟ್ಟ ಸಸಿಗಳಿಗೆ ಜಾನುವಾರುಗಳ ಕಾಟವಿತ್ತು. ಊರಿಗೆ ನಾಲ್ಕೈದು ಕಿಲೊಮೀಟರ್ ದೂರದಲ್ಲಿದ್ದ ಮುಳುಗಡೆ ಭಾಗಕ್ಕೆ ಹೋಗಿ ಬಿದಿರನ್ನು ತಂದು ಸಸಿಗಳ ಸುತ್ತ ಬೇಲಿಕಟ್ಟಿ ಮರವಾಗುವ ತನಕ ಸಂರಕ್ಷಿಸಿದರು. ಹೊಸ ಸಸಿಗಳನ್ನು ನೆಡುತ್ತಾ ಸಾಗಿದರು. ಮರ ಬೆಳೆಸಲು



ಶೇಡಿ ಲಚ್ಚಣ್ಣ

ಗುಂಡಿ ತೋಡಿ ಸಸಿ ನೆಡುವುದೊಂದೇ ದಾರಿಯಲ್ಲ ಎಂಬುದನ್ನು ತಿಳಿದ ಲಚ್ಚಣ್ಣ, ಮರದ ಟೊಂಗೆ, ಟಿಸಿಲು ಕತ್ತರಿಸಿದರೂ ಚಿಗುರಿ ಬೆಳೆಯುತ್ತದೆ. 3-4 ಅಡಿ ಉದ್ದದ ಗೂಟವನ್ನು ಮಣ್ಣಿಗೆ ಮಳೆಗಾಲಕ್ಕಿಂತ 15- 20 ದಿನ ಮುಂಚೆ ನೆಟ್ಟರೆ, ಮಳೆಗೆ ಬೇರು ಕೊಟ್ಟು ಚಿಗುರುತ್ತದೆ ಎಂದು ಅರಿತರು. ಪ್ರತಿದಿನ ರಸ್ತೆಯಲ್ಲಿ ಬಿದ್ದ ಸಗಣಿ, ತರಗೆಲೆಯನ್ನು ಸಸಿಗಳಿಗೆ ಉಣಿಸಿದರು. 60 ರಿಂದ ಪ್ರಾರಂಭವಾದ ಸಸಿಗಳ ಸಂಖ್ಯೆ ಈಗ ಸಾವಿರದ ಕಡೆಗೆ ಸಾಗಿದೆ. ಲಚ್ಚಣ್ಣರಿಗೆ ಊರಿನವರ ಪೂರ್ಣ ಬೆಂಬಲವಿದೆ. ಊರಿನ ಜನರು ಬೆಟ್ಟದಲ್ಲಿ ಸೊಪ್ಪು, ಕಟ್ಟಿಗೆ ಕಡಿಯುವುದಿಲ್ಲ. ವರ್ಷಕ್ಕೊಮ್ಮೆ ದರಕು ಗುಡಿಸುತ್ತಾರೆ.

ಉರುವಲಿಗೆ ಅಕೇಶಿಯ ತೋಪು ಇದೆ.

ಪಕ್ಕದೂರಿನ ಹಿಂಡೂಮನೆ ತಿಮ್ಮಪ್ಪನವರು ಕೂಡ ಪರಿಸರ ಪ್ರೇಮಿ, ಪ್ರಯೋಗಶೀಲ ಕೃಷಿಕ, ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತರು. ಇವರು ಖಾಲಿ ಜಾಗ ಕಂಡಲ್ಲಿ ಸಸಿಗಳನ್ನು ನೆಟ್ಟಿದ್ದು, ಶೇಡಿ ಲಚ್ಚಣ್ಣರಿಗೆ ಸಾಥ್ ನೀಡುತ್ತಲೇ ಬಂದಿದ್ದಾರೆ. 'ಅಂದು ಸಸಿಗಳನ್ನು ಜಾನುವಾರುಗಳಿಂದ ರಕ್ಷಿಸಿದ್ದೆವು. ಈಗ ಮಾವಿನಸೊಪ್ಪಿಗಾಗಿ ಮತ್ತು ಮಾವಿನಮಿಡಿಗಾಗಿ ಕೊಂಬೆಯನ್ನೇ ಕಡಿದು ಹಾಕುವ ಜನರಿಂದ ರಕ್ಷಿಸಬೇಕಾಗಿದೆ. ಇದಕ್ಕಾಗಿ ರಾತ್ರಿ ಹಗಲು ಕಾದಿದ್ದೂ ಇದೆ' ಎಂದು ದನಿಗೂಡಿಸುತ್ತಾರೆ ಹಿಂಡೂಮನೆ ತಿಮ್ಮಪ್ಪ.

ಧನ್ವಂತರಿ ವನ

ಊರಿನವರೇ ಬೆಳೆಸಿರುವ ಭೂತೇಶ್ವರ ಧನ್ವಂತರಿ ವನವಿದೆ. ಸುಮಾರು 200 ಔಷಧಿ ಸಸ್ಯಗಳಿವೆ. ಸಾಲುಮರಗಳಲ್ಲಿ ಮಾವು, ಹಲಸು, ಪೆಲ್ಟೋಫಾರ್ಮ್, ಮಹಾಗನಿ, ಧೂಪ, ಹೊಂಗೆ, ಸಂಪಿಗೆ, ಹುಣಸೆ, ಮತ್ತಿ ಇತ್ಯಾದಿ ಮರಗಳಿವೆ. ಹಿಂದೆ 8 ಅಡಿ ಎತ್ತರದ ಬೇಲಿ ಮಾಡಿ 80 ರಿಂದ 100 ಹಲಸಿನಗಿಡಗಳನ್ನು ನೆಟ್ಟಿದ್ದು, ಈಗ ಇವೆಲ್ಲವೂ ಫಲ ಕೊಡಲು ಪ್ರಾರಂಭಿಸಿವೆ. ಮಾವಿನಗಿಡಗಳಿಗೆ ಕಸಿ ಮಾಡಿದ್ದು, ಒಂದೇ ಮರದಲ್ಲಿ ಮೂರ್ನಾಲ್ಕು ಜಾತಿಯ ಮಾವಿನ ಫಸಲು ನಿರೀಕ್ಷಿಸಲಾಗುತ್ತಿದೆ. ಅಂದು ನೆಟ್ಟಿದ್ದ ಸಸಿಗಳೆಲ್ಲ ಮರಗಳಾಗಿವೆ.

ಶೇಡಿ ಲಚ್ಚಣ್ಣ ಅವರಿಗೀಗ 71 ವರ್ಷ. 2018ರಲ್ಲಿ ಅನ್ನನಾಳದ ಕ್ಯಾನ್ಸರ್‌ನಿಂದ ಬಳಲಿ ಶಸ್ತ್ರಕ್ರಿಯೆಗೆ ಒಳಗಾಗಿದ್ದರು. ಎರಡು ವರ್ಷಗಳಲ್ಲಿ ಕ್ಯಾನ್ಸರ್ ಗೆದ್ದು ಸುಧಾರಿಸಿಕೊಂಡ ನಂತರ ತಾವು ನೆಟ್ಟು ಬೆಳೆಸಿದ ಸಸಿಗಳ ಆರೈಕೆ ಮುಂದುವರಿಸಿದ್ದಾರೆ. ಈಗಲೂ ಗಿಡಗಳನ್ನು ನೆಡುತ್ತಲೇ, ಬೇಸಿಗೆಯಲ್ಲಿ ಬಾಟಲಿ ಮೂಲಕ ನೀರುಣಿಸುತ್ತಲೇ ಸಸಿಗಳ ಸುತ್ತ ದರಕು ಹಾಕುತ್ತಿದ್ದಾರೆ. ಈಗೀಗ ಗಿಡ ನೆಡಲು ಕೆಲಸಗಾರರ ಸಹಾಯ ಪಡೆಯುತ್ತಾರೆ. ಅಂದಿನಿಂದಲೂ ಗಿಡಗಳಿಗಾಗಿ ತಾವೇ ಖರ್ಚು ಮಾಡುತ್ತಿದ್ದಾರೆ. ಇದರೊಂದಿಗೆ ಗ್ರಾಮಸ್ಥರ ಸಹಾಯವು ಸಿಕ್ಕಿದೆ.

'ಸಸಿ ನೆಡುವುದು ಅರಣ್ಯ ಇಲಾಖೆಯ ಕೆಲಸ ಮಾತ್ರವಲ್ಲ, ಪ್ರತಿಯೊಬ್ಬರೂ ಈ ಕಾರ್ಯದಲ್ಲಿ ಸಾಧ್ಯವಾದ ರೀತಿಯಲ್ಲಿ ಕೈಜೋಡಿಸಬೇಕು. ಪಕ್ಷಿ ಸಂಕುಲಕ್ಕೆ ನೆರವಾಗಿ ಹಸಿರೀಕರಣಕ್ಕೆ ನೆರವಾ ಗಬಹುದು' ಎನ್ನುವ ಲಚ್ಚಣ್ಣ ಅವರಿಗೆ, ಕೆಲಸ ನೋಡಿ ಭೇಷ್ ಎಂದು ಹೋದವರು ಸಸಿ ಬೆಳೆಸುತ್ತಿಲ್ಲ ಎಂಬ ಕೊರಗಿದೆ.

ರಸ್ತೆಬದಿಯಲ್ಲಿ ನೆಟ್ಟಿದ್ದ ಸಸಿಗಳು ಮರಗಳಾಗಿ ತಂಗಾಳಿ ಬೀಸುತ್ತಿವೆ. ಫಲ ಕೊಡುತ್ತಿವೆ. ನೆತ್ತಿ ಮೇಲೆ ಚಪ್ಪರದಂತೆ ಹಾಸಿವೆ. ಇದರ ಹಿಂದೆ ಶೇಡಿ ಲಚ್ಚಣ್ಣನವರ ಅಪಾರ ಪರಿಸರ ಪ್ರೀತಿ ಕೆಲಸ ಮಾಡಿದೆ. ❖

150 ಕ್ಕೂ ಹೆಚ್ಚು ಅಪ್ಪೆಮಿಡಿಗಳು!

ಶೇಡಿ ಲಚ್ಚಣ್ಣ ಅವರ ಧನ್ವಂತರಿ ವನದಲ್ಲಿ ಹಲವು ಬಗೆಯ ಮಾವಿನಗಿಡ, ಮರಗಳಿವೆ. ಮಾವಿನಲ್ಲಿ ಕುಚ್ಚುಗಾಯಿ, ಅಪ್ಪೆಮಿಡಿಗಳ ಹಲವು ಬಗೆಯವು ಇವೆ. 'ಇದು ಅಡ್ಡೇರಿ ಅಪ್ಪೆ, ಇದು ದೊಂಬೆಸರದ್ದು, ಇದರ ಪರಿಮಳ ನೋಡಿ, ಇದು ಕಣಸೇ ಅಪ್ಪೆ, ಇದು ಸಿದ್ದನಕೈ ಅಪ್ಪೆ, ಇದರ ಮಾವಿನಮಿಡಿ 8 ಇಂಚು ಉದ್ದವಿರುತ್ತದೆ. ಇದು ಬಟಾಣಿ ಜೀರಿಗೆ, ತೀರ್ಥಹಳ್ಳಿಯದ್ದು...' ಹೀಗೆ ಮಲೆನಾಡಿನ ಬೇರೆ ಬೇರೆ ಭಾಗಗಳಿಂದ ತಂದ 150ಕ್ಕೂ ಹೆಚ್ಚು ಅಪ್ಪೆಮಿಡಿಗಳ ಗಿಡದ ಎಲೆಯ ತೊಟ್ಟು ಮೂಸಿ ನೋಡಿ ಪರಿಚಯಿಸುತ್ತಲೇ ಕಾಡಿನ ರಸ್ತೆಯಲ್ಲಿ ಪಕ್ಕದೂರು ತಲುಪಿದರು ಲಚ್ಚಣ್ಣ.

ಕಲಾಪ್ರೌಢಿಮೆಗೆ ಸಾಕ್ಷಿ ಉಂಡವಲ್ಲಿ ಗುಹೆಗಳು

ಗುಹೆಯ ಹೊರನೋಟ

ಜಿ.ನಾಗೇಂದ್ರ ಕಾವೂರು

ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯಲ್ಲಿರುವ ಉಂಡವಲ್ಲಿ ಗುಹೆಗಳನ್ನು 4-5 ನೇ ಶತಮಾನಗಳಲ್ಲಿ ಏಕಶಿಲೆಯಿಂದ ನಿರ್ಮಿಸಲಾಗಿವೆ. ಒಡಿಸ್ಸಾದ ಉದಯಗಿರಿ ಮತ್ತು ಖಂಡಗಿರಿಯ ಗುಹೆಗಳ ವಾಸ್ತುಶಿಲ್ಪವನ್ನು ಹೋಲುವ ಈ ಗುಹೆಗಳು ಅನಂತ ಪದ್ಮನಾಭನಿಗೆ ಸಮರ್ಪಿತವಾಗಿವೆ. ಈ ಗುಹೆಗಳಲ್ಲಿ ಅನೇಕ ವೈಷ್ಣವ ದೇವರುಗಳ ಶಿಲ್ಪಗಳನ್ನು ನೋಡಬಹುದು.

ಗುಂಟೂರಿನಿಂದ ಸುಮಾರು 12 ಕಿಲೊಮೀಟರ್ ಹಾಗೂ ವಿಜಯವಾಡದಿಂದ 6 ಕಿಲೊಮೀಟರ್ ದೂರದಲ್ಲಿರುವ ಉಂಡವಲ್ಲಿ ಸಮೀಪವಿರುವ ಬೆಟ್ಟದ ಮೇಲೆ ಪ್ರತ್ಯೇಕ ಸ್ಥಳಗಳಲ್ಲಿ ಕೆತ್ತಲಾಗಿರುವ ಎರಡು ಗುಹೆಗಳಿವೆ. ಇವೆರಡೂ ಗುಹೆಗಳನ್ನು ಮರಳುಗಲ್ಲನ್ನು ಕೊರೆದು ನಿರ್ಮಿಸಲಾಗಿವೆ. ನಾಲ್ಕು ಅಂತಸ್ತು ಹೊಂದಿರುವ ಮುಖ್ಯ ಗುಹೆಗಳ ಸಮುಚ್ಚಯವು ವಿಶೇಷವಾಗಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಆಕರ್ಷಕ ಶಿಲ್ಪಗಳು

ಪೂರ್ವಾಭಿಮುಖವಾಗಿರುವ ಗುಹೆಗಳು 29 ಮೀಟರ್ ಅಗಲ ಮತ್ತು 16 ಮೀಟರ್ ಎತ್ತರವಿದ್ದು, ನೆಲ ಮಹಡಿಯು ಎಂಟು ಕಂಬಗಳಿಂದ ನಿರ್ಮಿತವಾಗಿದ್ದು, ಏಳು ಪ್ರವೇಶದ್ವಾರಗಳನ್ನು ಹೊಂದಿದೆ. ಮೂಲತಃ ತ್ರಿಮೂರ್ತಿಗಳಿಗೆ ಸಮರ್ಪಿತವಾಗಿರುವ ನೆಲ ಮಹಡಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಗುಡಿಗಳಿವೆ. ಗಣೇಶ, ಉಗ್ರನರಸಿಂಹ ಹಾಗೂ ಆಂಜನೇಯನಮೂರ್ತಿಗಳನ್ನೂ ಕಾಣಬಹುದು. ಏಳು ಮತ್ತು ಎಂಟನೇ ಶತಮಾನದಲ್ಲಿ ರಚಿಸಲಾದ ಪೌರಾಣಿಕ ಕಥಾನಕಗಳ ಉಬ್ಬುಶಿಲ್ಪಗಳು ಮೊದಲ ಮಹಡಿಯ ಗೋಡೆಗಳಲ್ಲಿವೆ.

ಎರಡನೆಯ ಅಂತಸ್ತಿನಲ್ಲಿ ಏಳು ಹೆಡೆಗಳ ನಾಗರಾಜನಿರುವ 20 ಅಡಿ ಉದ್ದದ ಶಯನ ಭಂಗಿಯಲ್ಲಿ ರುವ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿರುವ ಏಕಶಿಲಾ ಪ್ರತಿಮೆಯಿದೆ. ಈ ಪ್ರತಿಮೆಯು ಅನಂತ ಪದ್ಮನಾಭನೆಂದು ಹೇಳುತ್ತಾರಾದರೂ, ವಿಷ್ಣುವಿನ ಬಳಿ ಇತರೆಡೆ ಇರುವಂತೆ ಶ್ರೀದೇವಿ ಮತ್ತು ಭೂದೇವಿಯರ ಪ್ರತಿಮೆಗಳು ಇಲ್ಲದಿರುವುದರಿಂದ, ಜೈನ ತೀರ್ಥಂಕರನ ವಿಗ್ರಹವಾಗಿರಬಹುದೆಂದು ಕೆಲವರು ಹೇಳುತ್ತಾರೆ. ಈ ವಿಗ್ರಹದ ಪಾದದ ಬಳಿ ಕೆಲವು ಮೂರ್ತಿಗಳ ಕೆತ್ತನೆಗಳಿದ್ದು, ಮೂರ್ತಿಗಳ ವಿವರಗಳು ಲಭ್ಯವಿಲ್ಲ.

ಮೂರನೆಯ ಮಹಡಿಯ ಮುಂಭಾಗದಲ್ಲಿ ಕುಳಿತ ಭಂಗಿಯಲ್ಲಿರುವ ಆಳ್ವಾರರ ಶಿಲ್ಪಗಳ ಜೊತೆಗೆ ಆನೆ ಮತ್ತು ಸಿಂಹಗಳ ಶಿಲ್ಪಗಳಿವೆ.

ಏಕಶಿಲೆಯನ್ನು ಕೊರೆದು ನಿರ್ಮಿಸಿರುವ ವಾಸ್ತುಶಿಲ್ಪದ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುವ ಉಂಡವಲ್ಲಿ ಗುಹೆಗಳಿರುವ ಪ್ರದೇಶವು ವಿಷ್ಣುಕುಂಡಿನ ರಾಜರ ಆಳ್ವಿಕೆಯಲ್ಲಿ ಇತ್ತು. ಬೌದ್ಧ ಧರ್ಮದ ಅನುಯಾಯಿಗಳಾಗಿದ್ದುದರಿಂದ ಈ ಗುಹೆಗಳಲ್ಲಿ ಮೊದಲು ಬೌದ್ಧ ದೇವಾಲಯಗಳನ್ನು ನಿರ್ಮಿಸಲಾಯಿತು ಹಾಗೂ ಈ ಗುಹೆಗಳನ್ನು ಬೌದ್ಧ ಸನ್ಯಾಸಿಗಳು ವಿಶ್ರಾಂತಿ ಗುಹೆಗಳನ್ನಾಗಿ ಬಳಸುತ್ತಿದ್ದರು. ನಂತರದ ವರ್ಷಗಳಲ್ಲಿ ಕೊಂಡವೀಡು ರೆಡ್ಡಿಗಳಲ್ಲಿ ಒಬ್ಬರಾದ ಮಾಧವ ರೆಡ್ಡಿ ಅಧೀನದಲ್ಲಿದ್ದ ಈ ಪ್ರದೇಶ ಮತ್ತು ಗುಹೆಗಳಲ್ಲಿ ಹಿಂದೂ ದೇವಾಲಯಗಳನ್ನು ನಿರ್ಮಿಸಲು ಉಡುಗೊರೆಯಾಗಿ ನೀಡಿದ್ದನು ಎಂದು ಸ್ಥಳೀಯವಾಗಿ ಲಭ್ಯವಿರುವ ದಾಖಲೆಗಳಿಂದ ತಿಳಿದು ಬರುತ್ತದೆ.

ಮುಖ್ಯ ಗುಹಾ ಸಮುಚ್ಚಯದಿಂದ ಸುಮಾರು 500 ಮೀಟರ್ ದೂರದಲ್ಲಿ ಮತ್ತೊಂದು ಗುಹೆಯಿದ್ದು, ಮೂರು ದ್ವಾರಗಳನ್ನು ಹೊಂದಿದೆ. ಈ ಗುಹೆಯ ಎರಡೂ ಪಾರ್ಶ್ವಗಳಲ್ಲಿ ಗೂಡಿನಂತಹ ರಚನೆಗಳಿವೆ. ಎಲ್ಲೂ ಸಹ ದೇವರ ವಿಗ್ರಹಗಳಿಲ್ಲ. ಗುಹೆಗೆ ಹೋಗುವ ದಾರಿಯಲ್ಲಿ ಆಳೆತ್ತರದ ವೀರಾಂಜನೇಯನ ಉಬ್ಬುಶಿಲ್ಪವಿದೆ.

ಆ ಕಾಲದಲ್ಲಿ ಮರಳುಗಲ್ಲನ್ನು ಕತ್ತರಿಸಿ ನಿರ್ಮಿಸಲಾದ ಗುಹೆಗಳು ಮತ್ತು ವಿಗ್ರಹಗಳು ಶಿಲ್ಪಗಳ ಕಲಾಪ್ರೌಢಿಮೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಬೆಟ್ಟದಲ್ಲಿರುವ ಗುಹೆಗಳು ಹಚ್ಚ ಹಸುರಿನ ಗಿಡ ಮರಗಳಿಂದ ಆವೃತ್ತವಾಗಿದ್ದು, ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಮುಖ್ಯ ಗುಹೆಗಳ ಮುಂಭಾಗದ ಪ್ರದೇಶದಲ್ಲಿರುವ ಹಸಿರುಹುಲ್ಲಿನ ಹಾಸಿನ ಮೇಲೆ ಪ್ರವಾಸಿಗರು ವಿಶ್ರಮಿಸಬಹುದು. ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಈ ರಾಷ್ಟ್ರೀಯ ಸ್ಮಾರಕವು ಭಾರತೀಯ ಪುರಾತತ್ವ ಇಲಾಖೆಯ ನಿರ್ವಹಣೆಯಲ್ಲಿದೆ. ❖

ಮುನ್ನೋಟ 15-09-2024 ರಿಂದ 21-09-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಬಹಳ ಚುರುಕಿನ ನಡವಳಿಕೆಯನ್ನು ಪ್ರದರ್ಶನ ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಇರುತ್ತದೆ. ಬಂಧುಗಳಿಂದ ಸಹಕಾರ ಸಿಗುತ್ತದೆ. ಸಂಸಾರದಲ್ಲಿ ಹೆಚ್ಚಿನ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಅನಿರೀಕ್ಷಿತವಾಗಿ ಆದಾಯ ಹೆಚ್ಚಾಗಬಹುದು. ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಅಧ್ಯಯನದಲ್ಲಿ ಬಹಳ ಆಸಕ್ತಿ ತೋರುವಿರಿ . ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕಿಂತ ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯ ಸ್ವಲ್ಪ ಹೆಚ್ಚಿಗೆ ಬರುತ್ತದೆ. ಸರ್ಕಾರಿ ಸಂಸ್ಥೆ ಅಥವಾ ಸಂಘ-ಸಂಸ್ಥೆಗಳಿಂದ ಆಸ್ತಿ ಲಭಿಸುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆ ಫಲಿತಾಂಶ ಇರುತ್ತದೆ. ಸಂಗಾತಿ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ಹೈನುಗಾರಿಕೆಯಿಂದ ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಪೈಲ್ವಾನರುಗಳಿಗೆ ಸಾಕಷ್ಟು ಅನುಕೂಲವಿದೆ. ಕೃಷಿಕರಿಗೆ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆ. ನಿಮ್ಮ ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬುದ್ಧಿವಂತಿಕೆಯಿಂದ ಜನ ಸಹಾಯ ಪಡೆದು ಮುಂದುವರೆಯುವಿರಿ. ಫ್ಯಾಶನ್ ಡಿಸೈನಿಂಗ್ ಕಲಿಯುವ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇದೆ. ಮೂಳೆಯ ತೊಂದರೆಗಳು ಬರಬಹುದು ಎಚ್ಚರಿಕೆಯಿಂದಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭ ಆನಂದದಾಯಕವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸ್ತ್ರೀಯರಿಂದ ಅಡ್ಡಿ ಬರಬಹುದು. ಕುಟುಂಬದ ಕಡೆಗೆ ಸರಿಯಾಗಿ ಗಮನವಹಿಸುವುದು ಅಗತ್ಯ. ನಾಟಿ ವೈದ್ಯರುಗಳಿಗೆ, ಆಯುರ್ವೇದ ಪಂಡಿತರಿಗೆ ಬೇಡಿಕೆ ಹೆಚ್ಚುತ್ತದೆ. ಅವಿವಾಹಿತರ ಪ್ರೀತಿ ಯಶಸ್ವಿಯಾಗಬಹುದು. ಕಬ್ಬಿಣ ಮತ್ತು ಉಕ್ಕು ಮಾರಾಟಗಾರರಿಗೆ ಲಾಭ ಹೆಚ್ಚುವುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಅತಿಯಾದ ಆತ್ಮಾಭಿಮಾನವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸ್ತ್ರೀಯರು ನಡೆಸುವ ವ್ಯವಹಾರಗಳಲ್ಲಿ ಸ್ವಲ್ಪ ಮಟ್ಟಿನ ಲಾಭವಿರುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಕ್ರೀಡೆ ಕಲಿಯುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವವರಿಗೆ ದಾಖಲಾತಿಗಳಲ್ಲಿ ವ್ಯತ್ಯಾಸಗಳಾಗಬಹುದು. ವಂಶಪಾರಂಪರಿಕ ವ್ಯವಹಾರಗಳಲ್ಲಿ ಅಭಿವೃದ್ಧಿ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದೃಢ ನಿರ್ಧಾರಗಳಿದ್ದರೂ ಅವುಗಳ ಅನುಷ್ಠಾನಕ್ಕೆ ಬಹಳ ಪ್ರಯಾಸ ಪಡುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ದೊರೆಯಬಹುದು. ಹಿರಿಯರ ಆಸ್ತಿ ಪಡೆಯಲು ಬಹಳ ಪ್ರಯತ್ನಪಡುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಚೇತರಿಕೆಯನ್ನು ಕಾಣಬಹುದು. ಹಳೆಯ ಕೆಲವು ಕಾಯಿಲೆಗಳು ಮರುಕಳಿಸುವ ಸಾಧ್ಯತೆಗಳಿವೆ. ಸಂಗಾತಿಯ ವಿಲಾಸಿ ಜೀವನದ ಬಗ್ಗೆ ಬೇಸರವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಮನೋಸ್ಥೈರ್ಯ ಸ್ವಲ್ಪ ಕಡಿಮೆ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ನಿರಾಸೆ ಇರುತ್ತದೆ. ಮಕ್ಕಳ ಏಳಿಗೆ ಬಗ್ಗೆ ಸಾಕಷ್ಟು ಚಿಂತೆ ಇರುತ್ತದೆ. ಅತಿ ಉಷ್ಣ ಅಥವಾ ಕೀಲು ನೋವು ಕಾಡಬಹುದು. ಸಂಗಾತಿ ಕಡೆಯವರಿಂದ ನಿಮಗೆ ಸ್ವಲ್ಪ ಅನುಕೂಲವಾಗುತ್ತದೆ. ಆದಾಯವಿದ್ದರೂ ಅನಿರೀಕ್ಷಿತ ಖರ್ಚಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೆಲವು ಒತ್ತಡಗಳ ನಡುವೆಯೂ ಸೌಮ್ಯವಾಗಿರಲು ಪ್ರಯತ್ನ ಪಡುವಿರಿ. ನಿಮ್ಮ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸಗಳಿಗೆ ಹಿರಿಯರಿಂದ ಸಹಕಾರ ಸಿಗುತ್ತದೆ. ಸೋದರಿಯರಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ. ಸಾವಯವ ಕೃಷಿ ಮಾಡುವವರಿಗೆ ಬಹಳ ಉತ್ತೇಜನ ಸಿಗುತ್ತದೆ. ವಿದೇಶದಲ್ಲಿರುವ ಮಕ್ಕಳನ್ನು ನೋಡಲು ಹೋಗಬಹುದು. ಸಂಗಾತಿಯಿಂದ ನಿಮಗೆ ಸಾಕಷ್ಟು ಧನ ಸಹಾಯ ಸಿಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಎಲ್ಲಾ ವಿಷಯಗಳಲ್ಲಿ ದೃಢವಾದ ನಿರ್ಧಾರಗಳನ್ನು ಕೈಗೊಳ್ಳಿರಿ. ಆದಾಯವು ನಿರೀಕ್ಷೆಯ ಹತ್ತಿರಬರುತ್ತದೆ. ಬಂಧುಗಳು ನಿಮ್ಮ ವಿರುದ್ಧ ತಗಾದೆ ತೆಗೆಯಲು ಹಿಂದೇಟು ಹಾಕುವರು. ವಿದೇಶದಲ್ಲಿರುವವರಿಗೆ ಸ್ವದೇಶ ಮತ್ತು ವಿದೇಶಗಳಲ್ಲಿ ಆಸ್ತಿ ಮಾಡಿಕೊಳ್ಳವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ವಾಯು ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾರದ ಆರಂಭ ಆನಂದದಾಯಕವಾಗಿರುತ್ತದೆ. ಆದಾಯ ಕಡಿಮೆ ಇದ್ದರೂ ಹಣ ನಿರ್ವಹಣೆಯಾಗುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವ ಬಗ್ಗೆ ಸಾಕಷ್ಟು ತಿಳಿವಳಿಕೆ ಪಡೆಯುವಿರಿ. ವಿದ್ಯಾರ್ಥಿಗಳಿಗೆ ಈಗ ಅತ್ಯುನ್ನತ ಫಲಿತಾಂಶ ಪಡೆಯುವ ಯೋಗವಿದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವವರು ಬಹಳ ಎಚ್ಚರದಿಂದ ಉಪಯೋಗಿಸಿ. ಸಂಗಾತಿಯು ನಿಮ್ಮೆಲ್ಲ ಕೆಲಸಗಳಿಗೆ ಬೆನ್ನೆಲುಬಾಗಿ ನಿಲ್ಲುವರು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಒತ್ತಡದಲ್ಲಿ ಕೆಲಸ ಮಾಡಬೇಕಾದೀತು. ಮಾತಿನಲ್ಲಿ ಬಹಳ ಎಚ್ಚರವಿರಲಿ. ಬಂಧುಗಳು ನಿಮಗೆ ಮುಂದುವರೆಯುವ ದಾರಿಯನ್ನು ತೋರುವರು. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಸ್ವಲ್ಪ ಮಟ್ಟಿನ ಲಾಭವಿರುತ್ತದೆ. ಶೀತ ಸಂಬಂಧಿ ದೋಷ ಇರುವವರಿಗೆ ಹೆಚ್ಚು ವ್ಯತ್ಯಾಸಗಳಾಗಬಹುದು. ಆಭರಣ ತಯಾರಕರಿಗೆ ಸ್ವಲ್ಪ ಹಿನ್ನಡೆಯಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ಸಾಮಾನ್ಯಮಟ್ಟದಲ್ಲಿರುತ್ತದೆ. ಹಿರಿಯರೊಡನೆ ಹೊಂದಾಣಿಕೆ ಮಾಡಿಕೊಂಡು ಅವರ ಸಹಾಯ ಪಡೆಯಲು ಯತ್ನಿಸುವಿರಿ. ಆಸ್ತಿ ವಿಚಾರದಲ್ಲಿ ಮೇಲುಗೈ ಸಾಧಿಸಬಹುದು. ಕೃಷಿಯಿಂದ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸರ್ಕಾರಿ ಸಾಲಗಳು ಸರಾಗವಾಗಿ ದೊರೆಯುತ್ತವೆ. ಸಂಗಾತಿಯ ಅತಿಯಾದ ಧರ್ಮ ಶ್ರದ್ಧೆ ಬೇಸರ ತರಿಸಬಹುದು.

ಪದಬಂಧ 2858



ಮೇಲಿನಿಂದ ಕೆಳಕ್ಕೆ

2. ಬಲವಾಗಿ ಹಾಡುಗಾರನ ಪಕ್ಕಕ್ಕೆ ಬರುವ ಚರ್ಮವಾದ್ಯ 3
3. ಮಂಗನಿಗೆ ಬಂದ ಸಿಟ್ಟು 4
4. ತರಾತುರಿಯಲ್ಲಿರುವ ಈತನಿಗೆ ಸದಾ ಬುದ್ಧಿ ಮಟ್ಟು 5
5. ಯಾರಿಗೂ ಹೆದರದ ಎದೆಗಾರಿಕೆ 4
7. ಪ್ರಾಯ ಕಳೆದುಕೊಂಡ ಜೀವನದ ವೃದ್ಧಾಪ್ಯ 4
8. ಋಷಿ ಶ್ರೇಷ್ಠರಂತಹ ಮಂದಿ 4
10. ವಿಶ್ವ ಎರಡು ಸಲ ಎದುರಿಸಿ ಈಗ ಮೂರನೆಯ ಸಲ ಭೀತಿ ಹುಟ್ಟಿಸಿರುವ ಭಾರಿ ಯುದ್ಧ 5
14. ಒಮ್ಮೊಮ್ಮೆ ವ್ಯಂಗ್ಯವಾಗಿ ಒಮ್ಮೊಮ್ಮೆ ವಿಶೇಷವಾಗಿ ವ್ಯಕ್ತಿಯ ಗೌರವ ಸಂಬೋಧನೆ 4
15. ಅಲೆಗಳನ್ನೆಬ್ಬಿಸುವ ಹಸಿರು ಹಕ್ಕಿ 4
16. ಅಗಲಿರುವ ಪ್ರಿಯ ಪ್ರೇಯಸಿಯರ ಹಾಡು 5
17. ನಡತೆ ಸ್ವಭಾವದಲ್ಲಿ ಒಳ್ಳೆಯವ 4
19. ಸನಕಾದಿ ಋಷಿಗಳಲ್ಲಿ ಸದಾ ಆನಂದದಿಂದರುವ 4
21. ಬಾನು ಭುವಿಯ ಸಂಗಮದಲ್ಲಿ ಹುಟ್ಟಿದ್ದು 3

ಎಡದಿಂದ ಬಲಕ್ಕೆ

1. ಇನ್ನೊಬ್ಬರ ಒಳಿತಿನ ಬಗ್ಗೆ ಯೋಚಿಸುವವ 5
4. ಭವಿಷ್ಯದಲ್ಲಿ ಭರವಸೆಯಿಟ್ಟುರುವ ಸಿದ್ಧಾಂತಿ 4
6. ಕಿವಿಯಲ್ಲಿ ಉಸುರುವ ಮೆಲುನುಡಿ 4
7. ಗಾಯಕ್ಕೆ ನೋವಿಗೆ ಹಚ್ಚುವ ಲೇಪ 3
9. ಹೋಲಿಕೆಗೆ ನಿಲುಕದವಳು 4
11. ಆವರಿಸಬಹುದಾದ ತೀವ್ರ ನಿಶ್ಶಬ್ಧ 4
12. ಹಕಾರ ಪ್ರಿಯನ ಬಾಯಲ್ಲಿ ಆದರ ಹೀಗಾಗಬಹುದು 3
13. ಹಿಂದು ಮುಂದಾಗಿ ನೋಡಿದರೂ ಇದು ಹೊಚ್ಚ ಹೊಸದು 3
14. ಮತದಲ್ಲಿ ಬೀಸುವ ಗಾಳಿ 3
16. ಹಿಂದುಮುಂದಾದ ಅಹವಾಲು 3
17. ಸಿಖ್ ಮಾರ್ಗದರ್ಶಕ ತೋರಿಸುವ ಉನ್ನತಿಯ ಬಾಗಿಲು 4
18. ಕವಿಯ ಭಾವನೆ ದ್ರವದಂತೆ ಉಕ್ಕಿದೆ 4
20. ಮಾಯದಂತಹ ತಂತ್ರ ವಿದ್ಯೆ 3
22. 'ಗೀಯ ಗೀಯ' ಎಂದು ಅಲ್ಪವಾಗಿ ಘೀಳಿಡುವ ಜಾನಪದ ಹಾಡು 4
23. ಮರ ಮತ್ತದಕ್ಕೆ ಸುತ್ತಿಕೊಂಡ ಬಳ್ಳಿ 4
24. ಇವರು ಹಳ್ಳಿಯವರಲ್ಲ ಪಟ್ಟಣದ ಮಂದಿ 5

ಪದಬಂಧ ಉತ್ತರ -2857

ಮೇಲಿಂದ ಕೆಳಕ್ಕೆ

1.ಪ್ರಧಾನಿ 2.ತ್ವರಿತ 3.ನೆಲಮಾಳಿಗೆ 4.ಲಕ್ಷಾರತಿ 7.ಕ್ಷಮತೆ 9.ಸಂದೇಹ 10.ಗೆಣಸು 11.ಯಯಾತಿ 12.ತಿಲಾನ್ನ 14.ಕಾಷಾಯವಸ್ತ್ರ 15.ಭಿಕ್ಷುಕ 16.ಜರಾಸಂಧ 18.ನಾಯಕ 19.ಕೆಳಗೆ

ಎಡದಿಂದ ಬಲಕ್ಕೆ

1. ಪ್ರಜಾಪ್ರಭುತ್ವ 3.ನೆಲಜಲ 5.ರಿಕ್ಷಾವಾಲ 6. ನಿಷ್ಪಕ್ಷಪಾತ 8.ಮಾಯಗಾರ 9.ಸಂತೆ 10.ಗೆಳೆಯಗೆಳತಿ 13.ಹಣಕಾಸುನೀತಿ 15.ಭಿನ್ನ 17.ರಾಮರಾಯ 18.ನಾಗಕನ್ನಿಕೆ 20.ವಜ್ರಕಾಯ 21.ಧರ್ಮಶಾಸ್ತ್ರ 22.ಕಪ್ಪುಹಲಗೆ

ಆಲಿಸಿ ಸಸ್ಯಲೋಕದ ಮೌನ ಭಾಷೆ

ಕೇಶವ ಎಚ್.ಕೊರ್ಸೆ

ರಸ್ತೆಯಲ್ಲಿ ಕಂಡ ಬಸವಳಿದ ದನವನ್ನೋ, ಅನ್ನವಿಲ್ಲದೆ ಕಂಗೆಟ್ಟ ಬೀದಿನಾಯಿಯನ್ನೋ ನೋಡಿ 'ಪಾಪ, ಮೂಕಜೀವಿ' ಎಂದು ನಿಟ್ಟುಸಿರಿಟ್ಟೇವು. ಆದರೆ, ಅಂಗಳದಲ್ಲಿ ಅರಳಿದ ಮಲ್ಲಿಗೆಯೋ, ಹೊಲದಲ್ಲಿ ಬೆಳೆದ ಟೊಮೆಟೊ ಗಿಡವೋ ಬಿಸಿಲಿನ ಝಳಕ್ಕೆ ಬಾಡುವುದನ್ನು ನೋಡಿದಾಗ, ಅದೇ ತೆರನ ಭಾವತೀವ್ರತೆ ನಮ್ಮನ್ನು ಕಾಡದಿರಬಹುದು. ಏಕೆಂದರೆ, ಗಿಡ ಮರಗಳಿಗೆ ಮನೋಬುದ್ಧಿ ಇಲ್ಲವಲ್ಲ ಎಂಬ ಸಾಮಾನ್ಯ ಗ್ರಹಿಕೆ ನಮ್ಮದು. ಅದಕ್ಕೆ ತಾನೇ, ಮೌನವಾಗಿರುವವರನ್ನು 'ಮನುಷ್ಯನೋ, ಮರವೋ?' ಎಂದು ಕೆಣಕುವುದು!

> ಪ್ರಾಣಿವರ್ಗದಂತೆಯೇ, ಗಿಡಮರಗಳಲ್ಲಿಯೂ ಪರಸ್ಪರ ಸಂಪರ್ಕ ಸಾಧಿಸುವ ಸಮರ್ಥ ಸಂವಹನ ವ್ಯವಸ್ಥೆಯಿದೆ. ಸಸ್ಯಲೋಕದಲ್ಲಿ ವಿಕಾಸವಾಗಿರುವ ಆ ಬಗೆಯ ವಿಶಿಷ್ಟ ಹಾಗೂ ಸಂಕೀರ್ಣ ಸಂವಹನ ತಂತ್ರಗಳ ಕುರಿತ ಇತ್ತೀಚಿನ ಸಂಶೋಧನೆಗಳು, ಈವರೆಗೆ ನಮಗೆ ಅರಿವೇ ಇಲ್ಲದ ಜೀವಲೋಕದ ಹೊಸ ಆಯಾಮಗಳನ್ನೇ ಪರಿಚಯಿಸುತ್ತಿವೆ. ಆ ಮೂಲಕ, ಜೀವವೈವಿಧ್ಯಗಳ ಸಂರಕ್ಷಣೆಯಲ್ಲಿ ನಾವು ತೋರಲೇಬೇಕಿರುವ ನೈತಿಕ ಜವಾಬ್ದಾರಿಯತ್ತಲೂ ಬೆರಳು ತೋರಿಸುತ್ತಿವೆ.

ಸಾಂದರ್ಭಿಕ ಚಿತ್ರ

ಆದರೀಗ, ಗಿಡ ಮರ ಬಳ್ಳಿಗಳೇನೂ ಸುತ್ತಲ ಪರಿಸ್ಥಿತಿಯನ್ನು ಒಂದಿನಿತೂ ಅರಿಯದ ಜಡಜೀವಿಗಳು ಅಲ್ಲವೆಂದು ಇತ್ತೀಚಿನ ಸಂಶೋಧನೆಗಳು ತೋರಿಸುತ್ತಿವೆ. ಎಲೆ, ಕಾಂಡ, ಬೇರುಗಳಲ್ಲಿ ಅದೆಷ್ಟೋ ತೆರನಾದ ರಾಸಾಯನಿಕಗಳನ್ನು ಸ್ರವಿಸಿ ಸಮೀಪದಲ್ಲಿರುವವರಿಗೆ ತನ್ನ ಆಕ್ರಂದನವನ್ನು ತಿಳಿಸಬಲ್ಲದು. ಇರುವಷ್ಟು ನೀರಲ್ಲೇ ಜೈವಿಕಕ್ರಿಯೆಗಳನ್ನು ಪೂರೈಸಿಕೊಳ್ಳಲು ವಿವಿಧ ಜೀವರಾಸಾಯನಿಕ ಪ್ರಕ್ರಿಯೆಗಳಿಗೂ ಚಾಲನೆ ನೀಡಬಲ್ಲದು. ಬದನೆ, ಟೊಮೊಟೊ ಸೇರಿದಂತೆ ಹಲವು ಗಿಡಗಳಲ್ಲಿ ಇದು ಪ್ರಯೋಗ ಸಿದ್ಧವಾಗಿದ್ದು, ಸಸ್ಯ ಜಗತ್ತಿನ ಈ ನಿಖರ ಹಾಗೂ ಸಂಕೀರ್ಣ ಸಂವಹನ ವ್ಯವಸ್ಥೆ ಕುರಿತು ಜೀವವಿಜ್ಞಾನ ಕ್ಷೇತ್ರದ ಅರಿವು ಹೆಚ್ಚುತ್ತಿದೆ.

ಸಸ್ಯಗಳಲ್ಲಿರುವ ಈ ಸಂವಹನ ಕ್ರಮಗಳ ತೀರಾ ಪ್ರಾಥಮಿಕ ಅರಿವು ಈ ಮೊದಲೇ ತಿಳಿದಿತ್ತು. ಗಿಡವೊಂದರ ವಿವಿಧ ಚಲನೆಗಳೇ ಇದಕ್ಕೆ ನಿದರ್ಶನ. ನೀರು, ಬೆಳಕು, ಪೋಷಕಾಂಶ, ಗುರುತ್ವಾಕರ್ಷಣೆ, ರಾಸಾಯನಿಕಗಳು ಇತ್ಯಾದಿ ಬಾಹ್ಯ ಪ್ರಚೋದನೆಗಳಿಗೆ ಅನುಗುಣವಾಗಿ ಗಿಡದ ಬೇರು, ಕಾಂಡ, ಟೊಂಗೆ, ಎಲೆ, ಹೂಗಳು ಹೊರಳುತ್ತವೆ, ಅರಳುತ್ತವೆ ಹಾಗೂ ಬೆಳೆಯುತ್ತವೆ. ಸೂರ್ಯಕಾಂತಿ ಸೂರ್ಯನ ಚಲನೆಯ ದಿಕ್ಕನ್ನು ಗ್ರಹಿಸಬಲ್ಲದು. ಬ್ರಹ್ಮಕಮಲ ಹಾಗೂ ರಾತ್ರಿರಾಣಿಯಂಥ ಗಿಡಗಳಿಗೆ ಹಗಲು-ರಾತ್ರಿಯ ವ್ಯತ್ಯಾಸದ ಅರಿವಿದೆ. 'ಮುಟ್ಟಿದರೆ ಮುನಿ' ಗಿಡವು ಸ್ಪರ್ಶಕ್ಕೆ ಸ್ಪಂದಿಸಬಲ್ಲದು. ಆದರೂ, ಇವೆಲ್ಲ ಸೀಮಿತ ಉದ್ದೇಶದ 'ಆ ಕ್ಷಣದ ಪ್ರತಿಕ್ರಿಯೆ' ಮಾತ್ರ ಎಂದು ವಿಜ್ಞಾನ ಭಾವಿಸಿತ್ತು.

ಆದರೆ, ಈ ಸರಳ ಪ್ರತಿಕ್ರಿಯೆಗೂ ಮೀರಿದ 'ಅರಿವು' ಸಸ್ಯಗಳಿಗಿವೆಯೆಂದು 1901ರಲ್ಲಿಯೇ ವಿಜ್ಞಾನಿ ಜಗದೀಶ್ಚಂದ್ರ ಬೋಸ್ ಮೊದಲ ಪ್ರತಿಪಾದಿಸಿದ್ದರು. ಪರಿಸರದ ಪ್ರಚೋದನೆಗಳಿಗೆ ಅನುಗುಣವಾಗಿ ಬೆಳೆಯುವ ಸಸ್ಯಗಳ ಸಾಮರ್ಥ್ಯವನ್ನು ಲಂಡನ್ ರಾಯಲ್ ಸೊಸೈಟಿಯಲ್ಲಿ ತಾವೇ ಅಭಿವೃದ್ಧಿಪಡಿಸಿದ್ದ 'ಕ್ರೆಸ್ಕೋಗ್ರಾಫ' ಯಂತ್ರದ ಮೂಲಕವೇ ತೋರಿಸಿದ್ದರು. ಆದರೆ, ಸಸ್ಯಗಳಲ್ಲಿ ಪ್ರಾಣಿಗಳಂತೆ ನರಮಂಡಲವಿಲ್ಲ ಎಂಬ ಕಾರಣಕ್ಕೆ, 'ಸಸ್ಯಗಳಿಗೂ ಭಾವನೆಗಳಿವೆ' ಎಂಬ ಅವರ ವಾದವನ್ನು ದೀರ್ಘಕಾಲದವರೆಗೆ ವಿಜ್ಞಾನಲೋಕ ಪುರಸ್ಕರಿಸಿರಲಿಲ್ಲ. ಇದೀಗ, ಆಧುನಿಕ ಜೀವವಿಜ್ಞಾನದ ಕ್ರಾಂತಿಕಾರಿ ಸಂಶೋಧನೆಗಳಿಂದಾಗಿ ಸಸ್ಯಲೋಕದ ಅಮೂರ್ತ ಸಂವಹನ ತಂತ್ರಗಳನ್ನು ನಿಖರವಾಗಿ ಗುರುತಿಸಲಾಗುತ್ತಿದೆ. 'ಸಸ್ಯ-ನರಜೀವಶಾಸ್ತ್ರ' ಎಂಬ ಆಧುನಿಕ ವಿಜ್ಞಾನ ಯೇ ಉದಯವಾಗಿದೆ.

ಹಾಗಾದರೆ, 'ಸಸ್ಯ ಸಂವಹನ'ದ ಸ್ವರೂಪವೇನು? ಮನುಷ್ಯನ ಸಂವಹನದಲ್ಲಿ ದೇಹ, ಧ್ವನಿ ಹಾಗೂ ಶಬ್ದ ಆಧಾರಿತ ಭಾಷೆ ಪ್ರಧಾನ ಅಲ್ಲವೇ? ಹಾಗೆಯೇ, ಸಸ್ಯಗಳಲ್ಲಿ ಅವು ಸೃಜಿಸುವ 'ವಿಶಿಷ್ಟ ರಾಸಾಯನಿಕಗಳು' ಹಾಗೂ ಹೊರಡಿಸುವ 'ವಿಶಿಷ್ಟ ಶಬ್ದ'ಗಳೇ ಅವುಗಳ ಸಂವಹನ ಮಾರ್ಗಗಳೆನ್ನಬೇಕು. ಅಂಥದೊಂದು ಸಂವಹನ ಕ್ರಮ ಅಲ್ಲಿ ವಿಕಾಸವಾಗಿದೆ. ಸಸ್ಯವೊಂದು ಶೀತ ಪ್ರದೇಶದ ಯುರೋಪಿನಲ್ಲೂ ಹಾಗೂ ಉಷ್ಣ ವಲಯದ ಕರುನಾಡಿನಲ್ಲೂ ಬೆಳೆಯಬಹುದು. ಅದು ಒಣಭೂಮಿಯೂ ಆಗಬಹುದು, ಜೌಗೂ ಇರಬಹುದು. ಈ ಬಗೆಯ ವ್ಯತ್ಯಾಸಗಳನ್ನು ಆಧರಿಸಿ, ಪ್ರಬೇಧವೊಂದು ತನ್ನ ಮೂಲಭೂತ 'ಸಂವಹನ ತಂತ್ರ'ಗಳಲ್ಲಿ ಹಲವು ಮಾರ್ಪಾಟುಗಳನ್ನೂ ಮಾಡಿಕೊಳ್ಳುತ್ತದೆ. ಹೀಗೆ, ಸಸ್ಯ ಪ್ರಬೇಧಗಳೆಲ್ಲವೂ ಸ್ಥಳೀಯ ಅಗತ್ಯಕ್ಕನುಗುಣವಾಗಿ ತಮ್ಮ 'ಉಪಭಾಷೆ' ರೂಪಿಸಿಕೊಳ್ಳುದನ್ನೂ ವಿಜ್ಞಾನ ಅರ್ಥೈಸಿಕೊಳ್ಳುತ್ತಿದೆ.

ಬೀಜ ಮೊಳೆಯುವುದು, ಬೇರು ಬೆಳೆಯುವುದು, ಕಾಂಡ ಟಿಸಿಲೊಡೆಯುವುದು, ಎಲೆ ಚಿಗುರುವುದು, ಮೊಗ್ಗು ಹೂವಾಗಿ ಹಣ್ಣಾಗುವುದು, ಎಲೆ ಉದುರುವುದು-ಇತ್ಯಾದಿಗಳಿಗೆ ಅಗತ್ಯವಿರುವ ಆಂತರಿಕ ಸಂದೇಶ ರವಾನೆಯಲ್ಲಿ ಈ ಸಂಕೀರ್ಣ ಸಂವಹನದ ಪಾತ್ರವಿದೆ. ಜೊತೆಗೆ, ಬಾಹ್ಯ ಪರಿಸರದ ಇತರ ಸಸ್ಯಗಳೊಂದಿಗೆ ಸಂಪರ್ಕ ಸಾಧಿಸುವಲ್ಲೂ ಇದು ನೆರವಾಗುತ್ತದೆ. ರೋಗಾಣುಗಳಿಂದ ಮುಕ್ತಿಪಡೆಯುವುದು, ಮೇಯುವ ಪ್ರಾಣಿಗಳು ಅಥವಾ ಕೀಟಗಳಂಥ ವೈರಿಗಳನ್ನು ಓಡಿಸುವುದು, ಅಕ್ಕಪಕ್ಕದ ಗಿಡಗಳೊಂದಿಗೆ ಸ್ಪರ್ಧೆ ಎದುರಿಸುವುದು, ಸಹಕಾರಿ ಸಸ್ಯಗಳ ಸಹಯೋಗ ಸಾಧಿಸುವುದು–ಇತ್ಯಾದಿಗಳಲ್ಲೆಲ್ಲ ಈ ಸಂವಹನ ಪ್ರಕ್ರಿಯೆ ಹಾಸುಹೊಕ್ಕಾಗಿದೆ.

ಒಂದೊಂದೂ ಸಸ್ಯವೂ ವಿವಿಧ ರಾಸಾಯನಿಕಗಳನ್ನು ತನ್ನ ಎಲೆಯಲ್ಲೋ, ಬೇರಿನಲ್ಲೋ ಸೃಜಿಸಬಲ್ಲದು. ಈ ಮೂಲಕವೇ ಬಾಹ್ಯ ಪರಿಸರದ ಇತರ ಜೀವಿಗಳು, ಉಷ್ಣತೆ, ತೇವಾಂಶ, ರಾಸಾಯನಿಕಗಳು, ಅನಿಲಗಳು, ಸೋಂಕು, ಬೆಳಕು, ಶಬ್ದ ಇತ್ಯಾದಿಗಳಿಗೆಲ್ಲ ಸಸ್ಯಗಳು ಸ್ಪಂದಿಸುತ್ತವೆ.

ಇದನ್ನು ನಿರೂಪಿಸಲು ಹುಲ್ಲಿನ ಪ್ರಬೇಧಗಳಲ್ಲಿ ಪ್ರಯೋಗಸಿದ್ಧವಾಗಿರುವ ಸಂಗತಿಯೊಂದನ್ನು ಉದಾಹರಿಸಬಹುದು. ಜಿಂಕೆ-ದನಗಳಂಥ ಪ್ರಾಣಿಗಳು ಹುಲ್ಲು ಮೇಯುವಾಗ, ಗಾಯಗೊಂಡ ಎಲೆಯ ಭಾಗಗಳು ಹಲವು ಸುಗಂಧದ್ರವ್ಯಗಳನ್ನು ಹೊರಸೂಸುತ್ತವೆ. ಅವು ಗಾಳಿಯಲ್ಲಿ ಪಸರಿಸಿ ಅಕ್ಕಪಕ್ಕದ ಅದೇ ಪ್ರಬೇಧದ ಇತರ ಗಿಡಗಳಿಗೆ ಅಪಾಯದ ಮುನ್ಸೂಚನೆ ನೀಡುತ್ತವೆ. ಆ ಗಿಡಗಳು ಆಗ ತಮ್ಮಲ್ಲಿರುವ ಸೂಕ್ತ ವಂಶವಾಹಿಗಳಿಗೆ ಪ್ರಚೋದನೆ ನೀಡಿ, ಎಲೆಯಲ್ಲಿ ಕಹಿಯಾದ ದ್ರವವೊಂದನ್ನು ಸ್ರವಿಸಿಕೊಳ್ಳುವ ರಕ್ಷಣಾಮಾರ್ಗಕ್ಕೆ ಮುಂದಾಗುತ್ತವೆ. ಇಂಥ ಪ್ರಯೋಗ ಕಲ್ಲಂಗಡಿ ಹಣ್ಣಿನ ಪ್ರಬೇಧಗಳಲ್ಲೂ ನಡೆದಿದೆ.

ಸಸ್ಯ ಸಂವಹನದ ಎರಡನೇ ಮಾರ್ಗವೆಂದರೆ, ಅವು ನಿರ್ದಿಷ್ಟ ಸಂದರ್ಭಗಳಲ್ಲಿ ಹೊರಡಿಸುವ 'ವಿಶಿಷ್ಟ ಶಬ್ದ'! ಪೋಷಕಾಂಶ ಕೊರತೆ, ಗಾಯ, ರೋಗಾಣು ದಾಳಿಯಂಥ ಸಂದರ್ಭಗಳಲ್ಲಿ ಪ್ರತಿ ಪ್ರಬೇಧವೂ ವಿಶಿಷ್ಟ ಶಬ್ದ ಹೊರಡಿಸುತ್ತದೆ. ಅಕ್ಕಪಕ್ಕದ ಗಿಡಮರಗಳಿಗೆ ಆ 'ಧ್ವನಿ'ಯು ಅಪಾಯದ ಮುನ್ಸೂಚನೆ ನೀಡಿ, ರಕ್ಷಣಾತಂತ್ರ ಅನುಸರಿಸಲು ಪ್ರೇರಣೆ ನೀಡುತ್ತದೆ. ಟೊಮೊಟೊ, ತಂಬಾಕಿನಂಥ ಕೃಷಿ ಪ್ರಬೇಧಗಳಂತೆಯೇ, ಪೈನ್‌ವೃಕ್ಷದಂಥ ಅನೇಕ ಕಾಡಿನ ಗಿಡಮರ ಪ್ರಬೇಧಗಳಲ್ಲೂ ಈ ಸಂಗತಿ ಈಗ ನಿರೂಪಿತವಾಗಿದೆ. ಈ 'ಮೌನಭಾಷೆ'ಯು ಮನುಷ್ಯ ಗ್ರಹಿಸಲಾಗದ 'ಅಲ್ಟ್ರಾ ಸೋನಿಕ್' ತರಂಗಾಂತರಗಳಲ್ಲಿ ಇರುವುದರಿಂದ ನಮಗದು ಕೇಳುವುದಿಲ್ಲ, ಅಷ್ಟೇ!

ಸಸ್ಯಗಳ ಈ ಸಂವಹನಾ ಲೋಕ ಕುರಿತು ಸಂಶೋಧನೆಗಳು ಇದೀಗ ಹಲವು ಮಜಲುಗಳಲ್ಲಿ ಸಾಗುತ್ತಿವೆ. ಅವುಗಳಲ್ಲೂ 'ನೆನಪಿನ ಶಕ್ತಿ' ಹಾಗೂ ಪ್ರಾಥಮಿಕ ಸ್ವರೂಪದ 'ಸ್ವ-ಪ್ರಜ್ಞೆ' ಇರುವುದೂ ಕಂಡುಬರುತ್ತಿದೆ! ಈ ಸಸ್ಯ-ನರಜೀವಶಾಸ್ತ್ರದ ಇನ್ನಷ್ಟು ಸಂಕೀರ್ಣ ಆಯಾಮಗಳು ಮುಂಬರುವ ದಿನಗಳಲ್ಲಿ ಅರಿವಾಗುವುದರಲ್ಲಿ ಸಂಶಯವಿಲ್ಲ. ಈಗ ಅಭಿವೃದ್ಧಿಯಾಗುತ್ತಿರುವ 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ' ಬಳಸಿ, 'ರಾಸಾಯನಿಕಗಳು' ಹಾಗೂ 'ಶಬ್ದ' ಆಧಾರಿತ ಈ ಸಸ್ಯಲೋಕದ ಸಂವಹನಕ್ರಮವನ್ನು ಮನುಷ್ಯನೂ ಅರ್ಥೈಸಿಕೊಳ್ಳಬಲ್ಲ ಭಾಷೆಯಾಗಿ ಪರಿವರ್ತಿಸುವ ಕುರಿತೂ ಪ್ರಯೋಗಗಳು ಸಾಗಿವೆ. ಅಂದರೆ, ಸಸ್ಯಗಳ ನೋವು ನಲಿವು ತಿಳಿಸಬಲ್ಲ ಹೊಸ 'ಸಸ್ಯಭಾಷೆ'ಯೇ ನಿಕಟ ಭವಿಷ್ಯದಲ್ಲಿ ಅಭಿವೃದ್ಧಿಯಾದರೆ ಆಶ್ಚರ್ಯವಿಲ್ಲ!

ಎಂಬತ್ತು–ತೊಂಬತ್ತರ ದಶಕದಲ್ಲಿ ನಾಡಿನ ಕಾಡು ಗೋಮಾಳ, ನದಿ ತೊರೆಗಳ ರಕ್ಷಣೆಗಾಗಿ ಪರಿಸರ ಸಂರಕ್ಷಣೆ ಹೋರಾಟಗಳು ನಡೆಯುತ್ತಿದ್ದಾಗ, ಸಾಹಿತಿ ಕೆ.ಶಿವರಾಮ ಕಾರಂತರು 'ಮರಕ್ಕೆ ಮಾತು ಬರುವುದಿಲ್ಲವೆಂದು ಮರ ಕಡಿಯಬೇಡಿ; ಅವುಗಳ ಮೂಕರೋದನ ಆಲಿಸಿ' ಎಂದು ಅಧಿಕಾರಸ್ಥರಿಗೆ ಬಿಸಿಮುಟ್ಟಿಸುತ್ತಿದ್ದ ಸಂದರ್ಭಗಳಿದ್ದವು. ಅಂಥ ಕೃತಕ 'ಸಸ್ಯಭಾಷೆಗಳು' ಅಭಿವೃದ್ಧಿಯಾದ ಮೇಲಾದರೂ, ಕೃಷಿ ಕಾಡುಗಳ ಗಿಡ ಮರಗಳ ನೋವು ನಲಿವುಗಳಿಗೆ ತ್ವರಿತವಾಗಿ ಸ್ಪಂದಿಸಲು ಮನುಷ್ಯ ಕಲಿತಾನೇ? ಇಲ್ಲವಾದಲ್ಲಿ, ಕಾಡು ಕಡಿಯುವ ಅಥವಾ ಹೊಲ ತೋಟಗಳಿಗೆ ವಿಷವುಣಿಸುವಂಥ ಸಂದರ್ಭಗಳನ್ನೆಲ್ಲ ಕಂಡು, 'ಭಾಷೆ ತಿಳಿಯದ ಮೂಢ' ಎಂದು ಪಿಸುಗುಡುತ್ತ ಮನುಷ್ಯನನ್ನೇ ಸಸ್ಯಲೋಕವು ಅಣಕಿಸಿಯಾವು! ❖

ಕಂಡಿರಾ ಮಲಿಯಾಬಾದ್ ಕಲ್ಲಾನೆಗಳನು!

ಕಲ್ಲಾನೆಗಳು

ಇತಿಹಾಸ ಹೇಳುವ ಶಾಸನಗಳು

ಒಂಬತ್ತನೇ ಶತಮಾನದಿಂದ ಆರಂಭವಾಗುವ ಇಲ್ಲಿನ ಇತಿಹಾಸ ಕುರಿತು ಹೇಳುವ ಎರಡು ಶಾಸನಗಳಿವೆ. ಅಲ್ಲದೆ ಕೋಟೆಯ ಬೃಹದಾಕಾರದ ಕಲ್ಲುಗಳ ಮೇಲೆ ರೇಖಾಚಿತ್ರಗಳನ್ನು ಮತ್ತು ಉಬ್ಬುಶಿಲ್ಪಗಳನ್ನು ಕಾಣಬಹುದು. ಇವು ಚರಿತ್ರೆಗೆ ಪೂರಕವಾಗಿ ಮಾಹಿತಿ ಒದಗಿಸುತ್ತವೆ. ಹದಿಮೂರನೇ ಶತಮಾನದಲ್ಲಿ ರಾಯಚೂರು ಕೋಟೆಯನ್ನು ಕಾಕತೀಯ ರಾಣಿ ರುದ್ರಮ್ಮ ದೇವಿಯ ಕಾಲದಲ್ಲಿ ನಿರ್ಮಿಸಲಾಯಿತು. ಹದಿನಾರನೇ ಶತಮಾನದಲ್ಲಿ ಮೊದಲು ಮುಸ್ಲಿಂ ರಾಜರ ವಶದಲ್ಲಿದ್ದು, 1520ರಲ್ಲಿ ಶ್ರೀಕೃಷ್ಣ ದೇವರಾಯ ರಾಯಚೂರು ಕೋಟೆಯನ್ನು ಗೆದ್ದುಕೊಂಡ ನಂತರ ಇದು ವಿಜಯನಗರ ಆಡಳಿತಕ್ಕೆ ಒಳಪಟ್ಟಿತು. 13 ಮತ್ತು 14ನೇ ಶತಮಾನದಲ್ಲಿ ಕಾಕತೀಯರು ಹೊರ ಕೋಟೆ ಮತ್ತು ಹೊರ ಕೋಟೆಯ ನಿರ್ಮಾಣ ಮಾಡಿದ್ದಾರೆ.

ಈರಣ್ಣ ಬೆಂಗಾಲಿ

ಕರ್ನಾಟಕದ ಕೃಷ್ಣಾ ಮತ್ತು ತುಂಗಾ ನದಿಗಳ ನಡುವಿನ ಅಂಗಳವಾದ ರಾಯಚೂರು ಐತಿಹಾಸಿಕ ತಾಣವಾಗಿದೆ. ಇಲ್ಲಿ ನಮಗೆ ಇತಿಹಾಸದ ಕುರುಹುಗಳು ಇಂದಿಗೂ ಕಾಣಸಿಗುತ್ತವೆ. ರಾಯಚೂರಿನಿಂದ ದಕ್ಷಿಣಕ್ಕೆ ಹತ್ತು ಕಿಲೊಮೀಟರ್ ಅಂತರದಲ್ಲಿರುವ ಪುರಾತನ ಗ್ರಾಮ ಮಲಿಯಬಾದ್ ಸಿಗುತ್ತದೆ. ಹಳೆಯ ಮಲಿಯಬಾದ್ ಮತ್ತು ಹೊಸ ಮಲಿಯಾಬಾದ್ ಎಂಬ ಎರಡು ಗ್ರಾಮಗಳಿದ್ದು, ಹಳೆಯ ಮಲಿಯಾಬಾದ್ ಇತಿಹಾಸ ಕುರಿತು ಆಸಕ್ತಿ ಹೊಂದಿರುವವರ ಗಮನ ಸೆಳೆಯುತ್ತದೆ.

ಈ ಮಲಿಯಾಬಾದ್ ಗ್ರಾಮವು ತನ್ನ ಒಡಲಲ್ಲಿ ಎರಡು ಸುತ್ತಿನಕೋಟೆಗಳನ್ನು, ಪುರಾತನ ದೇವಾಲಯಗಳನ್ನು, ವೀರಗಲ್ಲುಗಳನ್ನು, ಶಾಸನಗಳನ್ನು, ನಾಗಶಿಲ್ಪಗಳನ್ನು, ಭಗ್ನಗೊಂಡ ಇತರೆ ಶಿಲ್ಪಗಳನ್ನು, ಇನ್ನಿತರ ಅವಶೇಷಗಳನ್ನು ಅಲ್ಲದೆ ಸುತ್ತಲೂ ಬೆಟ್ಟ ಗುಡ್ಡ, ಅರಣ್ಯ, ವಿವಿಧ ಪ್ರಾಣಿ-ಪಕ್ಷಿಗಳನ್ನು, ಬೆಟ್ಟದ ರಾಮೇಶ್ವರ ದೇವಾಲಯ, ಗೋ ಶಾಲೆಯನ್ನು ಇಟ್ಟುಕೊಂಡಿದೆ.

ರಾಯಚೂರಿಗೂ ಆನೆಗಳಿಗೂ ನಂಟಿದೆ!

ರಾಯಚೂರು ನಗರದ ಹೃದಯ ಭಾಗವಾದ ತೀನ್ ಕಂದಿಲ್ ವೃತ್ತದಲ್ಲಿ ಐತಿಹಾಸಿಕವಾದ ಒಂದು ದೊಡ್ಡ ಆನೆಯ ಜೊತೆ ಎರಡು ಪುಟ್ಟದಾದ ಮರಿಯಾನೆಗಳ ಮೂರ್ತಿಗಳನ್ನು ಇಂದಿಗೂ ಕಾಣಬಹುದು. ರಾಯಚೂರು ನಗರಸಭೆಯು ತನ್ನ ಲಾಂಛನವಾಗಿ ಅಲಂಕೃತ ಆನೆಯ ಚಿತ್ರವನ್ನು ಹೊಂದಿದೆ. ಇತಿಹಾಸ ಪ್ರಸಿದ್ಧ ಮಲಿಯಾಬಾದ್‌ನಲ್ಲಿ ಕಲ್ಲಾನೆಗಳೂ ಇವೆ.

ಎಲ್ಲರ ಚಿತ್ತ ಸೆಳೆಯುವ ಮಲಿಯಾಬಾದ್‌ನ ಕಲ್ಲಾನೆಗಳ ವಿಶೇಷತೆ ಬಗ್ಗೆ ಹೇಳಬೇಕೆಂದರೆ ದಕ್ಷಿಣಾಭಿಮುಖವಾಗಿ ಕೆತ್ತಿರುವ ಮರಿಯಾನೆಗಳು ಏಕಶಿಲೆಯಲ್ಲಿ ಪ್ರತ್ಯೇಕವಾಗಿ ನಾಲ್ಕು ಅಡಿ ಎತ್ತರ ಹಾಗೂ ನಾಲ್ಕು ಅಡಿ ಅಗಲ ಹೊಂದಿದ್ದು ಈ ಕಲ್ಲಾನೆಗಳ ಕೊರಳಲ್ಲಿ ಸರ, ಗಂಟೆ, ಸರಪಳಿ, ಹೂವಿನಹಾರಗಳು, ಸೊಂಡಿಲಲ್ಲಿ ಹೂವು, ಕಾಲುಗಳಿಗೆ ಗೆಜ್ಜೆಗಳು ಕೊರೆಗಳಿಗೂ ಅಲಂಕಾರವನ್ನು ಕಾಣಬಹುದು. ಸೂಕ್ಷ್ಮ ಕೆತ್ತನೆಗಳು, ಕುಸರಿ ಕೆಲಸಗಳು ಆನೆಗಳ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಕಲ್ಲಾನೆಗಳು ನಯನ ಮನೋಹರವಾಗಿವೆ.

ಬಟಾಬಯಲಿನಲ್ಲಿ ಬಿಸಿಲು, ಮಳೆ, ಗಾಳಿಗೆ ಸೆಡ್ಡು ಹೊಡೆದು ಹೊಲದಲ್ಲಿ ನಿಂತಿರುವ ಇವುಗಳು, ಒಂದು ಕಾಲನ್ನು ಮೇಲೆತ್ತುವ ಮೂಲಕ ನಡೆಯುಂತೆ ಕಾಣುತ್ತವೆ. ಆನೆಯ ಪಕ್ಕ ಯಾವುದೋ ಕಟ್ಟಡವಿದ್ದ ಭಗ್ನ ಅವಶೇಷಗಳನ್ನು ಕಾಣಬಹುದು. ಇತಿಹಾಸ ತಜ್ಞರ ಪ್ರಕಾರ ಇದು ವಿಷ್ಣು ದೇವಾಲಯವೆಂದು ಹೇಳಲಾಗುತ್ತದೆ. ದೇವಾಲಯದ ಮುಂದೆ ಮೆಟ್ಟಿಲುಗಳ ಎರಡು ಬದಿಗಳಲ್ಲಿ ಇಂತಹ ಕಲ್ಲಾನೆಗಳನ್ನು ಕೆತ್ತಿಸಿ ಸ್ಥಾಪಿಸಲಾಗುತ್ತಿತ್ತು ಎಂದು ಸಹ ಹೇಳಲಾಗುತ್ತದೆ.

ಕೆಲ ಪ್ರವಾಸಿಗರು ಕಲ್ಲಾನೆಗಳ ಮೇಲೆ ಏನೇನೋ ಕೆತ್ತುವುದರ ಮೂಲಕ ಐತಿಹಾಸಿಕ ಕುರುಹುಗಳ ಕಲಾತ್ಮಕತೆಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ನಿಧಿಯಾಸೆಗೆ ಕೆಲ ಕಿಡಿಗೇಡಿಗಳು ಕಲ್ಲಾನೆಗಳನ್ನು ಭಗ್ನಗೊಳಿಸುತ್ತಿದ್ದಾರೆ. ಅತ್ಯಂತ ಭಾರವಾದ ಈ ಎರಡು ಕಲ್ಲಾನೆಗಳು ಬಾಗಿವೆ, ನೆಲಕ್ಕೆ ಒರಗುವ ಹಂತದಲ್ಲಿವೆ. ಇವುಗಳ ಸಂರಕ್ಷಣಾ ಕಾರ್ಯ ಕೂಡಲೇ ನಡೆಯಬೇಕಾಗಿದೆ. ಐತಿಹಾಸಿಕ ಕ್ಷೇತ್ರವಾದ ಮಲಿಯಾಬಾದ್‌ನಲ್ಲಿ ಮತ್ತಷ್ಟು ಸಂಶೋಧನೆ ನಡೆಯಬೇಕು. ಇಲ್ಲಿನ ನಿಖರ, ಸಮಗ್ರ ಇತಿಹಾಸ ಬೆಳಕಿಗೆ ಬರಬೇಕು. ಕಲ್ಲಾನೆಗಳನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಳ್ಳಬೇಕು. ❖

ಕಥೆ

ಹಿಂದಿ : ಲಕ್ಷ್ಮೀಧರ ಮಾಲವೀಯ
ಕನ್ನಡಕ್ಕೆ : ಡಿ.ಎನ್. ಶ್ರೀನಾಥ್
ಅವರ
ರಜಾ ದಿನ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಚನ್ನಪ್ಪ ಅಂಗಡಿ
ಅವರ
ದ್ವಿಜ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮೊದಲ ಓದು

ಮಕ್ಕಳಿಗೆ ಆಪ್ತವಾಗುವ ಕತೆಗಳು



ಪು: 88
₹140

ಮಾಯಾ ಗುಹೆ ಮತ್ತು ಇತರ ಕತೆಗಳು
ಲೇ: ನವ್ಯಾ ಆರ್.ಕತ್ತಿ
ಪ್ರ: ವೀರಲೋಕ ಪ್ರಕಾಶನ
ಸಂ: 7022122121

ಮಗುವೊಂದು ಮಕ್ಕಳ ಕತೆ ಬರೆದರೆ ಹೇಗಿರುತ್ತದೆ? ತನ್ನ ಕಲ್ಪನಾಶಕ್ತಿಗೆ ಅಕ್ಷರಗಳ ರೆಕ್ಕೆ ನೀಡಿ, ಹೀಗೊಂದು ಊರಲ್ಲಿ ಅಂತ ಶುರುವಾಗುವ ಕತೆಯಲ್ಲಿ ಚಂದಮಾಮಾದ ಕತೆಯಂತೆ ನಾಯಿ, ಬೆಕ್ಕುಗಳೂ ಮಾತಾಡತೊಡಗುತ್ತವೆ. ಸರಳ ವಾಕ್ಯ, ಸರಳ ಪದಗಳು. ಮಕ್ಕಳು ಓದಿ ಮುಗಿಸಬಹುದಾದ ಕತೆಗಳು.

ಮಕ್ಕಳಷ್ಟೆ ಅಲ್ಲ, ದೊಡ್ಡವರು ಓದಿದರೂ ಒಂದರೆ ಕ್ಷಣ ತಮ್ಮ ಬಾಲ್ಯಕ್ಕೆ ಮರಳುವಂತಿವೆ. ಕತೆಗೆ ತಕ್ಕಂತಹ ಆಕರ್ಷಕ ಚಿತ್ರಗಳು, ಪುಸ್ತಕದ ಗಾತ್ರ ಎಲ್ಲವೂ ಮಕ್ಕಳನ್ನು ಗಮನದಲ್ಲಿರಿಸಿಕೊಂಡೇ ವಿನ್ಯಾಸಗೊಳಿಸಲಾಗಿದೆ.

ಕತೆಗಳಲ್ಲಿಯೂ ತನಗೆ ಗೊತ್ತಿರುವ ಊರುಗಳನ್ನೇ ಬರೆದಿರುವ ನವ್ಯಾ, ತಾನಿರುವ ಆಲಮೇಲ, ತನ್ನ ಹತ್ತಿರದ ತಾರಾಪೂರ ಹೀಗೆ ಸುತ್ತಲಿನ ಊರುಗಳನ್ನೇ ಬಳಸಿಕೊಂಡಿದ್ದಾಳೆ. ರಾಜ, ರಾಣಿ, ಪ್ರಾಣಿ, ದೆವ್ವ, ದೇವತೆ, ಗಿಡ, ನದಿ, ಕಾಡು ಎಲ್ಲವೂ ಕಥಾ ವಸ್ತುಗಳಾಗಿವೆ. ಕತೆಯ ಪಾತ್ರಗಳಾಗಿವೆ.

ಪುಟ್ಟ ಪುಟ್ಟ ಕತೆಗಳಿದ್ದು, ಇನ್ನೂ ಇದೆಯಾ ಎನ್ನುವಾಗಲೇ ಕತೆ ಮುಗಿದು ಹೋಗುತ್ತವೆ. ಓದುವ ಮಗುವಿಗೂ ಕತೆ ಹಿಗ್ಗಲಿಸುವ ಅವಕಾಶವೂ ನೀಡಿದಂತಿದೆ ಈ ಕಥಾ ಸಂಕಲನ.

'ಅಂಬೇಡ್ಕರ್' ಚಿಂತನೆಯ ಸಾರ



ಪು: 296
₹250

ಮಾನವತೆಯ ಮಾರ್ಗದಾತ
ಲೇ:ಅಪ್ಪಗೆರೆ ಸೋಮಶೇಖರ್
ಪ್ರ: ಚಿಂತನ ಚಿತ್ತಾರ, ಮೈಸೂರು
ಸಂ: 9945668082

ಭಾರತ ಭಾಗ್ಯವಿಧಾತ ಅಂಬೇಡ್ಕರ್ ಬಹುದೊಡ್ಡ ಪ್ರತಿಮೆ. ಬಾಬಾಸಾಹೇಬರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಅವರ ಕುರಿತು ಲೇಖಕರು ಜ್ಞಾನಿ ಅಂಬೇಡ್ಕರ್ ಅವರ ಚಿಂತನೆಯ ಬಹುಮುಖವನ್ನು ಪರಿಚಯಿಸಿದ್ದಾರೆ. ಸಾಹಿತ್ಯ, ಚರಿತ್ರೆ, ದಾರ್ಶನಿಕ ಪರಂಪರೆಯನ್ನು ಸ್ಮರಿಸುವ ಮೂಲಕ ಅಂಬೇಡ್ಕರ್ ಚಿಂತನೆ ಮರೆತರೆ ಭಾರತಕ್ಕೆ ಭವಿಷ್ಯ ಇಲ್ಲ ಎಂಬ ಸ್ಪಷ್ಟ ನಿಲುವನ್ನು ಲೇಖಕರು 'ಬಹುತ್ವ ಭಾರತದ ನೈತಿಕ ಪ್ರಶ್ನೆಗಳು' ಎಂಬ ಅಧ್ಯಾಯದಲ್ಲಿ ನಿರೂಪಿಸಿದ್ದಾರೆ.

'ಪೂನಾ ಒಪ್ಪಂದ'ದಲ್ಲಿ ನಿಮ್ನ ವರ್ಗಗಳೂ ಸೇರಿ ಸಮಾಜದ ಎಲ್ಲ ವರ್ಗಗಳಿಗೂ ಪ್ರತ್ಯೇಕ ಮತಕ್ಷೇತ್ರಗಳನ್ನು ಬ್ರಿಟಿಷ್ ಸರ್ಕಾರ ರೂಪಿಸುತ್ತದೆ. ಹಿಂದೂಗಳಿಂದ ನಿಮ್ನವರ್ಗವನ್ನು ಬೇರ್ಪಡಿವುದನ್ನು ವಿರೋಧಿಸಿ ಮಹಾತ್ಮ ಗಾಂಧೀಜಿ ಯರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಕೂರುತ್ತಾರೆ. ಸತ್ಯಾಗ್ರಹ ಹಿಂದಕ್ಕೆ ತೆಗೆದುಕೊಳ್ಳಲು ಅಂಬೇಡ್ಕರ್–ಗಾಂಧೀಜಿ ಈ ಒಪ್ಪಂದ ಏರ್ಪಡುತ್ತದೆ. ಆನಂತರ ಸಮಾಜವನ್ನು ಉದ್ದೇಶಿಸಿ ಅಂಬೇಡ್ಕರ್ 'ಒಪ್ಪಂದ ನನಗೆ ಸಮಾಧಾನ ತಂದಿದೆ. ಆದರೆ ಮನಸ್ಸಿಗೆ ಅದು ಸಂತೋಷವನ್ನು ತಂದಿಲ್ಲ; ಸಂಕಟವೊಂದು ತಿಳಿಯಾಗಿ ಬಗೆಹರಿಯಿತೆಂಬ ತೃಪ್ತಿ ಇದೆಯಾದರೂ ನನ್ನ ಕರ್ತವ್ಯವನ್ನು ಸಾಧಿಸುವಲ್ಲಿ ವಿಫಲನಾಗಿದ್ದೇನೆ' ಎಂದು ಹೇಳುತ್ತಾರೆ.

ರಾಜಕೀಯ ಅಧಿಕಾರವೇ ಸಮಾಜದ ಬದಲಾವಣೆಯ ಕೀಲಿಕೈ ಎನ್ನುವುದನ್ನು ಪ್ರತಿಪಾದಿಸುವ ಅಂಬೇಡ್ಕರ್ ಮಂದಿರ ಪ್ರವೇಶಕ್ಕಿಂತ ಶಾಸನ ಸಭೆ ತಮ್ಮ ಆದ್ಯತೆ ಎನ್ನುವುದನ್ನು ಹೇಳಿದ್ದೂ ಒಂದು ಚಾರಿತ್ರಿಕ ಸಂದರ್ಭ. ಕೇರಳದ ಗುರುವಾಯೂರಿನ ಮಂದಿರ ಪ್ರವೇಶ ಅಸ್ಪೃಶ್ಯರಿಗೆ ಕಲ್ಪಿಸಬೇಕು. ಇಲ್ಲದಿದ್ದರೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಕೇಳಪ್ಪನ್ ಘೋಷಿಸುತ್ತಾರೆ. ಅವರನ್ನು ಸಂಪರ್ಕಿಸಿದ ಅಂಬೇಡ್ಕರ್ 'ಅಸ್ಪೃಶ್ಯರಿಗೆ ಇಂದು ತುರ್ತಾಗಿ ಬೇಕಾಗಿರುವುದು ಮಂದಿರ ಪ್ರವೇಶದ ಹಕ್ಕಲ್ಲ. ರಾಜಕೀಯ ಪ್ರಾತಿನಿಧ್ಯವನ್ನು ಪಡೆದುಕೊಳ್ಳುವ ಹಕ್ಕು' ಎಂದು ಪ್ರತಿಪಾದಿಸುತ್ತಾರೆ ಎಂಬ ಅಂಶವನ್ನು ದಾಖಲಿಸುತ್ತಾರೆ. ಹೀಗೆ ಒಟ್ಟು 32 ಅಧ್ಯಾಯಗಳನ್ನು ಈ ಕೃತಿ ಒಳಗೊಂಡಿದೆ.

ವಿಶಿಷ್ಟ ನಿರೂಪಣೆಯ ನನ್ನ ತಂಗಿ ಈಡಾ

ಪು: 214
₹260

ನನ್ನ ತಂಗಿ ಈಡಾ
ಮೂಲ: ಕಾರೊಲೀನ ವಾಲ್
ಕನ್ನಡಕ್ಕೆ: ಹರ್ಷ ರಘುರಾಮ್
ಪ್ರಕಾಶನ: ಛಂದ
ಸಂ: 9844422782

ಸ್ವಾಭಿಮಾನವೇ ಮೈವೆತ್ತಂತ ಅಂತರ್ಮುಖಿ ಹೆಣ್ಣುಮಗಳೊಬ್ಬಳ ಸುತ್ತ ಹೆಣೆಯಲಾದ ಸುಂದರ ಕಾದಂಬರಿಯೇ 'ನನ್ನ ತಂಗಿ ಈಡಾ'. ಬಾಲ್ಯದಿಂದಲೂ ಬರೀ ನೋವು, ಅಪಮಾನ, ಸಂಕಷ್ಟಗಳನ್ನೇ ತುಂಬಿಕೊಂಡಿದ್ದರೂ ಛಲಬಿಡದೇ ಬದುಕು ಕಟ್ಟಿಕೊಳ್ಳಲು ತಹತಹಿಸುವ ಹೆಣ್ಣುಮಗಳ ಕತೆಗೆ ಗಡಿ ಎಂಬುದು ಇರಬಹುದೇ?

ಜರ್ಮನಿಯ ಒಂದು ಹಳ್ಳಿಯಲ್ಲಿ ದೂರಾದ ಅಪ್ಪ, ಕುಡುಕ ಅಮ್ಮ ಹಾಗೂ ಬದುಕನ್ನು ಪ್ರೀತಿಸಲು ಕಾರಣ ಒಂದೇ ಎಂಬಂತಿರುವ ಪುಟ್ಟ ತಂಗಿ 'ಈಡಾ' ಹೀಗೆ ಇವರ ನಡುವೆ ಬದುಕನ್ನು, ಅದು ಕೊಟ್ಟ ಜವಾಬ್ದಾರಿಯನ್ನು ಜತೆ ಜತೆಗೆ ಸ್ವಾತಂತ್ರ್ಯದ ಖುಷಿಯನ್ನು ಅನುಭವಿಸಲು ಹೆಣಗಾಡುವ ದಿಟ್ಟ ಹೆಣ್ಣುಮಗಳೇ ಟಿಲ್ಡಾ. ಈಕೆಯ ಈ ಕಾದಂಬರಿಯ ಕಥಾನಾಯಕಿ.

ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡುತ್ತಾ, ಗಣಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತ, ದೂರದ ಬರ್ಲಿನ್‌ನಲ್ಲಿ ಪಿಎಚ್‌ಡಿ ಪದವಿ ಪಡೆಯುವ ಕನಸು ಕಾಣುತ್ತ, ನೋವು ನೀಗಿಕೊಳ್ಳಲು ಈಜುವುದನ್ನು ಧ್ಯಾನ ಮಾಡಿಕೊಂಡ ಟಿಲ್ಡಾ ಎಂಬ ಹರೆಯದ ಹುಡುಗಿಯ ಆಳದಲ್ಲಿ ಹುದುಗಿರಬಹುದಾದ ಆಸೆ, ಆಕಾಂಕ್ಷೆ, ಪ್ರೇಮವನ್ನು ಬಹಳ ಚಂದದ ನಿರೂಪಣೆಯಲ್ಲಿ ಕಟ್ಟಿಕೊಡಲಾಗಿದೆ. ಪುಟ್ಟ 'ಈಡಾ' ಮತ್ತು ಅವಳ ಬಣ್ಣದ ಪ್ರಪಂಚ ಮತ್ತು ಅದರ ವಿವರಗಳು ಒಟ್ಟು ಕಥನಕ್ಕೆ ಒದಗಿಬಂದ ದೊಡ್ಡ ರೂಪಕದಂತೆ ಭಾಸವಾಗುತ್ತದೆ.

ಕಲಿಯಲು ಬರ್ಲಿನ್‌ಗೆ ಹೋಗುವ ಮುನ್ನ ಸಂಕೋಚ ಪ್ರವೃತ್ತಿಯ ಈಡಾಳನ್ನು ದಿಟ್ಟಳಾಗಿ ಮಾಡಬೇಕೆಂಬ ಟಿಲ್ಡಾ ಕನಸು, ಅದಕ್ಕಾಗಿ ಅವಳು ಹಾಕಿಕೊಳ್ಳುವ ಯೋಜನೆಗಳು ಏತನ್ಮಧ್ಯೆ ಸಹಜವೆಂಬಂತೆ ಆಗಿ ಹೋಗುವ ಪ್ರೀತಿ ಎಲ್ಲವನ್ನು ಜರ್ಮನಿಯ ಕಾದಂಬರಿಗಾರ್ತಿ ಕಾರೊಲೀನ ವಾಲ್ ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಇದನ್ನು ಕನ್ನಡೀಕರಿಸಿದ್ದಾರೆ ಹರ್ಷ ರಘುರಾಮ್. ಸಮಕಾಲೀನ ಕಾದಂಬರಿಯೊಂದನ್ನು ಕನ್ನಡದ ಓದುಗರಿಗೆ ನೀಡಬೇಕೆಂಬ ಹರ್ಷ ಅವರ ಹಂಬಲವನ್ನು ಮೆಚ್ಚಲೇಬೇಕು.

ಪ್ರೀತಿ ಮತ್ತು ಜವಾಬ್ದಾರಿಗಳ ನಡುವಿನ ಹೊಯ್ದಾಟದ ಕಥೆ ಸಾಮಾನ್ಯ ಎನಿಸಿದರೂ, ಹೇಳದೆಯೂ ಉಳಿಯುವ ಪ್ರೇಮದ ಸವಿಯನ್ನು ಕಾದಂಬರಿಯುದ್ದಕ್ಕೂ ಉಣಬಡಿಸಲಾಗಿದೆ. ಆಗಾಗ್ಗೆ ಬಂದು ಹೋಗುವ ಮಳೆ, ತಿನಿಸಿನ ಪದಾರ್ಥಗಳ ವಿವರಗಳು ಕಥೆಗೆ ದಟ್ಟ ಚೌಕಟ್ಟನ್ನು ಒದಗಿಸಿದೆ. ವಿಶಿಷ್ಟ ನಿರೂಪಣೆ ಓದಿನ ಹುರುಪನ್ನು ಹೆಚ್ಚಿಸುತ್ತದೆ. ಆದರೆ ಅನುವಾದವನ್ನು ಇನ್ನಷ್ಟು ಕನ್ನಡದ ಜಾಯಮಾನಕ್ಕೆ ಒಗ್ಗಿಸಲು ಮತ್ತು ಆರ್ದ್ರವಾಗಿಸುವ ನಿಟ್ಟಿನಲ್ಲಿ ಅನುವಾದಕರು ಪ್ರಯತ್ನಪಡಬೇಕಿತ್ತು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಶ್ರೀನೋಟ

ಕುವೆಂಪು ಅವರು 'ಮನೆಯ ಉದ್ಯಾನದಲ್ಲಿ ಆಶ್ವೀಜಮಾಸದ ಪ್ರಾತಃಸಮಯದ ಹೊಂಬಿಸಿಲಿನಲ್ಲಿ ಹಸುರು ಹೂವುಗಳ ವೈಭವವನ್ನು ಸವಿಯುತ್ತಿರುವಾಗ ಉಂಟಾದ ಅನುಭವ'ವನ್ನು 'ಕಣ್ಣು' ಕವನದಲ್ಲಿ ಭವ್ಯವಾಗಿ ಚಿತ್ರಿಸಿದ್ದಾರೆ. ಹೂವು ಸೌಂದರ್ಯದೊಂದಿಗೆ ನಿರ್ಮಲವಾಗಿರುತ್ತದೆ. ಅದು ತನ್ನ ಕಂಪಿನೊಂದಿಗೆ ಆನಂದವನ್ನುಣಿಸುತ್ತದೆ. ಅವರು ಭಗವಂತನ ಕೃಪೆಯ ಈ ಕಣ್ಣು ಹೂದೋಟದ 'ಶ್ರೀನೋಟ'ವನ್ನು ಸವಿಯುತ್ತಿದೆ ಎಂದು ನವೀನ ಪದದಿಂದ ತಾವು ಕಂಡ ಆನಂದಾನುಭೂತಿಯನ್ನು ಅಭಿವ್ಯಕ್ತಿಸಿದ್ದಾರೆ.

ಎಂತಹ ಕೃಪೆ ಈ ಕಣ್ಣು
ಹೂದೋಟದ ಶ್ರೀನೋಟವ ಸವಿಯುತ್ತಿಹ
ಈ ಕಣ್ಣು!

ಸೌಂದರ್ಯಯಾಜಿ

'ಉದಯರವಿ' ಮನೆಯ ಉದ್ಯಾನದಲ್ಲಿ ಕಂಪುಸೂಸಿ ಕಂಗೊಳಿಸುತ್ತಿರುವ ಸೂರ್ಯಕಾಂತಿ, ಗುಲಾಬಿ, ಜರ್ಬರಾ, ಮ್ಯಾಗ್ನೋಲಿಯಾ ಮುಂತಾದ ವಿವಿಧ ಬಣ್ಣದ ಹಲವು ಹೂವುಗಳ ಸೌಂದರ್ಯದ ಆರಾಧನೆಯಲ್ಲಿ ಲೀನವಾಗಿದ್ದಾರೆ. ಅವರು ಸೌಂದರ್ಯಯಜ್ಞ (ಯಾಜಿ) ದಲ್ಲಿ ಯಾಜನ (ಯಜ್ಞವನ್ನು ಮಾಡಿಸುವಿಕೆ)ರಾಗಿದ್ದಾರೆ. 'ಸೌಂದರ್ಯಯಾಜಿ' ಅವರ ಸೃಷ್ಟಿಯ ಪದ. ಆ ಯಜ್ಞವು ಸತ್ಯ ಶಿವ ಸೌಂದರ್ಯದ್ದಾಗಿದೆ. ಅದಕ್ಕೆ ಕೋಗಿಲೆ ಮುಂತಾದ ಪಕ್ಷಿಗಳ ಧ್ವನಿ ಕುಕಿಲುಗಳ ಕೂಜನ ಮಂಗಳವಾದ್ಯವಾಗಿದೆ. ಸ್ಪಟಿಕ ಪುಷ್ಪ ಲಾಜನ (ಬತ್ತದ ಅರಳು)ವಾಗಿದೆ. ಅವರು ಯಾಗ ನಡೆಸುತ್ತಿರುವುದು ಲೋಕಕಲ್ಯಾಣಕರವಾದ 'ಸರ್ವಸೃಷ್ಟಿಯ ಸರ್ವಸುಖ'ಕ್ಕಾಗಿ. ಇದೊಂದು ಕವಿಯ ಹೃದಯ ಅನುಭಾವಿಸಿ ಸವಿದ ಸೌಂದರ್ಯ ರಸದ ಅಮೃತದೂಟ; ಅಲೌಕಿಕ ಸುಖ.

'ಕೋಕಿಲಾದಿ ಕೂಜನ;
ಸ್ಫಟಿಕಪುಷ್ಪಲಾಜನ;
ಸರ್ವಸೃಷ್ಟಿಯ ಸರ್ವಸುಖಕೆ
ಸತ್ಯ ಶಿವ ಸೌಂದರ್ಯಮುಖಕೆ
ಕವಿಯ ಯಾಜನ'

ಮಾನ್ಸೂನ್ ಚಾರಣ ಅನುಭವದ ಹೂರಣ

ಮಳೆಗಾಲದಲ್ಲಿ ಹೀಗೆ ಜಿಟಿ ಜಿಟಿ ಮಳೆಯಲ್ಲಿ ಹೆಜ್ಜೆ ಹಾಕುತ್ತಾ ಸಾಗುವುದೇ ಭಿನ್ನ ಅನುಭವ...

ಶೇಖರ್ ಗೌಳೇರ್

> ಸದಾ ಬಣ್ಣಬಣ್ಣದ ದೀಪಗಳಿಂದ ಕಂಗೊಳಿಸುತ್ತಿದ್ದ ಗೋವಾ ಮಳೆಯ ಮಾಯಾಲೋಕದಲ್ಲಿ ಮುಚ್ಚಿಹೋಗಿತ್ತು. ಮಡಗಾಂವ್ ತಲುಪುವವರೆಗೂ ಮಳೆ ಧೋ ಎಂದು ಬೀಳುತ್ತಲೇ ಇತ್ತು. ಮಳೆ ಚಾರಣದಲ್ಲಿ ಪುಟ್ಟ ಪುಟ್ಟ ಜಲಪಾತಗಳ ಸರಣಿಯನ್ನು ನೋಡುತ್ತಾ ಹೆಜ್ಜೆ ಹಾಕಿದ ಅನುಭವವಿದು...

ಜುಲೈ ತಿಂಗಳ ಮಳೆಗಾಲ ಆರಂಭವಾಗುತ್ತಿದ್ದಂತೆ ಶಿವಮೊಗ್ಗದ ಯೂಥ್ ಹಾಸ್ಟೆಲ್ ಗೆಳೆಯರು ಗೋವಾದ ನ್ಯಾಷನಲ್ ಮಾನ್ಸೂನ್ ಟ್ರೆಕಿಂಗ್ ಹೊರಡಲು ಪ್ರೇರೇಪಿಸುತ್ತಿದ್ದರು. ಆಗುಂಬೆ, ಹುಲಿಕಲ್ ಘಾಟಿಗಳಲ್ಲಿ ಮಳೆಗಾಲದ ಚಾರಣ ಮಾಡಿದ ನನಗೆ, ಗೋವಾ ಮಾನ್ಸೂನ್ ಚಾರಣ ಕೈಬೀಸಿ ಕರೆದಂತಿತ್ತು. ಶಿವಮೊಗ್ಗದಿಂದ ಹೊನ್ನಾವರಕ್ಕೆ ಬಸ್ಸಲ್ಲಿ ಹೊರಟಾಗ ಮಳೆ ಜಿಟಿ ಜಿಟಿ ಬೀಳುತ್ತಲೇ ಇತ್ತು. ಜೋಗ ದಾಟಿದ ಕೂಡಲೇ ಮಳೆ ರಪ ರಪ ಸುರಿಯುತ್ತಿತ್ತು. ಗೇರುಸೊಪ್ಪ ಕಣಿವೆಯ ಬಂಗಾರ ಕುಸುಮ ಜಲಪಾತ ಕಿಟಕಿಯ ಮೂಲಕ ರುದ್ರರಮಣೀಯವಾಗಿ ಕಾಣಿಸಿತ್ತು. ರಸ್ತೆಬದಿಯ ಕಿರುಜಲಪಾತಗಳಂತೂ ಕಣ್ಣಿಗೆ ಹಬ್ಬ ಉಂಟುಮಾಡಿದ್ದವು.

ಕರಾವಳಿಯ ಹೊನ್ನಾವರ, ಕುಮಟಾ, ಗೋಕರ್ಣ ರಸ್ತೆ, ಮಿರ್ಜಾನ, ಅಂಕೋಲಾ ಹಾಗೂ ಕಾರವಾರ ಭಾರೀ ಮಳೆ ನೀರಿನಿಂದ ಸುತ್ತುವರಿದಿದ್ದವು. ಕೆಲವು ತೋಟದ ಮನೆಗಳು ನೀರಲ್ಲಿ ಮುಳುಗಿ ನಿಂತಿದ್ದವು. ಮಡಗಾಂವ್ ತಲುಪುವವರೆಗೂ ಮಳೆ ಧೋ ಎಂದು ಬೀಳುತ್ತಲೇ ಇತ್ತು. ಸದಾ ಬಣ್ಣಬಣ್ಣದ ದೀಪಗಳಿಂದ ಕಂಗೊಳಿಸುತ್ತಿದ್ದ ಗೋವಾ ಮಳೆಯ ಮಾಯಾಲೋಕದಲ್ಲಿ ಮುಚ್ಚಿಹೋಗಿತ್ತು.

ಗೋವಾ 'ನ್ಯಾಷನಲ್ ಮಾನ್ಸೂನ್ ಟ್ರೆಕಿಂಗ್'ಗೆ ಹೆಸರುವಾಸಿ. ದೂದ್ ಸಾಗರ ಜಲಪಾತವನ್ನು ನೋಡಲೆಂದೇ ನಾವು ಎರಡು ದಿನ ಮೊದಲೇ ಗೋವಾ ತಲುಪಿದ್ದೆವು. ಆದರೆ ಎಡೆಬಿಡದ ಮಳೆಯಿಂದ ಗೋವಾ ಸರ್ಕಾರ ದೂದ್ ಸಾಗರ ಭೇಟಿಗೆ ಒಂದು ವಾರ ನಿರ್ಬಂಧ ಹೇರಿತ್ತು. ನಾವು ಪಣಜಿಯಿಂದ 40 ಕಿಲೊಮೀಟರ್ ದೂರದ ಸಿಕ್ವೇಲಿಯಂ ಬಳಿಯ ಅರವಲಮ್ ಜಲಪಾತ ನೋಡಿ ತೃಪ್ತಿ ಪಟ್ಟುಕೊಂಡೆವು. ಶಿಬಿರಾಧಿಕಾರಿಗಳು ನಮ್ಮ ಗುರುತಿನಪತ್ರ, ವೈದ್ಯಕೀಯಪತ್ರ ಪರಿಶೀಲಿಸಿ ನಮ್ಮನ್ನು 50 ಕಿಲೊಮೀಟರ್ ದೂರದ ಹೊರವಲಯದ ಬೇಸ್‌ಕ್ಯಾಂಪ್‌ಗೆ ಕರೆದೊಯ್ದರು. ನಮ್ಮ ಮೂಲ ಶಿಬಿರ ಡೊಂಗುರ್ಲಿ ಠಾಣೆ ಮಹದಾಯಿ ರಾಷ್ಟ್ರೀಯ ಅಭಯಾರಣ್ಯದ ಪ್ರಶಾಂತ ಜಾಗದಲ್ಲಿ ನೆಲೆಗೊಂಡಿತ್ತು.

ಮಣಿಪುರ, ಗುರುಗಾಂವ್, ನವದೆಹಲಿ, ಮುಂಬೈ, ಪೂನಾ, ಆಂಧ್ರ ಪ್ರದೇಶ ಹಾಗೂ ಕರ್ನಾಟಕ–ಹೀಗೆ ದೇಶದ ನಾನಾ ಭಾಗಗಳಿಂದ 60ಕ್ಕೂ ಹೆಚ್ಚು ಚಾರಣಿಗರು ಬಂದಿದ್ದರು. ವಿಭಿನ್ನ ಜಾತಿ, ಧರ್ಮ, ವೇಷ, ಭಾಷೆ ಎಲ್ಲವನ್ನು ಮರೆತು ಪ್ರಕೃತಿಯ ಮಳೆಯಲ್ಲಿ ಒಂದುಗೂಡಿದ್ದೆವು. ಶಿಬಿರಾಧಿಕಾರಿಗಳು ಚಾರಣದ ನಿಯಮಗಳನ್ನು, ಕಾಲ್ನಡಿಗೆಯ ದೈನಿಕ ವೇಳಾಪಟ್ಟಿಯನ್ನು ಹಾಗೂ ಎಚ್ಚರಿಕೆ, ನಿಬಂಧನೆ, ರಾಷ್ಟ್ರೀಯ ಅಭಯಾರಣ್ಯದ ಕಾನೂನುಗಳನ್ನು ವಿವರಿಸಿದರು.

ಮೊದಲ ದಿನ ಹಿವರ್‌ಖುರ್ದ್ ಜಲಪಾತಕ್ಕೆ ಹೊರಟೆವು. ಕೈಯಲ್ಲಿ ಕೋಲು, ಕಾಲಲ್ಲಿ ವಾಟರ್ ಪ್ರೂಫ್ ಶೂ ಅಥವಾ ಚಪ್ಪಲಿ, ತಲೆಗೆ ಕ್ಯಾಪು, ಮೈಗೆ ರೇನ್‌ಕೋಟ್ ಧರಿಸಿ ನಡಿಗೆ ಆರಂಭಿಸಿದೆವು. ಮಳೆಯಂತೂ ಬೀಳುತ್ತಲೇ ಇತ್ತು. ಅದಿಲ್ಲದಿದ್ದರೆ ಮಳೆ ಚಾರಣ ಎಂದು ಕರೆಯಲಾದೀತೆ? ಕೆಲವು ಯುವಕ-ಯುವತಿಯರಂತೂ ಹಾಫ್‌ಪ್ಯಾಂಟ್, ಆ್ಯಂಕಲ್ ಲೆನ್ತ್ ಪ್ಯಾಂಟ್, ಟಿ ಶರ್ಟ್ ಧರಿಸಿ ರೇನ್‌ಕೋಟ್, ಜರ್ಕಿನ್, ಛತ್ರಿಗಳ ಕಿರಿಕಿರಿಯನ್ನು ಬಿಟ್ಟು ಮಳೆಯಲ್ಲಿ ತೊಯ್ಯುತ್ತ ಸ್ವಚ್ಛಂದವಾಗಿ ವಿಹರಿಸುತ್ತಿದ್ದರು. ಹಸಿರುಹಾದಿಯಲ್ಲಿ ಹಲಸು, ಸೀಬೆ, ಸಪೋಟ ಹಾಗೂ ಗೋಡಂಬಿ ತೋಟಗಳು ಕಾಣಿಸುತ್ತಿದ್ದವು. ಮಧ್ಯ ಮಧ್ಯ ತೋಟದ ಮನೆಗಳು ಇಣುಕುತ್ತಿದ್ದವು. ದೂರದ ಪಶ್ಚಿಮಘಟ್ಟಗಳ ನೆತ್ತಿಯಿಂದ ದಾರದ ಎಳೆಗಳಂತೆ ಧರೆಗಿಳಿಯುವ ಜಲಪಾತಗಳು ಕಣ್ಣಿಗೆ ಮುದ ನೀಡುತ್ತಿದ್ದವು. ಮೊಶಾಚೊವಾಜಾರ್ ಗ್ರಾಮವನ್ನು ದಾಟಿ ಅಜ್ಞಾತ ಜಲಪಾತದ ಕಾಡುದಾರಿಯನ್ನು ತುಳಿದೆವು. ಜಾರುವ ಮೊನುಚಾದ ಕಲ್ಲುಗಳು, ಕೆಸರುಗುಂಡಿಗಳು, ಗಿಡ ಮರ, ಪೊದೆಗಳ ಸಂದಿಯಲ್ಲಿ ಸಾಗುವುದೇ ಮಳೆಗಾಲದ ವಿಶೇಷತೆ. ಆದರೆ ಜಿಗಣೆ ಇಂಬಳಗಳು ಇಲ್ಲದಿರುವುದರಿಂದ ತುರಿಕೆ ತಪ್ಪಿಸಿಕೊಂಡೆವು. ಸ್ವಲ್ಪ ಹತ್ತಿರದಲ್ಲಿಯೇ ಜುಳು ಜುಳು ನೀನಾದ ಮಾಡುವ, ಹಾವಿನಂತೆ ಹರಿಯುವ ಹಳ್ಳ ಎದುರಾಯಿತು. ಗೈಡ್ ಕೆಲವರನ್ನು ಕೈ ಹಿಡಿದು ದಾಟಿಸಿದರು. ಕೆಲವರು ಜಾರಿಬಿದ್ದು ತೊಯ್ಸಿಸಿಕೊಂಡರು. ಹೆಜ್ಜೆ ಹಾಕುತ್ತಾ ಪುಟ್ಟ ಪುಟ್ಟ ಜಲಪಾತಗಳ ಸರಣಿಯೇ ತೆರೆದುಕೊಂಡಿತು. ಸೆಲ್ಫಿಗಳು ಚುರುಕಾದವು. ಚಾರಣಿಗರು ನೀರಿಗೆ ಇಳಿದೇ ಬಿಟ್ಟರು. ನೀರಲ್ಲಿ ಮುಳುಗಿದರು. ಈಜಿದರು, ದಬದಬೆಗೆ ತಲೆಕೊಟ್ಟು ನಿಂತರು. ಮತ್ತೆ ಕೆಲವರು ನೀರಲ್ಲೇ ಕುಳಿತು ಬಿಟ್ಟರು.

ಹತ್ತಿರದ ಮತ್ತೊಂದು ಎತ್ತರದ ಜಲಪಾತಕ್ಕೆ ತೆರಳಲು ಅನುಮತಿ ಸಿಗದೇ ಇರುವುದರಿಂದ ಅಲ್ಲಿಯೇ ಒಂದು ಗಂಟೆ ನೀರಿನಲ್ಲಿಯೇ ಕಾಲ ಕಳೆದೆವು. ಮಧ್ಯಾಹ್ನ ಬಿಡುವು ಇದ್ದುದರಿಂದ ನದಿ ದಡದ, ಹಚ್ಚ ಹಸಿರು ಪರಿಸರದ ನಡುವಿನ ಪುರಾತನ ಜೈನ ಶೈಲಿಯ ಮಹಾದೇವ ದೇವಸ್ಥಾನವನ್ನು ವೀಕ್ಷಿಸಿ ಮೂಲ ಶಿಬಿರಕ್ಕೆ ವಾಪಸ್ಸಾದೆವು.

ಎರಡನೇ ದಿನದ ಮಳೆ ಚಾರಣ ಪಾಲೀ ಜಲಪಾತದ ಕಡೆ ಸಾಗಬೇಕಿತ್ತು. ಅದರ ಸುತ್ತಲಿನ ನದಿ, ತೊರೆ, ಹಳ್ಳ, ಕೊಳ್ಳಗಳು ಭರ್ಜರಿ ಮಳೆಯಿಂದ ಉಕ್ಕಿ ಹರಿಯುತ್ತಿದ್ದರಿಂದ ಅರಣ್ಯ ಇಲಾಖೆಯ ಅನುಮತಿ ದೊರೆಯದೆ ಏಳು ಕಿಲೊಮೀಟರ್ ದೂರದ ಬೆಳಗಾವಿ ರಾಷ್ಟ್ರೀಯ ಹೆದ್ದಾರಿಯ ಅಂಜಲಿ ಡ್ಯಾಮಿನ ಹಿನ್ನೀರಿಗೆ ತೆರಳಬೇಕಾಯಿತು. ಮಳೆ ಬೀಳುತ್ತಲೇ ಇತ್ತು. ರಸ್ತೆ ಬದಿಯಲ್ಲಿ ಕಾಡಿನ ಗರ್ಭದಿಂದ ಪುಟ್ಟ ಪುಟ್ಟ ಜಲಪಾತಗಳು ಭೋರ್ಗರೆಯುತ್ತಿದ್ದವು. ಯಾವುದೇ ಜಲಪಾತ ಎಷ್ಟೇ ಎತ್ತರವಿದ್ದರೂ ಅದಕ್ಕೆ ತಲೆಕೊಟ್ಟು ಯುವಕರು ಸ್ನಾನ ಮಾಡುತ್ತಿದ್ದರು. ಹರಿಯುವ ತೊರೆ ಸಿಕ್ಕರೂ ಸಾಕು, ಅದರಲ್ಲಿ ಮುಳುಗಿ ಸ್ನಾನ ಮಾಡುತ್ತಿದ್ದರು. ಸುಮಾರು 15 ಕಿಲೊಮೀಟರ್ ಅಂಜಲಿ ಡ್ಯಾಮಿನ ಹಿನ್ನೀರು ತಲುಪಿ ಅಲ್ಲಿಯೇ ಊಟ ಮಾಡಿ ಸಂಜೆ ಮೂಲ ಶಿಬಿರ ಸೇರಿದೆವು.

ಮೂರನೇ ದಿನದ ಮಳೆ ಚಾರಣವನಂತೂ ಮರೆಯಲು ಅಸಾಧ್ಯ. ಮಹಾದಾಯಿ ನದಿ ಸೇತುವೆ ದಾಟುತ್ತಲೇ ತೋಟ, ಮನೆ ಎಸ್ಟೇಟುಗಳನ್ನು ದಾಟಿ ಗುಡ್ಡ ಏರುತ್ತಿದ್ದೆವು. ಕಾಡಿನ ಗರ್ಭಹೊಕ್ಕು ಪುಟ್ಟ ಪುಟ್ಟ ತೊರೆದಾಟಿ ಏಳೂವರೆ ಕಿಲೊಮೀಟರ್ ನಡೆದಿರಬಹುದು. ಶೆಲೋಪ್ ಬುಡ್ರಕ್ ಹಳ್ಳಿಯ ಸಮೀಪದ ದೇವಸ್ಥಾನದ ಬಳಿ ಕಾಡಿನ ಕಿರುದಾರಿ ಹಿಡಿದು ಒಂದು ಕಿಲೊಮೀಟರ್ ನಡೆದಿರಬಹುದು. ಜಲಪಾತದ ಸಪ್ಪಳ ಕೇಳಿಸಿತು. ದಿಣ್ಣೆಯಿಂದ ಕೆಳಗಿಳಿದಾಗ 50-60 ಅಡಿ ಎತ್ತರದ ಎರಡು ಹಂತದ ಜಲಪಾತ ಎಲ್ಲರನ್ನೂ ಆಕರ್ಷಿಸಿತು. ಕೆಳಗೆ ಗುಂಡಿ ಇದ್ದುದರಿಂದ ಎಲ್ಲರಿಗೂ ನೀರಿಗಿಳಿದು ಸ್ನಾನ ಮಾಡಲು ಪ್ರಶಸ್ತವಾಗಿತ್ತು. ಜಲಪಾತದ ಹೆಸರು 'ಸುಲುಸುಲು' ಅಂದರೆ ಸೂರ್ಯನ ಬಿಸಿಲಿಗೆ ಫಳಫಳ ಹೊಳೆಯುವುದು. ಮತ್ತೆ ಎಲ್ಲರೂ ನದಿ ಹರಿದು ಬರುವ ವಿರುದ್ಧ ದಿಕ್ಕಿನಲ್ಲಿ ಸಾಗಿದೆವು. ದಟ್ಟಕಾಡಿನ ಅಜ್ಞಾತ ಜಾಗದಲ್ಲಿ ದಟ್ಟಕಾಡಿನ ನಡುವೆ ಮತ್ತೊಂದು 20 ಅಡಿ ಎತ್ತರದ ಸುಲುಸುಲು ಜಲಪಾತ ಕಾಣಿಸಿತು. ಹೀಗೆ ಐದಾರು ಕಿಲೊಮೀಟರ್ ವ್ಯಾಪ್ತಿಯ ಒಳಗೆ ನಾಲ್ಕಕ್ಕೂ ಹೆಚ್ಚು ಜಲಪಾತಗಳನ್ನು ನೋಡಿರಬಹುದು. ಬಹುತೇಕ ಎಲ್ಲಾ ಚಾರಣಿಗರು ಜಲಪಾತವಿದ್ದಲ್ಲಿ ಈಜಿದರು. ಸುಲುಸುಲು ಜಲಪಾತ ಎಲ್ಲರಿಗೂ ಸಂಭ್ರಮ ಮೂಡಿಸಿದ್ದವು. ಒಟ್ಟು 14 ಕಿಲೊಮೀಟರ್ ನಡೆದಿದ್ದರೂ ಯಾರ ಮುಖದಲ್ಲೂ ದಣಿವಿನ ಛಾಯೆ ಕಾಣಿಸುತ್ತಿರಲಿಲ್ಲ.

ಅವತ್ತು ಚಾರಣದ ಕೊನೆಯ ದಿನ. ಕಮತಾಲ್, ಕೆಸರವಾಲ್, ಸುರಾಲ್‌ನಂಥ ಅತಿ ಸುಂದರ ಜಲಪಾತ ನೋಡಲು ಅಬ್ಬರದ ಮಳೆಯಿಂದ ಸಾಧ್ಯವಾಗಲೇ ಇಲ್ಲ. ಆರು ಕಿಲೊಮೀಟರ್ ದೂರದ ಸಲೇಲಿ ಗ್ರಾಮದ ಹತ್ತಿರದಲ್ಲಿಯೇ ಇದ್ದ ಸಲೇಲಿ ಜಲಪಾತ ನೋಡಿ ಬಂದೆವು. 70-80 ಅಡಿ ಎತ್ತರದ ಆ ಜಲಪಾತ ನೋಡುವಾಗಲೂ ಅರಣ್ಯಾಧಿಕಾರಿಗಳು ಹಿಂಬಾಲಿಸುತ್ತಿದ್ದರು. ಹೀಗೆ ನಮ್ಮ ನಾಲ್ಕು ದಿನಗಳ ಕಾಡಿನ ಮಳೆನಡಿಗೆ, ಅಡಿಯಿಂದ ಮುಡಿಯವರೆಗೆ ಜಲಪಾತ ವೀಕ್ಷಣೆ, ಮಕ್ಕಳಂತೆ ಮಳೆಯಲ್ಲಿ ನೆನೆಯುವುದು, ನೀರಲ್ಲಿ ಕುಣಿದು ಕುಪ್ಪಳಿಸುವುದು ಅನನ್ಯ ಅನುಭವ. ನಾವು ಚಿಕ್ಕವರಿದ್ದಾಗ ನಮ್ಮ ಹಳ್ಳಿಗಳಲ್ಲಿ ಇಂಥ ಸಹಜ ಅನುಭವಗಳಾಗುತ್ತಿದ್ದವು. ಈಗ ಇಂಥ ಟ್ರೆಕಿಂಗ್ ಶಿಬಿರಗಳಲ್ಲಿ ಮಾತ್ರ ಇದು ಸಾಧ್ಯ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಶೀಲ್ರಪ್ಪ ಕಥೆಯ — ನೀರಾಟ..

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಗುಂಡ ಶಾಲೆಗೆ ರಜೆ ಇದ್ದ ಕಾರಣ ಮನೆಯ ಹತ್ತಿರವಿದ್ದ ಈಜುಕೊಳಕ್ಕೆ ಈಜಲು ಸಕಲ ತಯಾರಿಯೊಂದಿಗೆ ಹೋಗಿದ್ದ. ಈಜಲು ಸೂಕ್ತವಾದ ಬಟ್ಟೆ, ಕನ್ನಡಕ ಧರಿಸಿ ಈಜುಕೊಳಕ್ಕೆ ಧುಮುಕಿದ. ಈಜುಕೊಳಕ್ಕೆ ಅಂದು ಯಾರೋ ಕೆಲವು ಸಣ್ಣ ಮೀನುಗಳನ್ನು ತಂದುಬಿಟ್ಟಿದ್ದರು. ಗುಂಡನಿಗೆ ಅದು ಅರಿವಿಗೆ ಬರಲಿಲ್ಲ. ಈಜುಕೊಳದಿಂದ ಹೊರಬಂದ ಬಳಿಕ ಬಟ್ಟೆ ತೆಗೆಯುವಾಗ ಅದರೊಳಗಿಂದ ಕೆಲ ಮೀನುಗಳು ಹೊರಬಂದಿದ್ದನ್ನು ಕಂಡು ಗುಂಡ ಗಾಬರಿಗೊಂಡ.



ಗಣಿತದಲ್ಲಿ ಗರ್ದಿ ಗಮ್ಮತ್ತು

ಅದ್ಭುತ ಗುಣಾಕಾರ

ಇಲ್ಲಿ ಕೊಟ್ಟಿರುವ ಗುಣಾಕಾರ ಲೆಕ್ಕವನ್ನು ಗಮನಿಸಿ. ಪ್ರಾಚೀನ ಕಾಲದ ಒಬ್ಬ ಗಣಿತಜ್ಞ ಕ್ಯಾಲ್ಕುಲೇಟರ್ ಕಂಪ್ಯೂಟರ್ ಇಲ್ಲದ ಅಂದು ಇಂತಹ ಗುಣ್ಯ ಗುಣಕಗಳನ್ನು ಕಂಡು ಹಿಡಿದಿದ್ದು ಸೋಜಿಗ.

ಚಿಕ್ಕಲೆಕ್ಕ

ಈ ಎರಡೂ ಲೆಕ್ಕ ಮಾಡಿದಾಗ ನಮಗೆ ದೊರೆಯುವುದು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂದಿನ ದಿನಾಂಕಗಳೇ. ಗುಣಿಸಿ ನೋಡಿ.

1. 148001X4=

2. 74003X8=

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರಗಳಿಗೆ ಅಕ್ಷರಪಟ್ಟಿಯಿಂದ ಅಕ್ಷರ ಆಯ್ದು ತುಂಬಿ ಅರ್ಥಬದ್ಧ ಪದ ಮಾಡಿ.

ಅಕ್ಷರ ಪಟ್ಟಿ				
ವಿ	ತ	ಬೆ	ಹು	ಚ
ನಿ	ಸಂ	ಥ	ಪ್ರ	ಕೊ

1		ಧಾ	ನ
2		ಧಾ	ನ
3		ಧಾ	ನ
4		ಧಾ	ನ
5		ಳ	ಕು
6		ಳ	ಕು
7		ಳ	ಕು
8		ಳ	ಕು
9		ಳ	ಕು
10		ಳ	ಕು

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಪೂ	ಸ	ಪೂ	ಹ
ಮಾ	ಪ	ನೀ	ಸು
ಆ	ಸ	ವಿ	ಸ

1

	ರೈ	ಕೆ
	ರೈ	ಕೆ

2

	ರ	ಕ
	ರ	ಕ

3

	ರ	ಪ
	ರ	ಪ

4

	ರಾ	ಗ
	ರ	ಗ

5

	ರಿ	ಸು
	ರಿ	ಸು

6

	ರೂ	ಪ
	ರೂ	ಪ

ಪದ–ಶೋಧ

ಇಲ್ಲಿರುವ ಪ್ರತಿಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಮಹಿಳಾ ಪೊಲೀಸ್ ಅಧಿಕಾರಿಯ ಹೆಸರನ್ನು ಹುಡುಕಿ

1. ಕಿಲಾಡಿ ಜೋಡಿ
2. ಶರಪಂಜರ
3. ಶರಣವಾಣಿ
4. ಗಿಡಿದಬೇರು
5. ನೀರಿನ ಗುಂಡಿ

....

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸ–ಪದಬಂಧ: 1.ಸುರಂಗ–ತರಂಗ 2.ಚವತಿ–ಸವತಿ 3.ಕಂಬಳಿ–ಹೋಬಳಿ 4.ಕಂಬಳ–ಕುಂಬಳ 5.ಕೂಡಲ–ಮೂಡಲ 6.ಆಣತಿ–ಪಣತಿ

ತಿರುಚುಳಿ ಮುರುಚುಳಿ: 1.ಗದಗ 2.ನಯನ 3.ಸಮಾಸ 4.ಸಮೋಸ 5.ಕನಕ 6.ಕಟಕ 7.ಸರಸ 8.ಕಳಂಕ 9.ನರ್ತನ 10.ನಮನ

ಪದಶೋಧ: ವಾಣಿಜಯರಾಮ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಮನ್ವಿತಾ ಸಿ.ಎ.
ಚಿತ್ರದುರ್ಗ

ಭುವನ್ ಪಾಟೀಲ್ ಎಂ.ಆರ್., ಹೊನ್ನಾಳಿ

ಸುಗ್ಗಿ ಜೆ.
ಬೆಂಗಳೂರು

ವೇದಶ್ರೀ ಜೋಡಟ್ಟಿ
ರಾಯಬಾಗ

ಕವನ ಆರ್.
ಬೆಂಗಳೂರು

ನಂದಿತಾ ಎಸ್.ಎಂ.
ಬೆಂಗಳೂರು

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ; ಸೆಮಿಯಲ್ಲಿ ಭಾರತಕ್ಕೆ ಕೊರಿಯಾ ಎದುರಾಳಿ

ಹರ್ಮನ್ 2 ಗೋಲು, ಪಾಕ್ ಸೋಲು

ಹುಲುನ್‌ಬುಯಿರ್ (ಚೀನಾ), (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಮತ್ತೊಮ್ಮೆ ಭಾರತ ತಂಡದ ಗೆಲುವಿನಲ್ಲಿ ಮುಂಚೂಣಿ ಪಾತ್ರ ವಹಿಸಿದರು. ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ತಂಡ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡದ ಮೇಲೆ 2–1ರಿಂದ ಜಯ ಪಡೆಯಿತು.

ತನ್ಮೂಲಕ ಆರು ತಂಡಗಳ ರೌಂಡ್ ರಾಬಿನ್ ಲೀಗ್ ಅನ್ನು ಐದು ಗೆಲುವುಗಳೊಂದಿಗೆ ಪೂರೈಸಿತು.ಇದು ಪಾಕಿಸ್ತಾನಕ್ಕೆ ಈ ಟೂರ್ನಿಯಲ್ಲಿ ಮೊದಲ ಸೋಲು.

ಸೋಮವಾರ ನಡೆಯುವ ಸೆಮಿಫೈನಲ್ ಪಂದ್ಯಗಳಲ್ಲಿ ಭಾರತ ದಕ್ಷಿಣ ಕೊರಿಯಾ ವಿರುದ್ಧ; ಪಾಕಿಸ್ತಾನ ಆತಿಥೇಯ ಚೀನಾ ವಿರುದ್ಧ ಆಡಲಿವೆ.

ಎಂಟನೇ ನಿಮಿಷ ಅಹ್ಮದ್ ನದೀಮ್ ಗಳಿಸಿದ ಗೋಲಿನಿಂದ ಪಾಕಿಸ್ತಾನ ಮುನ್ನಡೆ ಪಡೆಯಿತು. ಆದರೆ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸಿದ ಹರ್ಮನ್‌ಪ್ರೀತ್ ತಂಡದ ಅಜೇಯ ದಾಖಲೆ ಮುಂದುವರಿಸಿದರು.

ಈ ಗೆಲುವಿನ ಮೂಲಕ, ಭಾರತ 2016ರ ನಂತರ ನೆರೆಯ ರಾಷ್ಟ್ರ ಜೊತೆಗಿನ ಮುಖಾಮುಖಿಯಲ್ಲಿ ತನ್ನ ಗೆಲುವಿನ ದಾಖಲೆ ಉತ್ತಮ ಪಡಿಸಿಕೊಂಡಿತು.

ಇತ್ತಂಡಗಳ ನಡುವೆ ಈ ಹಿಂದಿನ ಪಂದ್ಯಗಳ ರೀತಿ, ಶನಿವಾರದ ಪಂದ್ಯವೂ ಬಿರುಸಿನಿಂದ ಸಾಗಿತು. ಭಾರತ ಹಿಡಿತ ಪಡೆಯಲು ಯತ್ನಿಸಿದರೂ, ಪಾಕಿಸ್ತಾನವು ಪಂದ್ಯ ಮುಂದುವರಿಯುತ್ತಿದ್ದಂತೆ ವಿಶ್ವಾಸ ಹೆಚ್ಚಿಸಿಕೊಂಡಿತು. ಮೊದಲ ಗೋಲನ್ನೂ ಗಳಿಸಿತು.

ಹನ್ನನ್ ಶಹೀದ್ ಮಿಡ್‌ಫೀಲ್ಡ್‌ನಿಂದ ಕೌಶಲಪೂರ್ಣವಾಗಿ ಭಾರತದ ರಕ್ಷಣಾ ಆಟಗಾರರನ್ನು ತಪ್ಪಿಸಿಕೊಂಡು ಚೆಂಡನ್ನು ಮುನ್ನಡೆಸಿ, ಆಯಕಟ್ಟಿನ ಸ್ಥಾನದಲ್ಲಿ ಕಾಯುತ್ತಿದ್ದ ನದೀಮ್ ಅವರಿಗೆ ದಾಟಿಸಿದರು. ನದೀಮ್ ತಮಗೊಲಿದ ಅವಕಾಶ ವ್ಯರ್ಥಪಡಿಸಲಿಲ್ಲ.

ಇದರಿಂದ ಕ್ಷಣಕಾಲ ವಿಚಲಿತಗೊಂಡರೂ ಭಾರತ ಧೃತಿಗೆಡಲಿಲ್ಲ. ಸಹನೆಯಿಂದ ಆಡಿ ಭಾರತ 13ನೇ ನಿಮಿಷ ಮೊದಲ ಪೆನಾಲ್ಟಿ ಕಾರ್ನರ್ ಗಿಟ್ಟಿಸಿಕೊಂಡಿತು. ಇದರಲ್ಲಿ ಶಕ್ತಿಶಾಲಿ ಡ್ರ್ಯಾಗ್‌ಫ್ಲಿಕ್ ಮೂಲಕ ಹರ್ಮನ್‌ಪ್ರೀತ್, ಪಾಕ್ ಗೋಲ್‌ಕೀಪರ್ ಮುನೀಬ್ ಅವರ ಎಡಗಡೆಯಿಂದ ಚೆಂಡನ್ನು ಗೋಲಿನೊಳಕ್ಕೆ ನಿರ್ದೇಶಿಸಿದರು. ಸ್ಕೋರ್ ಸಮನಾಯಿತು.

ಎರಡನೇ ಕ್ವಾರ್ಟರ್‌ನಲ್ಲೂ ಭಾರತ ಒತ್ತಡ ಮುಂದುವರಿಸಿತು. 19ನೇ ನಿಮಿಷ ದೊರೆತ ಎರಡನೇ ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ಅವರು ಪಾಕ್ ರಕ್ಷಣೆಯನ್ನು ಮತ್ತೊಮ್ಮೆ ಭೇದಿಸಿ ಚೆಂಡನ್ನು ಗುರಿತಲುಪಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು.

ಎರಡನೇ ಕ್ವಾರ್ಟರ್‌ನಲ್ಲಿ ಚೆಂಡು ಹೆಚ್ಚು ಹೊತ್ತು ಭಾರತದ ಹಿಡಿತದಲ್ಲೇ ಇದ್ದರೂ, ಪಾಕ್ ತಂಡಕ್ಕೆ ಕೆಲವು ಅವಕಾಶಗಳು ದೊರೆತಿದ್ದವು. ವಿರಾಮಕ್ಕೆ 45 ಸೆಕೆಂಡುಗಳಿರುವಾಗ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಸುಫ್ಯಾನ್ ಖಾನ್ ಫ್ಲಿಕ್‌ನಲ್ಲಿ ಚೆಂಡು ಅಡ್ಡಪಟ್ಟಿಗೆ ಹೊಡೆದು ಗುರಿತಲುಪಿತು. ಆದರೆ 'ರೇಯ್ಡ್ ಬಾಲ್' ಎಂದು ಗೋಲು ನಿರಾಕರಿಸಲಾಯಿತು.

ಮೂರನೇ ಕ್ವಾರ್ಟರ್‌ನಲ್ಲೂ ಭಾರತ ಮೇಲುಗೈ ಸಾಧಿಸಿದರೂ, ಕೊನೆಯಲ್ಲಿ ಪಾಕ್ ಹೋರಾಟ ತೋರಿತು. ಆ ತಂಡಕ್ಕೆ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶಗಳೂ ಒದಗಿದವು. ಆದರೆ ಭಾರತದ ರಕ್ಷಣಾಕೋಟೆ ಭೇದಿಸಲಾಗಲಿಲ್ಲ.

ಕೊನೆಯ ಕ್ವಾರ್ಟರ್‌ನಲ್ಲಿ (15 ನಿಮಿಷ) ಎರಡೂ ತಂಡಗಳು ಆಕ್ರಮಣಕಾರಿ ಆಟದಲ್ಲಿ ತೊಡಗಿದವು. ಭಾರತಕ್ಕೆ ಮೂರು ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಆದರೆ ಒಂದೂ ಗೋಲಾಗಿ ಪರಿವರ್ತನೆಯಾಗಲಿಲ್ಲ.

ಪಂದ್ಯಕ್ಕೆ 'ಬಿಸಿ': ನಿರೀಕ್ಷೆಯಂತೆ ಈ ಪಂದ್ಯದಲ್ಲಿ ಕೊಂಚ ಕಾವೇರಿದ ವಾತಾವರಣವೂ ಇತ್ತು. ಪಾಕ್ ತಂಡದ ಅಶ್ರಫ್ ವಾಹೀದ್ ರಾಣಾ ಅವರು ಜುಗರಾಜ್ ಅವರನ್ನು ಭುಜದಿಂದ ತಳ್ಳಿದರು. ಕೆಳಗೆ ಬಿದ್ದ ಅವರು ಕೆಲಕ್ಷಣ ನರಳಿದರು. ಹರ್ಮನ್‌ಪ್ರೀತ್ ಮತ್ತು ಜರ್ಮನ್‌ಪ್ರೀತ್ ತಕ್ಷಣ ಅಲ್ಲಿಗೆ ಧಾವಿಸಿ ವಾದಿಸಲು ಮುಂದಾದರು. ಆದರೆ ಆನ್‌ಫೀಲ್ಡ್ ಅಂಪೈರ್‌ಗಳು, ಪಾಕ್ ನಾಯಕ ಬಟ್ ಮತ್ತು ಇತ್ತಂಡಗಳ ಕೆಲ ಆಟಗಾರರು ಪರಿಸ್ಥಿತಿ ತಿಳಿಗೊಳಿಸಿದರು. ರಾಣಾಗೆ ಹಳದಿ ಕಾರ್ಡ್ (ಎಚ್ಚರಿಕೆ) ಪ್ರದರ್ಶಿಸಲಾಯಿತು.

ಇನ್ನೊಂದು ಪಂದ್ಯ 'ಡ್ರಾ': ಮಲೇಷ್ಯಾ ಮತ್ತು ದಕ್ಷಿಣ ಕೊರಿಯಾ ತಂಡಗಳ ನಡುವೆ ಇದಕ್ಕೆ ಮೊದಲು ನಡೆದ ಪಂದ್ಯ 3–3 ಡ್ರಾ ಆಯಿತು.

ಚೀನಾದಲ್ಲಿ ನಡೆಯುತ್ತಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಶನಿವಾರ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಜಯಿಸಿದ ಭಾರತದ ಆಟಗಾರರ ಸಂಭ್ರಮ ಹಾಕಿ ಇಂಡಿಯಾ ಚಿತ್ರ

ಅತ್ಯಲ್ಪ ಅಂತರದಲ್ಲಿ ನೀರಜ್ ಕೈತಪ್ಪಿದ ಕಿರೀಟ

ಡೈಮಂಡ್ ಲೀಗ್: ಗ್ರೆನೆಡಾದ ಆ್ಯಂಡರ್ಸನ್‌ಗೆ ಪ್ರಶಸ್ತಿ

ಬ್ರಸೆಲ್ಸ್ (ಎಎಫ್‌ಪಿ): ಭಾರತದ ಅಥ್ಲೀಟ್ ನೀರಜ್ ಚೋಪ್ರಾ ಅವರು ಶನಿವಾರ ಇಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಗಳಿಸಿದರು. ಗ್ರೆನೆಡಾದ ಪೀಟರ್ಸ್ ಆ್ಯಂಡರ್ಸನ್ ಅವರಿಗೆ ನಿಕಟ ಪೈಪೋಟಿಯೊಡ್ಡಿದ ನೀರಜ್ ಕೇವಲ 1 ಸೆಂಟಿಮೀಟರ್ ಅಂತರದಲ್ಲಿ ಡೈಮಂಡ್ ಟ್ರೋಫಿ ಜಯವನ್ನು ಕೈತಪ್ಪಿಸಿಕೊಂಡರು. ಪೀಟರ್ಸ್ ಪ್ರಥಮ ಸ್ಥಾನ ಪಡೆದರು.

ಆ್ಯಂಡರ್ಸನ್ ಅವರು ತಮ್ಮ ಮೊದಲ ಎಸೆತದಲ್ಲಿಯೇ 87.87 ಮೀಟರ್ಸ್ ದೂರದ ಸಾಧನೆ ಮಾಡಿದರು. ನೀರಜ್ ತಮ್ಮ ಮೂರನೇ ಥ್ರೋನಲ್ಲಿ 87.86 ಮೀ ಸಾಧನೆ ಮಾಡಿದರು. ಅತ್ಯಲ್ಪ ಅಂತರದಲ್ಲಿ ಪೀಟರ್ಸನ್ ಅವರಿಗಿಂತ ಹಿಂದುಳಿದರು. ನಂತರದ ಮೂರು ಎಸೆತಗಳಲ್ಲಿ ನೀರಜ್ ಕ್ರಮವಾಗಿ 82.04 ಮೀ, 83.30 ಮೀ ಹಾಗೂ 86.46 ಮೀ ದೂರ ಥ್ರೋ ಮಾಡಿದರು.

ಜರ್ಮನಿಯ ಜೂಲಿಯನ್ ವೇಬರ್ ಅವರು 85.87 ಮೀ ದೂರ ಥ್ರೋ ಮಾಡಿ ಮೂರನೇ ಸ್ಥಾನ ಪಡೆದರು. ನೀರಜ್ ಅವರು ಈ ಸಾಧನೆಯೊಂದಿಗೆ ಡೈಮಂಡ್ ಲೀಗ್‌ನಲ್ಲಿ ಪದಕ ಜಯದ ಹ್ಯಾಟ್ರಿಕ್ ಮಾಡಿದರು.

ನೀರಜ್ ಅವರು 2022ರಲ್ಲಿ ಜ್ಯೂರಿಚ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್ ಕೂಟದಲ್ಲಿ ಪ್ರಥಮ ಮತ್ತು 2023ರಲ್ಲಿ ಯುಗೇನ್‌ನಲ್ಲಿ ನಡೆದಾಗ ದ್ವಿತೀಯ ಸ್ಥಾನ ಗಳಿಸಿದ್ದರು.

ಅವರು ಈಚೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. 2020ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು.

ಭಾರತದ ನೀರಜ್ ಚೋಪ್ರಾ

ಪ್ರಥಮ್ ಸಿಂಗ್, ತಿಲಕ್ ಶತಕ

ದುಲೀಪ್ ಟ್ರೋಫಿ ಕ್ರಿಕೆಟ್: ಭಾರತ ಡಿ ತಂಡಕ್ಕೆ ಕಠಿಣ ಗುರಿ

ಅನಂತಪುರ (ಪಿಟಿಐ): ಪ್ರಥಮ್ ಸಿಂಗ್ ಮತ್ತು ತಿಲಕ್ ವರ್ಮಾ ಅವರಿಬ್ಬರೂ ಗಳಿಸಿದ ಶತಕದ ಬಲದಿಂದ ಭಾರತ ಎ ತಂಡವು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತ ಡಿ ತಂಡಕ್ಕೆ ಕಠಿಣ ಗುರಿ ನೀಡಿದೆ.

ಪಂದ್ಯದ ಮೂರನೇ ದಿನವಾದ ಶನಿವಾರ ಭಾರತ ಎ ತಂಡವು ಎರಡನೇ ಇನಿಂಗ್ಸ್‌ನಲ್ಲಿ 98 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 380 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇದರೊಂದಿಗೆ ಡಿ ತಂಡಕ್ಕೆ 488 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಇದಕ್ಕುತ್ತರವಾಗಿ ಡಿ ತಂಡವು 19 ಓವರ್‌ಗಳಲ್ಲಿ 1 ವಿಕೆಟ್‌ಗೆ 62 ರನ್ ಗಳಿಸಿದೆ.

ಎ ತಂಡವು ಮೊದಲ ಇನಿಂಗ್ಸ್‌ನಲ್ಲಿ 107 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಪ್ರಥಮ್ (122; 189ಎ, 4X12, 6X1) ಮತ್ತು ತಿಲಕ್ ವರ್ಮಾ (ಔಟಾಗದೆ 111; 193ಎ, 4X9) ಶತಕಗಳನ್ನು ದಾಖಲಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 104 ರನ್ ಸೇರಿಸಿದರು.

ಇದಕ್ಕೂ ಮುನ್ನ ಪ್ರಥಮ್ ಅವರು ಮಯಂಕ್ ಅಗರವಾಲ್ ಅವರೊಂದಿಗೆ ಶತಕದ ಜೊತೆಯಾಟವಾಡಿದ್ದರು. ಎರಡನೇ ದಿನದಾಟದ ಅಂತ್ಯಕ್ಕೆ ಅರ್ಧಶತಕ ಗಳಿಸಿದ್ದ ಪ್ರಥಮ್ (59 ರನ್) ಕ್ರೀಸ್‌ನಲ್ಲಿದ್ದರು. ಶನಿವಾರ ಬೆಳಿಗ್ಗೆಯೂ ತಮ್ಮ ಚೆಂದದ ಬ್ಯಾಟಿಂಗ್ ಮುಂದುವರಿಸಿದರು. ಒಟ್ಟು 149 ಎಸೆತಗಳಲ್ಲಿ 100 ರನ್ ಗಳಿಸಿದರು. ರೈಲ್ವೆ ತಂಡದಲ್ಲಿ ಆಡುವ 32 ವರ್ಷದ ಪ್ರಥಮ್ ಅವರು ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಎಸೆತದಲ್ಲಿ ಔಟಾದರು.

ಇನ್ನೊಂದೆಡೆ ತಿಲಕ್ ವರ್ಮಾ ಅವರು ಚುರುಕಾಗಿ ಬ್ಯಾಟಿಂಗ್ ಮಾಡಿದರು. ಭಾರತದ ಎಲ್ಲ ಮಾದರಿಗಳ ಕ್ರಿಕೆಟ್ ಆಟಗಾರ ಎಂದು ರೋಹಿತ್ ಶರ್ಮಾಅವರಿಂದಮೆಚ್ಚುಗೆಗೆಪಾತ್ರವಾಗಿರುವ ತಿಲಕ್ ಇಲ್ಲಿ ತಮ್ಮ ಪ್ರತಿಭೆ ಮೆರೆದರು.

96 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನಂತರದ 50 ರನ್‌ಗಳನ್ನು 81 ಎಸೆತಗಳಲ್ಲಿ ಪೂರೈಸಿದರು. 57.51ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಶತಕ ದಾಖಲಿಸಿದರು. ಅವರು ರಿಯಾನ್ ಪರಾಗ್ (20 ರನ್) ಜೊತೆಗೆ ಮೂರನೇ ವಿಕೆಟ್ ಪಾಲುದಾರಿಕೆಯಲ್ಲಿ 45 ರನ್ ಸೇರಿಸಿದರು. ಊಟದ ನಂತರ ರಿಯಾನ್ ಔಟಾದರು. ಆಗ ತಿಲಕ್ ಜೊತೆಗೂಡಿದ ಶಾಶ್ವತ್ ರಾವತ್ (64; 88ಎ, 4X7) ಆಟದ ದಿಕ್ಕನ್ನೇ ಬದಲಿಸಿಬಿಟ್ಟರು. ರನ್ ಗಳಿಕೆಗೆ ರಾಕೆಟ್ ವೇಗ ನೀಡಿದರು. ಇದರಿಂದಾಗಿ ದೊಡ್ಡ ಗುರಿ ಒಡ್ಡಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 84.3 ಓವರ್‌ಗಳಲ್ಲಿ 290. ಭಾರತ ಡಿ: 52.1 ಓವರ್‌ಗಳಲ್ಲಿ 183. ಎರಡನೇ ಇನಿಂಗ್ಸ್: ಭಾರತ ಎ: 98 ಓವರ್‌ಗಳಲ್ಲಿ 3ಕ್ಕೆ380 ಡಿಕ್ಲೇರ್ (ಪ್ರಥಮ್ ಸಿಂಗ್ 122, ತಿಲಕ್ ವರ್ಮಾ 111, ಶಾಶ್ವತ್ ರಾವತ್ 64, ರಿಯಾನ್ ಪರಾಗ್ 20, ಸೌರಭ್ ಕುಮಾರ್ 110ಕ್ಕೆ2) ಭಾರತ ಡಿ: 19 ಓವರ್‌ಗಳಲ್ಲಿ 1 ವಿಕೆಟ್‌ಗೆ 62 (ಯಶ್ ದುಬೆ ಔಟಾಗದೆ 15, ರಿಕಿ ಭುಯ್ ಔಟಾಗದೆ 44, ಖಲೀಲ್ ಅಹಮದ್ 17ಕ್ಕೆ1)

ತಿಲಕ್ ವರ್ಮಾ ಬ್ಯಾಟಿಂಗ್ ವೈಖರಿ ಸಂಗ್ರಹ ಚಿತ್ರ

ಬಲ ತುಂಬಿದ ಅಭಿಮನ್ಯು ಈಶ್ವರನ್

ಅನಂತಪುರ (ಪಿಟಿಐ): ಶತಕ ಗಳಿಸಿದ ಆರಂಭಿಕ ಬ್ಯಾಟರ್ ಅಭಿಮನ್ಯು ಈಶ್ವರನ್ ಅವರು ಭಾರತ ಬಿ ತಂಡದ ಹೋರಾಟಕ್ಕೆ ಬಲ ತುಂಬಿದರು. ಆದರೂ ಸಿ ತಂಡದ ಎದುರು ಫಾಲೋ ಆನ್ ತಪ್ಪಿಸಿಕೊಳ್ಳಲು ಬಿ ತಂಡಕ್ಕೆ ಇನ್ನೂ 66 ರನ್‌ಗಳ ಅಗತ್ಯವಿದೆ.

ಸಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 525 ರನ್ ಗಳಿಸಿತು. ಮೂರನೇ ದಿನದಾಟದ ಕೊನೆಯಲ್ಲಿ ಬಿ ತಂಡವು 101 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 309 ರನ್ ಗಳಿಸಿದೆ. ಅಭಿಮನ್ಯು (ಔಟಾಗದೆ 143; 262ಎ, 4X12, 6X1) ಶತಕ ದಾಖಲಿಸಿದರು. ಎನ್. ಜಗದೀಶ್ (70; 137ಎ) ಅರ್ಧಶತಕ ಗಳಿಸಿದರು. ಇವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 129 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಸಿ: 124.1 ಓವರ್‌ಗಳಲ್ಲಿ 525, ಭಾರತ ಬಿ: 101 ಓವರ್‌ಗಳಲ್ಲಿ 7ಕ್ಕೆ309 (ಅಭಿಮನ್ಯು ಈಶ್ವರನ್ ಔಟಾಗದೆ 143, ನಾರಾಯಣ ಜಗದೀಶನ್ 70, ಸಾಯಿಕಿಶೋರ್ 21, ರಾಹುಲ್ ಚಾಹರ್ ಔಟಾಗದೆ 18, ಅನ್ಷುಲ್ ಕಾಂಬೋಜ್ 66ಕ್ಕೆ5, ವೈಶಾಖ ವಿಜಯಕುಮಾರ್ 67ಕ್ಕೆ1)

ಭಾರ್ಗವ್ ಸ್ಪಿನ್ ಮೋಡಿಗೆ ಕುಸಿದ 'ಕೋಲ್ಟ್ಸ'

ಪ್ರಜಾವಾಣಿ ವಾರ್ತೆ

ಮೈಸೂರು: ಬರೋಡಾ ಕ್ರಿಕೆಟ್ ಸಂಸ್ಥೆಯ ಭಾರ್ಗವ್ ಭಟ್ (64ಕ್ಕೆ 6) ಸ್ಪಿನ್ ಎದುರು ಕೆಎಸ್‌ಸಿಎ ಕೋಲ್ಟ್ಸ ತಂಡವು ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಶನಿವಾರ ಆರಂಭಗೊಂಡ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಅಲ್ಪ ಮೊತ್ತಕ್ಕೆ ಕುಸಿಯಿತು.

ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಎಸ್‌ಸಿ ಕೋಲ್ಟ್ಸ 202ಕ್ಕೆ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ದಿನದಾಟದ ಅಂತ್ಯಕ್ಕೆ ಬರೋಡಾ ಕ್ರಿಕೆಟ್ ಸಂಸ್ಥೆ 1 ವಿಕೆಟ್‌ಗೆ 93 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ: 62.3 ಓವರ್‌ಗಳಲ್ಲಿ 202 (ಎಸ್.ಯು. ಕಾರ್ತಿಕ್ 20, ಎಂ.ಬಿ. ಶಿವಂ 22, ಹರ್ಷಿಲ್ 58. ಪಿ. ಧ್ರುವ್ 29. ಭಾರ್ಗವ್ ಭಟ್ 64ಕ್ಕೆ 6, ಅಭಿಮನ್ಯು ಸಿಂಗ್ 52ಕ್ಕೆ 2). ಬರೋಡಾ ಕ್ರಿಕೆಟ್ ಸಂಸ್ಥೆ: 27 ಓವರ್‌ಗಳಲ್ಲಿ 1 ವಿಕೆಟ್‌ಗೆ 93 (ಕಿನಿತ್ ಪಟೇಲ್ ಔಟಾಗದೆ 50, ಪ್ರಿಯಾಂಶು 28, ಧೀರಜ್ ಗೌಡ 13ಕ್ಕೆ 1)

ಎಸ್‌ಜೆಸಿಇ ಕ್ರೀಡಾಂಗಣ: ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ: 53.3 ಓವರ್‌ಗಳಲ್ಲಿ 262 (ಆಯುಷ್ ಬದೊನಿ 72, ಪಾರ್ಥ್ ಸಹಾನಿ 71. ಸುನಿಲ್ ರೌಲ್ 62ಕ್ಕೆ 3, ತಪಸ್ ದಾಸ್ 56ಕ್ಕೆ 4). ಒಡಿಶಾ ಕ್ರಿಕೆಟ್ ಸಂಸ್ಥೆ: 22 ಓವರ್‌ಗಳಲ್ಲಿ 5 ವಿಕೆಟ್‌ಗೆ 88 (ವಿಶ್ವಭೂಷಣ್ 26, ಕೆ. ಸಂದೀಪ್ ಔಟಾಗದೆ 46)

'ಆಟಗಾರರ ಆಯ್ಕೆ ನಿಯಮ ಉಲ್ಲಂಘನೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೆಎಸ್‌ಸಿಎ ಧಾರವಾಡ ವಲಯದ 16 ವರ್ಷದ ಒಳಗಿನವರ ತಂಡದ ಆಯ್ಕೆ ನಿಯಮದಂತೆ ನಡೆಸಿಲ್ಲ. ಆಟಗಾರರಿಗೆ ಅನ್ಯಾಯವಾಗಿದೆ' ಎಂದು ಕೋಚ್ ಪ್ರಮೋದ್ ಕಾಮತ್ ಶನಿವಾರ ಆರೋಪಿಸಿದರು.

'ಸೆ.17ರಿಂದ ಬೆಂಗಳೂರಿನಲ್ಲಿ 16 ವರ್ಷದೊಳಗಿನವರ ಅಂತರ ವಲಯ ಕ್ರಿಕೆಟ್ ಟೂರ್ನಿ ನಡೆಯಲಿದೆ. ಲೀಗ್ ಹಂತದ ಪಂದ್ಯಗಳನ್ನು ಸಮರ್ಪಕವಾಗಿ ನಡೆಸದೆ ಈ ಟೂರ್ನಿಗೆ ಆಟಗಾರರನ್ನು ಆಯ್ಕೆ ಮಾಡಲಾಗಿದೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಕೋಚ್ ಜಯರಾಜ್ ನೂಲ್ವಿ ಮಾತನಾಡಿ, 'ಆಯ್ಕೆಯಲ್ಲಿ ನಿಖಿಲ್ ಭೂಸದ್ ಹಸ್ತಕ್ಷೇಪ ಮಾಡುತ್ತಾರೆ. ಆಡುವ ಹನ್ನೊಂದರ ಬಳಗದಲ್ಲಿ ಯಾರಿರಬೇಕು ಎಂಬುದನ್ನು ಇವರೇ ನಿರ್ಧರಿಸುತ್ತಾರೆ. ಅವರನ್ನು ನಿಮಂತ್ರಕ ಸ್ಥಾನದಿಂದ ಕೆಳಗಿಳಿಸಬೇಕು. ಅನ್ಯಾಯವನ್ನು ಸರಿಪಡಿಸದಿದ್ದರೆ ನ್ಯಾಯಾಲಯದ ಮೊರೆ ಹೋಗಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದರು.

ಹಸ್ತಕ್ಷೇಪವಿಲ್ಲ: ಮಳೆ ನಡುವೆಯೂ 21 ಲೀಗ್ ಪಂದ್ಯಗಳನ್ನು ನಡೆಸಲಾಗಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಹಸ್ತಕ್ಷೇಪ ಮಾಡಿಲ್ಲ ಎಂದು ಕೆಎಸ್‌ಸಿಎ ಧಾರವಾಡ ವಲಯದ ನಿಮಂತ್ರಕ ನಿಖಿಲ್ ಭೂಸದ್ ಹೇಳಿದ್ದಾರೆ.

ಬಿಎಫ್‌ಸಿ ತಂಡದ ವಿನೀತ್ ವೆಂಕಟೇಶ್ (ನೀಲಿ ಪೋಷಾಕು) ಗೋಲು ಗಳಿಸುವ ಪ್ರಯತ್ನ ಮಾಡಿದರು ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಬಿಎಫ್‌ಸಿ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನೀತ್ ವೆಂಕಟೇಶ್ ಅವರು ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 1–0ಯಿಂದ ಈಸ್ಟ್ ಬೆಂಗಾಲ್ ವಿರುದ್ಧ ಗೆದ್ದಿತು.

ಪಂದ್ಯದಲ್ಲಿ ಆರಂಭದಿಂದಲೂ ಉಭಯ ತಂಡಗಳು ತುರುಸಿನ ಪೈಪೋಟಿ ನಡೆಸಿದವು. 25ನೇ ನಿಮಿಷದಲ್ಲಿ ವಿನಿತ್ ಕಾಲ್ಚಳಕ ಮೆರೆದರು. ಈಸ್ಟ್ ಬೆಂಗಾಲ್ ತಂಡದ ಗೋಲ್‌ಕೀಪರ್ ಪ್ರಭಸುಖನ್ ಸಿಂಗ್ ಅವರನ್ನು ವಂಚಿಸಿದ ವಿನಿತ್ ಗೋಲು ಗಳಿಸಿದರು. ಇದರ ನಂತರ ಬಿಎಫ್‌ಸಿ ತಂಡದ ರಕ್ಷಣಾ ಆಟಗಾರರು ಅಮೋಘವಾದ ಆಟವಾಡಿದರು.

ಈಸ್ಟ್ ಬೆಂಗಾಲ್ ತಂಡದ ಸ್ಟ್ರೈಕರ್ಸ್‌ಗಳ ಹಲವು ಪ್ರಯತ್ನಗಳು ವಿಫಲವಾದವು. ಸುನಿಲ್ ಚೆಟ್ರಿ ನಾಯಕತ್ವದ ತಂಡವು ಪಾರಮ್ಯ ಮೆರೆಯಿತು.

ಚೆನ್ನೈಯಿನ್‌ಗೆ ಜಯ: ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಸಂಜೆ ನಡೆದ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ತಂಡವು 3–2ರಿಂದ ಒಡಿಶಾ ಎಫ್‌ಸಿ ವಿರುದ್ಧ ಜಯಿಸಿತು.

ಚೆನ್ನೈಯಿನ್ ತಂಡದ ಫರೂಕ್ ಚೌಧರಿ (48ನಿ, 51ನಿ) ಎರಡು ಮತ್ತು ಡೇನಿಯಲ್ ಚಿಮಾ ಚುಕ್ವು (69ನಿ) ಒಂದು ಗೋಲು ಗಳಿಸಿದರು. ಒಡಿಶಾದ ಡಿಯೆಗೊ ಮಾರ್ಸಿಯೊ (9ನಿ) ಪೆನಾಲ್ಟಿಯಲ್ಲಿ ಗೋಲು ಹೊಡೆದರು. ರಾಯಲ್ ಕೃಷ್ಣ (90 + 5ನಿ) ಗೋಲು ಗಳಿಸಿದರು.